ವಾರ್ಷಿಕ ವರದಿ
ANNUAL REPORT
2017-18



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
Karnataka State Pollution Control Board




ಜನ ಜೋಡಣೆ


ವಿಶ್ವ ಪರಿಸರ ದಿನಾಚರಣೆ




ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳ
ಪರಿಸರ ಜಾಥಾ ಕಾರ್ಯಕ್ರಮ

ವಾರ್ಷಿಕ ವರದಿ
೨೦೧೭-೧೮



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
"ಪರಿಸರ ಭವನ"

#49, ಚರ್ಚ್ ಸ್ಟ್ರೀಟ್, ಬೆಂಗಳೂರು – 560001

ಪರಿವಿಡಿ

ಅಧ್ಯಾಯ	ವಿಷಯಗಳು		ಪುಟ ಸಂಖ್ಯೆ
ಅಧ್ಯಾಯ 1		ಪರಿಚಯ	
	1.1	ಸಾಂಸ್ಥಿಕ ಸಂರಚನೆ	1–2
	1.2	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೊಂದಿರುವ ಮೂಲಸೌಲಭ್ಯಗಳು	2–3
	1.3	ಪ್ರಯೋಗಾಲಯ	3
	1.4	ಪ್ರಮುಖ ಪರಿಸರ ಕಾನೂನುಗಳ ಅನುಷ್ಠಾನ	4
ಅಧ್ಯಾಯ 2		ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಚನೆ	
	2.1	ದಿನಾಂಕ 31.03.2018 ಕ್ಕೆ ಅನ್ವಯವಾಗುವಂತೆ ಮಂಡಳಿಯ ಸಂಯೋಜನೆ	5–6
ಅಧ್ಯಾಯ 3		ರಾಜ್ಯ ಮಂಡಳಿಯಿಂದ ರಚಿಸಲ್ಪಟ್ಟ ಸಮಿತಿಗಳು ಮತ್ತು ನಡೆಸಲಾದ ಸಭೆಗಳು	
	3.1	ತಾಂತ್ರಿಕ ಸಲಹಾ ಸಮಿತಿ	7
	3.2	ಪ್ರಯೋಗಾಲಯ ಮತ್ತು ಗ್ರಂಥಾಲಯ ಸಮಿತಿ	7–8
	3.3	ರಾಜ್ಯ ಮಟ್ಟದ ಸಮ್ಮತಿ ಪತ್ರ ಸಮಿತಿ	8
	3.4	ಎಂಪವರ್ಡ್ ಸಮಿತಿ	8–9
	3.4	ಜಾಗೃತಿ ಸಮಿತಿ	9
	3.5	ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರ ಅನ್ವಯ ಅಧಿಕಾರ ಪತ್ರ ನೀಡಿಕೆ ಸಮಿತಿ	9
ಅಧ್ಯಾಯ 4		ರಾಜ್ಯ ಮಂಡಳಿಯ ಸಭೆಗಳು	10
ಅಧ್ಯಾಯ 5 ಎ		ಮಂಡಳಿಯ ಚಟುವಟಿಕೆಗಳು ಹಾಗೂ ಜಲ ಮತ್ತು ವಾಯು ಕಾಯ್ದೆ 17ನೇಯ ಉಪಬಂಧದ ಅಡಿಯಲ್ಲಿ ನಿರ್ವಹಿಸುವ ವಿವಿಧ ಕಾರ್ಯಚಟುವಟಿಕೆಗಳು	
	5ಎ.1	ಮಂಡಳಿಯ ಕಾರ್ಯಭಾರಗಳು	11–12
	5ಎ.2	2017–18 ನೇ ಸಾಲಿನ ಮಂಡಳಿಯ ಚಟುವಟಿಕೆಗಳು	13–22
	5ಎ.3	ಪರಿಸರ ಮೇಲ್ವಿಚಾರಣೆ	22–23
	5ಎ.4	ನದಿ ನೀರು ಗುಣಮಟ್ಟ ಮೇಲ್ವಿಚಾರಣೆ	23–25
	5ಎ.5	ಕೆರೆ ನೀರು ಪರಿಶೀಲನೆ	26
	5ಎ.6	ಅಂತರ್ಜಲ ಪರಿಶೀಲನೆ	26–27
	5ಎ.7	ಪರಿವೇಷ್ಟಕ ವಾಯುಗುಣಮಟ್ಟ ಪರಿಶೀಲನೆ	27–41
	5ಎ.8	ಪರಿವೇಷ್ಟಕ ಶಬ್ದ ಮಾಪನ ಪರಿಶೀಲನೆ	42–44
ಅಧ್ಯಾಯ 5 ಬಿ		ಪ್ರಸಕ್ತ ಪರಿಸರದ ಸ್ಥಿತಿ ಮತ್ತು ಪ್ರತಿಯಾಗಿ ಕೈಗೊಳ್ಳಬೇಕಾದ ಕ್ರಮಗಳು	
	5ಬಿ.1	ಸ್ಥಳೀಯ ಸಂಸ್ಥೆಗಳು, ಅಪಾರ್ಟ್‌ಮೆಂಟುಗಳು ಮತ್ತು ವಾಣಿಜ್ಯ ಸಮುಚ್ಚಯಗಳಲ್ಲಿ ರೊಚ್ಚು ಸಂಸ್ಕರಣೆ ಮತ್ತು ಏಲೇವಾರಿಯ ಸ್ಥಿತಿ	45
	5ಬಿ.2	ಮೂಲಭೂತ ಸೌಕರ್ಯ ಯೋಜನೆಗಳು	45–47
	5ಬಿ.3	ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕ	48–54
	5ಬಿ.4	ಕಾಫೀ ತಿರುಳಿನ ಘಟಕಗಳ ಸ್ಥಿತಿಗತಿ	54
	5ಬಿ.5:	ದೂರು ಪರಿಹಾರ	55

ಅಧ್ಯಾಯ 6		**1986ರ ಪರಿಸರ (ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ರೂಪಿಸಿದ ನಿಯಮಗಳ ಅನುಷ್ಠಾನ**	
	6.1	ಅಪಾಯಕಾರಿ ಹಾಗೂ ಇತರೆ ತ್ಯಾಜ್ಯಗಳ (ನಿರ್ವಹಣೆ ಮತ್ತು ಅಂತರಗಡಿ ಸಾಗಣೆ) ನಿಯಮ, 2016 ರ ಅನುಷ್ಠಾನ	56–60
	6.2	ಬ್ಯಾಟರಿಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ, 2001 ಮತ್ತು ಅದರ 2010ರ ತಿದ್ದುಪಡಿಗಳ ಅನುಷ್ಠಾನ.	61
	6.3	ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ, ನಿಯಮ, 2016 ರ ಅನುಷ್ಠಾನ	61–62
	6.4	ವಿದ್ಯುನ್ಮಾನ ತ್ಯಾಜ್ಯ (ನಿರ್ವಹಣೆ) ನಿಯಮ, 2016 ರ ಅನುಷ್ಠಾನ	62
	6.5	ಜೀವ– ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮ,2016 ರ ಅನುಷ್ಠಾನ	63
	6.6	ಘನತ್ಯಾಜ್ಯ ನಿರ್ವಹಣಾ ನಿಯಮಗಳು, 2016 ರ ಅನುಷ್ಠಾನ	63–65
	6.7	ನಿರ್ಮಾಣ ಹಾಗೂ ಕೆಡಹುವಿಕೆ ತ್ಯಾಜ್ಯ ನಿಯಮ, 2016 ರ ಅನುಷ್ಠಾನ	65
	6.8	ಕಸಾಯಿ ಖಾನೆಗಳ ನಿಯಂತ್ರಣ	65
ಅಧ್ಯಾಯ 7		**ಕಾರ್ಯಕ್ರಮಗಳು / ವಿಚಾರ ಸಂಕೀರಣಗಳು**	
	7.1	2017–18ರಲ್ಲಿ ಮಂಡಳಿಯ ಅಧಿಕಾರಿಗಳು ಭಾಗವಹಿಸಿದ ಕಾರ್ಯಕ್ರಮಗಳು / ವಿಚಾರ ಸಂಕೀರ್ಣಗಳು.	66
	7.2	ಮಂಡಳಿ ಸಂಘಟಿಸಿದ ಜಾಗೃತಿ ಕಾರ್ಯಕ್ರಮಗಳು ಮತ್ತು ಇತರ ಸಮಾರಂಭಗಳು	66
	7.3	ವಿಶ್ವ ಪರಿಸರ ದಿನ 2017	66–67
	7.4	ಗಣೇಶ ಹಬ್ಬ 2017	67–68
	7.5	2017 ರ ದೀಪಾವಳಿ ಹಬ್ಬ	68–75
	7.6	ಮಂಡಳಿಯು ನಡೆಸಿದ ಇತರ ಜಾಗೃತಿ ಕಾರ್ಯಕ್ರಮಗಳು	76–77
ಅಧ್ಯಾಯ 8		**ಹೂಡಲಾದ ಕಾನೂನು ಕ್ರಮಗಳು ಮತ್ತು ಜಾರಿಯಾದ ಅಪರಾಧ ನಿರ್ಣಯಗಳು, ಸಾರ್ವಜನಿಕ ವಿಚಾರಣೆ, ವೈಯಕ್ತಿಕ ವಿಚಾರಣೆ, ಮತ್ತು ಮುಚ್ಚುವ / ಹಿಂಪಡೆ ನಿರ್ಣಯಗಳು**	
	8.1	ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್.ಜಿ.ಟಿ)ದಲ್ಲಿ ಹೂಡಲಾಗಿರುವ ಮೊಕದ್ದಮೆಗಳು, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು, ರಿಟ್ ಅರ್ಜಿಗಳ ವಿವರ	78
	8.2	ಪರಿಸರ ಸಾರ್ವಜನಿಕ ವಿಚಾರಣೆ	79
	8.3	ವೈಯಕ್ತಿಕ ವಿಚಾರಣೆ	79
	8.4	ಮುಚ್ಚುವ/ ಮುಚ್ಚುವ ಆದೇಶವನ್ನು ರದ್ದುಗೊಳಿಸುವ ನಿರ್ದೇಶನಗಳು	79
ಅಧ್ಯಾಯ 9		**ರಾಜ್ಯ ಮಂಡಳಿಯ ಹಣಕಾಸು ಮತ್ತು ಲೆಕ್ಕಪತ್ರಗಳು**	80
ಅಧ್ಯಾಯ **10**		**ರಾಜ್ಯ ಮಂಡಳಿಗೆ ಗಣ್ಯರ ಭೇಟಿ**	81
ಅಧ್ಯಾಯ **11**		**ಮಂಡಳಿ ನಿರ್ವಹಿಸಿದ ಇತರ ಸಂಗತಿಗಳು**	
	11.1	2018–19ನೆಯ ಸಾಲಿನ ಬಜೆಟ್ಟಿನಲ್ಲಿ ಯೋಜಿತವಾಗಿರುವ ಮುಖ್ಯ ಚಟುವಟಿಕೆಗಳು	82
	11.2	ಮಾಹಿತಿ ಹಕ್ಕು ಕಾಯ್ದೆ, 2005	82

ಅಧ್ಯಾಯ ೧
ಪರಿಚಯ

ಅಧ್ಯಾಯ - 1
ಪರಿಚಯ

ಭೂಮಿಯ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಅಲ್ಲದೆ ನೀರು ಮತ್ತು ವಾಯುವಿನ ಗುಣಮಟ್ಟವನ್ನು ಕಾಪಾಡುವ ಹಾಗೂ ನಿಯಂತ್ರಿಸುವ ಕುರಿತು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಮಾನವ ಪರಿಸರ ವಿಷಯದಲ್ಲಿ ವಿಶ್ವಸಂಸ್ಥೆಯ ಸಮ್ಮೇಳನವು ಸ್ಟಾಕ್‌ಹೋಮ್‌ನಲ್ಲಿ ಜೂನ್ 1972ರಲ್ಲಿ ನಡೆಯಿತು.

ವಿಶ್ವಸಂಸ್ಥೆಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಅನುಗುಣವಾಗಿ ನೀರಿನ ಮಾಲಿನ್ಯ ನಿವಾರಿಸಲು ಮತ್ತು ನಿಯಂತ್ರಿಸಲು ಹಾಗೂ ನೀರಿನ ಸಂಪೂರ್ಣ ಆರೋಗ್ಯಕರ ಗುಣವನ್ನು ಪುನಃ ಸ್ಥಾಪಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಉಪಕ್ರಮಗಳನ್ನು ಕೈಗೊಂಡಿದೆ. ಮೊಟ್ಟಮೊದಲನೆಯ ಪ್ರಮುಖ ಕ್ರಮವಾಗಿ ನೀರಿನ ಮಾಲಿನ್ಯವನ್ನು ನಿವಾರಿಸಲು ಮತ್ತು ನಿಯಂತ್ರಿಸಲು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಎಂಬ ಶಾಸನವನ್ನು ರಚಿಸಿ ನೀರಿನ ಮಾಲಿನ್ಯ ನಿಯಂತ್ರಣಗಳನ್ನು ಕಾನೂನಿನ ಚೌಕಟ್ಟಿಗೆ ತರಲಾಗಿದೆ.

ಜಲ ಮಾಲಿನ್ಯ ನಿವಾರಿಸಲು ಮತ್ತು ನಿಯಂತ್ರಿಸಲು ಕರ್ನಾಟಕ ರಾಜ್ಯ ಜಲ ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 (ಸಂಕ್ಷಿಪ್ತವಾಗಿ ಜಲ ಕಾಯ್ದೆ) ಎಂಬ ಶಾಸನವನ್ನು ದಿನಾಂಕ 21.9.1974 ರಂದು ಕರ್ನಾಟಕ ಸರ್ಕಾರದಿಂದ ರಚಿಸಿದೆ. ತದನಂತರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ, (1988ರ ನಿಯಮಾವಳಿ 53)ರನ್ವಯ ಮಂಡಳಿಯ ಹೆಸರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕ.ರಾ.ಮಾ.ನಿ. ಮಂಡಳಿ) ಎಂದು ಬದಲಾಯಿಸಲಾಯಿತು. ಆರಂಭದಲ್ಲಿ ಮಂಡಳಿಯ ಆಜ್ಞಾಪನೆಯು ಜಲ ಕಾಯ್ದೆ, 1974ನ್ನು ಜಾರಿಗೊಳಿಸುವುದಕ್ಕಷ್ಟೇ ಸೀಮಿತವಾಗಿತ್ತು. ತದನಂತರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಕಾಯ್ದೆ, 1977, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಅಡಿಯಲ್ಲಿ ಹಲವಾರು ನಿಯಮಗಳನ್ನು ಹಾಗೂ ಅಧಿಸೂಚನೆಗಳನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಮಂಡಳಿಗೆ ನೀಡಲಾಯಿತು.

ವರ್ಷಗಳು ಕಳೆದಂತೆ, ನಗರೀಕರಣ, ಕೈಗಾರೀಕರಣ ಮತ್ತು ಎಲ್ಲಾ ಕಾರ್ಯಕ್ಷೇತ್ರಗಳ/ ವಲಯಗಳ ಅಭಿವೃದ್ಧಿಗಳಿಗೆ ತಕ್ಕಂತೆ ಮಂಡಳಿಯ ಕಾರ್ಯ ಚಟುವಟಿಕೆಗಳು ವಿಸ್ತಾರಗೊಂಡಿವೆ. ಈ ಅಂಶಗಳು ಕರ್ನಾಟಕದ ಜೀವನ ಗುಣಮಟ್ಟ ಮತ್ತು ಆರ್ಥಿಕ ಅಭಿವೃದ್ಧಿಗಳೆರಡನ್ನೂ ನೀಡಬಲ್ಲ ಒಂದು ಪ್ರಗತಿಪರ ಲಕ್ಷ್ಯಸ್ಥಾನವನ್ನಾಗಿಸಲು ಅಗತ್ಯವಾಗಿವೆ. ಪರಿಸರಕ್ಕೆ ಕನಿಷ್ಠ ಹಾನಿ ಮತ್ತು ಸಮಾಜಕ್ಕೆ ಗರಿಷ್ಠ ಪ್ರಯೋಜನವನ್ನು ಖಚಿತಗೊಳಿಸುವ ಉದ್ದೇಶವುಳ್ಳ ವಾಯು, ಜಲ ಮತ್ತು ಪರಿಸರ ಕಾನೂನುಗಳು ಮತ್ತು ನಿಯಮಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಾರಿಗೊಳಿಸುತ್ತಿದೆ.

ಹೊರಹೊಮ್ಮುತ್ತಿರುವ ತಂತ್ರಜ್ಞಾನಗಳು ಮತ್ತು ವೈಜ್ಞಾನಿಕ ಪ್ರಗತಿಗಳು ಹಲವು ಪರಿಹಾರಗಳನ್ನು ನೀಡುತ್ತವೆ. ಮಂಡಳಿಯು ಒಂದೆಡೆ ಅಭಿವೃದ್ಧಿ ಮತ್ತು ಕೈಗಾರೀಕರಣದ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗಿದೆ, ಇನ್ನೊಂದೆಡೆ ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಣ, ಕೈಗಾರಿಕೆ ಮತ್ತು ಆಡಳಿತಗಳಲ್ಲಿ ಅತ್ಯುತ್ತಮವಾದ ಸಂಯೋಜಿತ ಪರಿಣತಿ, ನೈಪುಣ್ಯತೆ, ದೂರದೃಷ್ಟಿ ಮತ್ತು ಸಂಪನ್ಮೂಲಗಳನ್ನು ಅಣಿಗೊಳಿಸಬೇಕಾಗಿದೆ.

ಮಂಡಳಿಯು, ತನ್ನ ಪಾತ್ರವು ಕೇವಲ ಕಾನೂನು ಮತ್ತು ನಿಯಮಗಳ ಜಾರಿಗೆ ಕ್ರಮಕೈಗೊಳ್ಳುವುದನ್ನು ಮೀರಿದ್ದಾಗಿದೆ ಎಂಬುದನ್ನು ಮನಗಂಡಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನವನ ಆರೋಗ್ಯ ಮತ್ತು

ಪರಿಸರಕ್ಕೆ ಒದಗುವ ಸಂಭವನೀಯ ಅಪಾಯಗಳ ಭೀತಿಯನ್ನು ಮೊದಲೇ ಅರಿಯಲು ಭವಿಷ್ಯದತ್ತ ದೃಷ್ಟಿ ಹರಿಸಬೇಕಾದ ಅವಶ್ಯಕತೆ ಹೊಂದಿದೆ. ಸಾರ್ವಜನಿಕರು ಮತ್ತು ಸಂಬಂಧಪಟ್ಟ ಹೊಣೆಗಾರಿಕೆ ಇರುವವರಲ್ಲಿ ಜಾಗೃತಿ ಮೂಡಿಸುವ ಮೂಲಕ ಈ ಗುರಿಯನ್ನು ಸಾಧಿಸಲಾಗುತ್ತಿದೆ. ಈ ಧ್ಯೇಯಗಳನ್ನು ಈಡೇರಿಸಲು ಮಂಡಳಿಯು ಶುಭ್ರವಾದ ಗಾಳಿ; ಸುರಕ್ಷಿತ ನೀರನ್ನೊದಗಿಸುವಂತಹ ಉಪಕ್ರಮಗಳಿಂದ ಪರಿಸರದ ಸವಾಲುಗಳನ್ನೆದುರಿಸಲು ಕೆಲವು ಗುರಿಗಳನ್ನು ಇರಿಸಿಕೊಂಡಿದೆ.

ಪ್ರಸಕ್ತ ವರದಿಯು 2017–18 ರ ಹಣಕಾಸು ವರ್ಷದಲ್ಲಿನ ಮಂಡಳಿಯ ಕಾರ್ಯಗಳು ಮತ್ತು ಹಣಕಾಸು ಚಟುವಟಿಕೆಗಳನ್ನು ತಿಳಿಸುತ್ತದೆ. ಈ ವರದಿಯನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಭಾಗ 39(2) ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ಭಾಗ 35(2) ಪ್ರಕಾರ ಮಂಡಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಡಬ್ಲ್ಯು.ಪಿ.ಇಟಿಸಿಯ ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣಕ್ಕಾಗಿ ಇರುವ 1976ರ ನಿಯಮಗಳ ಪೈಕಿ 26ನೇ ನಿಯಮ ಮತ್ತು ಆರನೇ ಅಧ್ಯಾಯದಲ್ಲಿ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, ಅನುಸೂಚಿ 3, 1983ರಲ್ಲಿನ 27ನೇ ನಿಯಮವನ್ನೂ ವಾರ್ಷಿಕ ವರದಿಯಲ್ಲಿ ವಿವರಿಸಲಾಗಿದೆ. ಈ ವರದಿಯು ಫಲಿತಾಂಶಗಳಿಗೆ ಹೊಣೆಯಾಗಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಅಲ್ಲದೆ ಮಂಡಳಿ ಕಳೆದ ವರ್ಷಕ್ಕಿಂತ ಹೆಚ್ಚಾಗಿ ತನ್ನ ಗುರಿಗಳನ್ನು ಸಂಧಿಸಿದೆ ಎಂಬುದರ ಹೋಲಿಕೆಯನ್ನು ನೀಡುತ್ತದೆ. ಪರಿಸರ ಹಾಗೂ ಮಾನವ ಆರೋಗ್ಯ ಕಾಪಾಡುವ ದೀರ್ಘಾವಧಿ ಗುರಿಗಳನ್ನು ಮುಂಬರುವ ವರ್ಷವೂ ಮುಂದುವರೆಸುವ ಮಂಡಳಿಯ ಉದ್ದೇಶವನ್ನು ಅಭಿವ್ಯಕ್ತಪಡಿಸುತ್ತಿದೆ.

1.1: ಸಾಂಸ್ಥಿಕ ಸಂರಚನೆ

ಮಂಡಳಿಯ ಸಾಂಸ್ಥಿಕ ಸಂರಚನೆಯನ್ನು **ಅನುಬಂಧ– I** ರಲ್ಲಿ ನೀಡಲಾಗಿದೆ.

ಮಂಡಳಿಯ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿದೆ. 44 ಪ್ರಾದೇಶಿಕ ಕಚೇರಿಗಳು ಮತ್ತು 10 ವಲಯ ಕಚೇರಿಗಳು ರಾಜ್ಯದಾದ್ಯಂತ ಹರಡಿಕೊಂಡಿದ್ದು, ಇದರಿಂದ ಮಂಡಳಿಯು ಸಂಬಂಧಿಸಿದವರ ಸಮೀಪದಲ್ಲಿದ್ದು, ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥವಾಗಿದೆ. ಪ್ರಾದೇಶಿಕ ಕಛೇರಿಗಳಿಗೆ ಪ್ರಾದೇಶಿಕ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಹಿರಿಯ ಪರಿಸರ ಅಧಿಕಾರಿಗಳು ವಲಯ ಕಚೇರಿಗಳ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರಿನಲ್ಲಿ ನಾಲ್ಕು ವಲಯ ಕಛೇರಿಗಳಿವೆ; ಉಳಿದಂತೆ ಮೈಸೂರು, ಧಾರವಾಡ, ಬಳ್ಳಾರಿ, ಮಂಗಳೂರು, ಚಿತ್ರದುರ್ಗ ಮತ್ತು ಕಲಬುರ್ಗಿಗಳಲ್ಲಿ ವಲಯ ಕಛೇರಿಗಳಿವೆ. ಕೇಂದ್ರ ಕಛೇರಿ, ಕೇಂದ್ರ ಪ್ರಯೋಗಾಲಯ, ವಲಯ ಮತ್ತು ಪ್ರಾದೇಶಿಕ ಕಛೇರಿಗಳ ವಿಳಾಸಗಳನ್ನು **ಅನುಬಂಧ– II** ರಲ್ಲಿ ನೀಡಲಾಗಿದೆ.

ಮಂಡಳಿಯ 334 ಖಾಯಂ ಸಿಬ್ಬಂದಿಯನ್ನು ಹೊಂದಿದೆ. ಸಿಬ್ಬಂದಿ ಸ್ಥಿತಿ ವಿವರಗಳನ್ನು **ಅನುಬಂಧ– III (A)** ರಲ್ಲಿ ಒದಗಿಸಿದೆ. ಜೊತೆಗೆ 68 ಗುತ್ತಿಗೆ ಆಧಾರಿತ ಸಿಬ್ಬಂದಿ ಮತ್ತು 375 ಇತರೆ ಸಿಬ್ಬಂದಿಗಳನ್ನು ಮಾನವಸಂಪನ್ಮೂಲ ಒದಗಿಸುವ ಸಂಸ್ಥೆಯಿಂದ ಹೊರಗುತ್ತಿಗೆ ಪಡೆಯಲಾಗಿದೆ. 2017–18 ರ ಅವಧಿಯಲ್ಲಿ 06 ಸಿಬ್ಬಂದಿಯು ವಯೋ ನಿವೃತ್ತಿ ಹೊಂದಿರುತ್ತಾರೆ. ವಿವರ **ಅನುಬಂಧ– III (B)** ರಲ್ಲಿ ನೀಡಲಾಗಿದೆ.

1.2: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊಂದಿರುವ ಮೂಲಸೌಲಭ್ಯಗಳು

ರಾಜ್ಯ ಸರ್ಕಾರವು ದಿನಾಂಕ: 21.9.1974ರಲ್ಲಿ ರಚಿಸಿದಂದಿನಿಂದ ಕ.ರಾ.ಮಾ.ನಿ.ಮಂ. ಕಾರ್ಯಾರಂಭ ಮಾಡಿದೆ.

2004 ರಿಂದ ಕ.ರಾ.ಮಾ.ನಿ.ಮಂ.ಯ ಕೇಂದ್ರ ಕಛೇರಿಯು "ಪರಿಸರ ಭವನ", ನಂ.49, ಚರ್ಚ್‌ರಸ್ತೆ, ಬೆಂಗಳೂರು – ಇಲ್ಲಿ ಕಾರ್ಯಪ್ರವೃತ್ತವಾಗಿದೆ.

ಬೆಂಗಳೂರಿನಲ್ಲಿ, ಮಂಡಳಿಯ ಮೂರು ವಲಯ ಕಛೇರಿಗಳು ಮತ್ತು ಹತ್ತು ಪ್ರಾದೇಶಿಕ ಕಛೇರಿಗಳು ನಿಸರ್ಗ ಭವನದಲ್ಲಿ; ಒಂದು ವಲಯ ಕಛೇರಿ ಹಾಗು ನಾಲ್ಕು ಪ್ರಾದೇಶಿಕ ಕಛೇರಿಗಳು ಅರ್ಬನ್ ಇಕೋ ಪಾರ್ಕ್, ಪೀಣ್ಯದಲ್ಲಿ ಸ್ಥಾಪಿಸಲಾಗಿದೆ.

ಕ.ರಾ.ಮಾ.ನಿ.ಮಂ.ಯ ತನ್ನ ಪ್ರಾದೇಶಿಕ ಕಛೇರಿಗಳನ್ನು, ಪ್ರಾದೇಶಿಕ ಪ್ರಯೋಗಾಲಯಗಳೊಂದಿಗೆ ದಾವಣಗೆರೆ, ಧಾರವಾಡ, ಬೆಳಗಾವಿ, ಮೈಸೂರು, ಹಾಸನ, ಕಲಬುರ್ಗಿ ಮತ್ತು ಮಂಗಳೂರುಗಳಲ್ಲಿ ನಿರ್ಮಿಸಿದೆ; ವಲಯ ಹಿರಿಯ ಪರಿಸರ ಅಧಿಕಾರಿ ಕಛೇರಿಯನ್ನು ಮಂಗಳೂರಿನಲ್ಲಿ ನಿರ್ಮಿಸಿದೆ. ಪ್ರಾದೇಶಿಕ ಕಛೇರಿಯ ಕಟ್ಟಡಗಳನ್ನು ಉಡುಪಿ, ಕಾರವಾರ, ತುಮಕೂರು, ಶಿವಮೊಗ್ಗ, ಮಂಡ್ಯ, ವಿಜಯಪುರ, ಚಿತ್ರದುರ್ಗ, ಬಳ್ಳಾರಿ, ಬಾಗಲಕೋಟೆ, ಚಿಕ್ಕಮಗಳೂರು, ಬೀದರ, ಕೋಲಾರ, ಹಾವೇರಿ ಹಾಗೂ ರಾಮನಗರಗಳಲ್ಲಿ ನಿರ್ಮಿಸಿದೆ.

1.3: ಪ್ರಯೋಗಾಲಯ

ಕ.ರಾ.ಮಾ.ನಿ.ಮಂ.ಯು ಒಂದು ಕೇಂದ್ರೀಯ ಪರಿಸರ ಪ್ರಯೋಗಾಲಯವನ್ನು ಬೆಂಗಳೂರಿನಲ್ಲಿ, ಜೊತೆಗೆ ಪ್ರಾದೇಶಿಕ ಪ್ರಯೋಗಾಲಯಗಳನ್ನು ಮೈಸೂರು, ಧಾರವಾಡ, ಮಂಗಳೂರು, ಕಲಬುರ್ಗಿ, ದಾವಣಗೆರೆ, ರಾಯಚೂರು, ಹಾಸನ ಮತ್ತು ಬೆಳಗಾವಿಯಲ್ಲಿ ಸ್ಥಾಪಿಸಿದೆ.

ಕೇಂದ್ರೀಯ ಮತ್ತು ಪ್ರಾದೇಶಿಕ ಪ್ರಯೋಗಾಲಯಗಳು ಅತ್ಯಾಧುನಿಕ ವಿಶ್ಲೇಷಣ ಸಾಧನಗಳನ್ನು ಹೊಂದಿದ್ದು, ನೀರು, ತ್ಯಾಜ್ಯ ನೀರು, ಎತ್ತರದ ಚಿಮಣಿಯಿಂದ ಹೊರಬರುವ ಅನಿಲತ್ಯಾಜ್ಯ, ಪರಿವೇಷ್ಟಕ ವಾಯು, ಘನತ್ಯಾಜ್ಯ, ಬ್ಯಾಕ್ಟೀರಿಯಾ ಮಾದರಿಗಳು ಮತ್ತು ಜೈವಿಕವಸ್ತುಗಳು ಮುಂತಾದವುಗಳ ಪರೀಕ್ಷೆ ನಡೆಸಲು ಸಮರ್ಥವಾದ ಆಧುನಿಕ ಸಾಧನಗಳಿಂದ ಸಜ್ಜುಗೊಂಡಿರುತ್ತವೆ.

ಬೆಂಗಳೂರಿನ ಕೇಂದ್ರ ಪರಿಸರ ಪ್ರಯೋಗಾಲವು ಕೆಳಗಿನ ಅಧೀಕೃತ/ಮಾನ್ಯತೆ/ಪ್ರಮಾಣೀಕರಣವನ್ನು ಪಡೆದಿರುತ್ತದೆ.

1. ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಡಿಯಲ್ಲಿ ಕೇಂದ್ರ ಪರಿಸರ ಪ್ರಯೋಗಾಲಯವು "ಪರಿಸರ ಪ್ರಯೋಗಾಲಯ" ವೆಂದು ಮಾನ್ಯತೆ ಪಡೆದಿದೆ.
2. ನ್ಯಾಷನಲ್ ಅಕ್ರಿಡಿಟೇಷನ್ ಬೋರ್ಡ್ ಫಾರ್ ಟೆಸ್ಟಿಂಗ್ ಅಂಡ್ ಕ್ಯಾಲಿಬ್ರೇಷನ್ ಆಫ್ ಲ್ಯಾಬೋರೇಟರೀಸ್ ಇವರಿಂದ ISO/IEC 17025:2005 ಮಾನ್ಯತೆ ಪಡೆದಿದೆ.
3. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರಡಿಯಲ್ಲಿ "ರಾಜ್ಯ ಜಲ ಪ್ರಯೋಗಾಲಯ" ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ "ರಾಜ್ಯ ವಾಯು ಪ್ರಯೋಗಾಲಯ" ಎಂದು ಮಾನ್ಯತೆ ಪಡೆದಿದೆ.
4. ಕೇಂದ್ರ ಪ್ರಯೋಗಾಲಯವು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ದೆಹಲಿ ಇವರಿಂದ ಡಿ.ಎಸ್.ಐ.ಆರ್ ಪ್ರಮಾಣ ಪತ್ರವನ್ನು ಪಡೆದಿದೆ.
5. ಬ್ಯೂರೊ ಆಫ್ ಇಂಡಿಯನ್ ಸ್ಟಾಂಡರ್ಡ್ (BIS) ರವರಿಂದ IS 18001:2007 ಪ್ರಮಾಣೀಕರಣವನ್ನು ಪಡೆದಿದೆ.
6. ಮೈಸೂರು, ಮಂಗಳೂರು ಹಾಗೂ ಧಾರವಾಡದಲ್ಲಿರುವ ಪ್ರಾದೇಶಿಕ ಪ್ರಯೋಗಾಲಯಗಳೂ ಸಹ ISO 9001: 2008 ಹಾಗೂ BS 18001:2007 ಪ್ರಮಾಣ ಪತ್ರವನ್ನು ಪಡೆದಿರುತ್ತವೆ.

1.4: ಪ್ರಮುಖ ಪರಿಸರ ಕಾನೂನುಗಳ ಜಾರಿ

1. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974, 1988ರ ತಿದ್ದುಪಡಿ ಮತ್ತು ಅವುಗಳಡಿಯಲ್ಲಿಯ ನಿಯಮಗಳು.
2. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಕಾಯ್ದೆ, 1977; 1992 ಮತ್ತು 2003 ರ ತಿದ್ದುಪಡಿ ಮತ್ತು ಅವುಗಳಡಿಯಲ್ಲಿಯ ನಿಯಮಗಳು.
3. ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ಮತ್ತು ಅದರಡಿಯಲ್ಲಿಯ ನಿಯಮಗಳು.
4. ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯ್ದೆ, 1991.
5. ಪರಿಸರ (ಸಂರಕ್ಷಣೆ) ಕಾಯ್ದೆ, 1986 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು/ ಅಧಿಸೂಚನೆಗಳು.

ರಾಜ್ಯ ಮಂಡಳಿಯು ಈ ಮುಂದೆ ಕಾಣಿಸಿರುವ ನಿಯಮ ಹಾಗೂ ಅಧಿಸೂಚನೆಗಳನ್ನು 1986ರ ಪರಿಸರ (ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ಜಾರಿಗೊಳಿಸುತ್ತಿದೆ.

ಅ. ಅಪಾಯಕಾರಿ ಹಾಗೂ ಇತರೆ ತ್ಯಾಜ್ಯ (ನಿರ್ವಹಣೆ ಮತ್ತು ಅಂತರ್ಗಡಿ ಸಂಚಲನೆ) ನಿಯಮಗಳು, 2016,

ಆ. ಅಪಾಯಕಾರಿ ರಾಸಾಯನಿಕ ವಸ್ತುಗಳ ಉತ್ಪಾದನೆ, ದಾಸ್ತಾನು ಮತ್ತು ಆಮದು ನಿಯಮಗಳು, 1989; ತಿದ್ದುಪಡಿ 2000.

ಇ. ಜೀವ–ವೈದ್ಯಕೀಯ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು, 2016 ಹಾಗೂ ತಿದ್ದುಪಡಿಗಳು.

ಈ. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ಹಾಗೂ ತಿದ್ದುಪಡಿಗಳು.

ಉ. ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016.

ಊ.ಶಬ್ದ ಮಾಲಿನ್ಯ (ಹತೋಟಿ ಮತ್ತು ನಿಯಂತ್ರಣ) ನಿಯಮಗಳು, 2000 ಮತ್ತು ತಿದ್ದುಪಡಿ 2002 ಹಾಗೂ 2006.

ಎ. ಬ್ಯಾಟರಿಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 2001. ತಿದ್ದುಪಡಿ 2010.

ಏ. ಅಪಾಯಕಾರಿ ಸೂಕ್ಷ್ಮಾಣು, ವಂಶ ಬದಲಾಯಿತ (ಕುಲಾಂತರಿ) ಸೂಕ್ಷ್ಮಾಣು ಅಥವಾ ಕೋಶಗಳ ಉತ್ಪಾದನೆ, ಉಪಯೋಗ, ಆಮದು, ರಫ್ತು ಮತ್ತು ದಾಸ್ತಾನು ನಿಯಮಗಳು, 1989.

ಐ. ಇ–ತ್ಯಾಜ್ಯ (ನಿರ್ವಹಣೆ) ನಿಯಮಗಳು, 2016 ಹಾಗೂ ತಿದ್ದುಪಡಿಗಳು.

ಒ. ಪರಿಸರ ಆಘಾತ ನಿರ್ಧರಣೆ (EIA) ಅಧಿಸೂಚನೆ, 2006.

ಓ. ಹಾರುಬೂದಿ ಅಧಿಸೂಚನೆ, 1999 ಮತ್ತು 2008.

ಔ. ನಿರ್ಮಾಣ ಮತ್ತು ಕೆಡಹುವಿಕೆ ತ್ಯಾಜ್ಯ ನಿರ್ವಹಣೆ ನಿಯಮಗಳು, 2016.

ಅಧ್ಯಾಯ ೨
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಚನೆ

ಅಧ್ಯಾಯ – 2
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಚನೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಮೊದಲಿಗೆ ಅಧಿಸೂಚನೆ ಸಂಖ್ಯೆ. ಹೆಚ್ಎಂಎ 161 ಸಿಜಿಇ 74, ದಿನಾಂಕ: 21.9.1974 ರನ್ವಯ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಸೆಕ್ಷನ್ 4ರಡಿಯಲ್ಲಿ ರಚಿಸಲಾಯಿತು. ತದನಂತರ 1981, 1984, 1991, 1994, 1995, 1997, 1999, 2001, 2002, 2007, 2010, 2014 ಮತ್ತು 2016 ರಲ್ಲಿ ಪುನರ್ ರಚಿಸಲಾಯಿತು. ಕಾಯ್ದೆಗಳ ನಿಬಂಧನೆಯಂತೆ ಮಂಡಳಿಯು ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಮತ್ತು ರಾಜ್ಯ ಸರ್ಕಾರದಿಂದ 15 ನಾಮನಿರ್ದೇಶಿತ ಸದಸ್ಯರನ್ನೊಳಗೊಂಡಿರುತ್ತದೆ. ಸರ್ಕಾರದಿಂದ ನೇಮಕಗೊಂಡ ಸರ್ಕಾರದ ಪ್ರತಿನಿಧಿಗಳು, ಸ್ಥಳೀಯ ಪ್ರತಿನಿಧಿಗಳು ಮತ್ತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಕಾರ್ಪೋರೇಷನ್/ನಿಗಮ/ ಮಂಡಳಿಗಳ ಪ್ರತಿನಿಧಿಗಳು ಮತ್ತು ಕರ್ನಾಟಕ ಸರ್ಕಾರವು ನಾಮನಿರ್ದೇಶಿಸುವ ಸರ್ಕಾರೇತರ ಸದಸ್ಯರನ್ನು ಮಂಡಳಿಯು ಒಳಗೊಂಡಿದೆ.

2.1: ದಿನಾಂಕ 31.3.2018 ರಂದು ಇದ್ದಂತೆ ಮಂಡಳಿಯ ಸಂಯೋಜನೆ ಈ ಕೆಳಗಿನಂತೆ ಇದೆ:

ಅಧ್ಯಕ್ಷರು:

ಶ್ರೀ. ಲಕ್ಷ್ಮಣ್ ರವರು ಈ ವಾರ್ಷಿಕ ವರದಿಯ ಅವಧಿಯಲ್ಲಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ರಾಜ್ಯ ಸರ್ಕಾರದ ಪ್ರತಿನಿಧಿಗಳು:

- ಸರ್ಕಾರದ ಕಾರ್ಯದರ್ಶಿ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ, ಬೆಂಗಳೂರು
- ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
- ಆಯುಕ್ತರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು
- ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು
- ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು

ಸ್ಥಳೀಯ ಪ್ರಾಧಿಕಾರಗಳ ಪ್ರತಿನಿಧಿಗಳು:

- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಮೈಸೂರು ಜಿಲ್ಲಾ ಪಂಚಾಯತಿ, ಮೈಸೂರು
- ಆಯುಕ್ತರು, ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
- ಆಯುಕ್ತರು, ಕಲಬುರ್ಗಿ ಮಹಾನಗರ ಪಾಲಿಕೆ, ಕಲಬುರ್ಗಿ.
- ಮಹಾಪೌರರು, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು
- ಅಧ್ಯಕ್ಷರು, ರಾಮನಗರ ಜಿಲ್ಲಾ ಪಂಚಾಯಿತಿ, ರಾಮನಗರ

ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಾರ್ಪೋರೇಷನ್ ಪ್ರತಿನಿಧಿಗಳು

- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು
- ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು

ಕರ್ನಾಟಕ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಸರ್ಕಾರೇತರ ಸದಸ್ಯರು – ದಿನಾಂಕ: 03.03.2014 ರಿಂದ 04.05.2017 ರವರೆಗೆ

- ಡಾ. ಜಯಪ್ರಕಾಶ್ ಆಳ್ವ, #2, 5ನೇ ಅಡ್ಡರಸ್ತೆ, 4ನೇ ಮೇನ್, ಪಂಪ ಬಡಾವಣೆ, ಕೆಂಪಾಪುರ, ಬೆಂಗಳೂರು
- ಶ್ರೀ ಜೆ.ಜಿ ಕಾವೇರಿಯಪ್ಪ, # 40, ಶ್ರೀ ಕೃಷ್ಣ, 4ನೇ 'ಎ' ಅಡ್ಡರಸ್ತೆ, 1ನೇ ಹಂತ, ಆನಂದನಗರ, ಆರ್.ಟಿ ನಗರ ಅಂಚೆ, ಬೆಂಗಳೂರು – 560 032.
- ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, # 3036, ಬಿ ಬ್ಲಾಕ್, ಎಂ ಸಿ ಕಾಲೋನಿ, ದಾವಣಗೆರೆ.

ಕರ್ನಾಟಕ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಸರ್ಕಾರೇತರ ಸದಸ್ಯರು – ದಿನಾಂಕ: 04.05.2017 ರಿಂದ ಜಾರಿಗೆ ಬರುವಂತೆ ಹಾಗೂ ವಾರ್ಷಿಕ ವರದಿಯ ಅವಧಿಯಲ್ಲಿ :

- ಶ್ರೀ ಎಂ.ವೆಂಕಟರಾಮು, ನಂ.1250, ಪಡುವನ ರಸ್ತೆ, 3 ನೇ ಅಡ್ಡ ರಸ್ತೆ, 1 ನೇ ಸ್ಟೇಜ್, ಕುವೆಂಪುನಗರ, ಮೈಸೂರು – 570023.
- ಶ್ರೀ ಸುರೇಶ್ ಗುರಪ್ಪ ತಳವಾರ, ಬಿ.ಕೆ.ಕಂಗ್ರಾಳಿ, ಸಾಯಿನಗರ, 4 ನೇ ಅಡ್ಡರಸ್ತೆ, ಗುರು ನಿಲಯ, ಬೆಳಗಾವಿ
- ಶ್ರೀ ಪಿಯುಸ್.ಎಲ್.ರೋಡ್ರಿಗಸ್, ಪೊನೆಗಲ್ ಹೌಸ್, ಲೊರೆಟ್ಟೊ ಪೋಸ್ಟ್, ಬಂಟ್ವಾಳ ಕಸಬ ಹೋಬಳಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ

ಸದಸ್ಯ ಕಾರ್ಯದರ್ಶಿ:

ಶ್ರೀ.ಎಸ್.ಶಾಂತಪ್ಪ, ಭಾ.ಆ.ಸೇ. ರವರು ದಿನಾಂಕ : 08.05.2017 ರವರೆಗೆ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀ ವಿಜಯಕುಮಾರ್, ಭಾ.ಆ.ಸೇ ಇವರು ದಿನಾಂಕ : 08.05.2017 ರಿಂದ 10.07.2017 ರವರೆಗೆ ಸದಸ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀ ಜಿ.ವಿ.ರಂಗ ರಾವ್, ಭಾ.ಆ.ಸೇ ಇವರು ದಿನಾಂಕ ; 10.07.2017 ರಂದು ಸದಸ್ಯ ಕಾರ್ಯದರ್ಶಿ ಹುದ್ದೆಗೆ ಕಾರ್ಯವರದಿ ಮಾಡಿಕೊಂಡು ಹಾಗೂ ಈ ವಾರ್ಷಿಕ ವರದಿಯ ಅವಧಿಯಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಅಧ್ಯಾಯ ೩

ರಾಜ್ಯ ಮಂಡಳಿಯಿಂದ ರಚಿಸಲ್ಪಟ್ಟ ಸಮಿತಿಗಳು ಮತ್ತು ನಡೆಸಲಾದ ಸಭೆಗಳು

ಅಧ್ಯಾಯ – 3
ರಾಜ್ಯ ಮಂಡಳಿಯಿಂದ ರಚಿಸಲ್ಪಟ್ಟ ಸಮಿತಿಗಳು ಮತ್ತು ನಡೆಸಲಾದ ಸಭೆಗಳು

ಮಂಡಳಿಯು ತನ್ನ ಕಾರ್ಯ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಜಲ ಕಾಯ್ದೆಯ ಕಲಂ 9(1) ರ ಅನ್ವಯ ಈ ಮುಂದೆ ಕಾಣಿಸಿರುವಂತೆ ಉಪಸಮಿತಿಗಳನ್ನು ರಚಿಸಿದೆ.

1. ತಾಂತ್ರಿಕ ಸಲಹಾ ಸಮಿತಿ
2. ಪ್ರಯೋಗಾಲಯ ಮತ್ತು ಗ್ರಂಥಾಲಯ ಸಮಿತಿ
3. ರಾಜ್ಯ ಮಟ್ಟದ ಸಮ್ಮತಿ ಸಮಿತಿ
4. ಎಂಪವರ್ಡ್ ಸಮಿತಿ – ಜಲ ಕಾಯ್ದೆ ಕಲಂ 33(ಎ) ಮತ್ತು ವಾಯು ಕಾಯ್ದೆ 31(ಎ) ರನ್ವಯ ಕ್ರಮ ಕೈಗೊಳ್ಳಲು
5. ಜಾಗೃತಿ ಸಮಿತಿ
6. ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ರಡಿಯಲ್ಲಿ ಅಧಿಕಾರ ಪತ್ರ ನೀಡುವಿಕೆಗೆ ರಚಿಸಲಾದ ಸಮಿತಿ

3.1: ತಾಂತ್ರಿಕ ಸಲಹಾ ಸಮಿತಿ

ತಾಂತ್ರಿಕ ಸಲಹಾ ಸಮಿತಿಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳ ಕುರಿತು ತಾಂತ್ರಿಕ ಶಿಫಾರಸ್ಸು/ಸಲಹೆಗಳನ್ನು, ತ್ಯಾಜ್ಯ ಪ್ರಮಾಣವನ್ನು ಕನಿಷ್ಠ ಪ್ರಮಾಣಕ್ಕಿಳಿಸುವುದು, ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದು, ಶುದ್ಧ ಉತ್ಪಾದನಾ ತಂತ್ರಜ್ಞಾನಗಳ ಕುರಿತಾಗಿ ಮಂಡಳಿಗೆ ಸಲಹೆ ನೀಡುತ್ತದೆ.

ಮಂಡಳಿಯು ತಾಂತ್ರಿಕ ಸಲಹಾ ಸಮಿತಿಯನ್ನು ಪುನರ್ ರಚಿಸಿದೆ. ಸದಸ್ಯರ ಪಟ್ಟಿಯನ್ನು **ಅನುಬಂಧ– IV** ರಲ್ಲಿ ನೀಡಿದೆ. ವರದಿಯ ವರ್ಷದಲ್ಲಿ ತಾಂತ್ರಿಕ ಸಲಹಾ ಸಮಿತಿಯು ಈ ಮುಂದೆ ಕಾಣಿಸಿರುವ ದಿನಾಂಕಗಳಲ್ಲಿ ಸಭೆ ಸೇರಿದೆ.

ಕೋಷ್ಟಕ 3.1: 2017–2018 ರಲ್ಲಿ ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಗಳು

ಸಭೆ ಸಂಖ್ಯೆ	ಸಭೆ ದಿನಾಂಕ
1	20.09.2017
2	28.09.2017
3	28.12.2017

3.2: ಪ್ರಯೋಗಾಲಯ ಮತ್ತು ಗ್ರಂಥಾಲಯ ಸಮಿತಿ

ಮಂಡಳಿಯು ಪ್ರಯೋಗಾಲಯ ಮತ್ತು ಗ್ರಂಥಾಲಯ ಸಮಿತಿಯನ್ನು, ಪ್ರಯೋಗಾಲಯಗಳನ್ನು ಬಲಪಡಿಸಿ ಉತ್ತಮಪಡಿಸುವುದರ ಮೂಲಕ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಪುನರ್ ರಚಿಸಿದೆ. ಸದಸ್ಯರ ವಿವರವನ್ನು **ಅನುಬಂಧ–V** ರಲ್ಲಿ ನೀಡಲಾಗಿದೆ. 2017–18 ರಲ್ಲಿ ನಡೆದ ಸಮಿತಿಯು ಸಭೆಗಳ ವಿವರಗಳು ಈ ಮುಂದಿನಂತಿವೆ.

ಕೋಷ್ಟಕ 3.2: 2017–18 ರಲ್ಲಿ ನಡೆದ ಸಮಿತಿಯು ಸಭೆಗಳ ವಿವರಗಳು:

ಕ್ರಮ ಸಂಖ್ಯೆ	ಸಭೆಯ ದಿನಾಂಕ
1.	27.04.2017

3.3: ರಾಜ್ಯ ಮಟ್ಟದ ಸಮ್ಮತಿ ಪತ್ರ ಸಮಿತಿ

ರಾಜ್ಯ ಮಟ್ಟದ ಸಮ್ಮತಿ ಪತ್ರ ಸಮಿತಿಯು ಕೆಂಪು ಪ್ರವರ್ಗದ ಕೈಗಾರಿಕೆಗಳಿಗೆ, ಮೂಲಭೂತ ಸೌಕರ್ಯ ಯೋಜನೆಗಳಿಗೆ ಸಂಬಂಧಿಸಿದ ಸ್ಥಾಪನೆ (CTE), ವಿಸ್ತರಣೆ (CTEx) ಮತ್ತು ಚಾಲನಾ (CTO) ಸಮ್ಮತಿ ಪತ್ರಗಳನ್ನು; ಅಪಾಯಕಾರಿ ತ್ಯಾಜ್ಯ ವಸ್ತುಗಳ ನಿಯಮಗಳಡಿಯಲ್ಲಿ ಹಾಗೂ ಜೀವ–ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮದಡಿಯಲ್ಲಿ ಅಧಿಕಾರ ಪತ್ರ ನೀಡಲು ಶಿಫಾರಸ್ಸು ಮಾಡುತ್ತದೆ. ಮಂಡಳಿಯು ಸಮ್ಮತಿ ಪತ್ರ ಸಮಿತಿಯನ್ನು ಪುನರ್ ರಚಿಸಿದೆ. ಸದಸ್ಯರ ವಿವರಗಳು **ಅನುಬಂಧ – VI** ರಲ್ಲಿದೆ. 2017–18 ರಲ್ಲಿ ನಡೆದ ಸಮಿತಿಯು ಸಭೆಗಳ ವಿವರಗಳು ಈ ಮುಂದಿನಂತಿವೆ.

ಕೋಷ್ಟಕ: 3.3: 2017–18 ರಲ್ಲಿ ಕೇಂದ್ರ ಕಛೇರಿಯಲ್ಲಿ ನಡೆದ ಸಮ್ಮತಿ ಪತ್ರ ಸಮಿತಿಯ ಸಭೆಗಳ ವಿವರಗಳು

ಕ್ರಮ ಸಂಖ್ಯೆ	ಸಮಿತಿ	ಸಭೆಗಳ ಸಂಖ್ಯೆ	ಚರ್ಚಿಸಿದ ವಿಷಯಗಳ ಸಂಖ್ಯೆ
1	ಸ್ಥಾಪನಾ ಸಮ್ಮತಿ (ಇಐಎ)	29	203
2	ಸ್ಥಾಪನಾ ಸಮ್ಮತಿ (ನಾನ್–ಇಐಎ)		1202
3	ಚಾಲನಾ ಸಮ್ಮತಿ (ಇಐಎ)		478
4	ಚಾಲನಾ ಸಮ್ಮತಿ (ನಾನ್–ಇಐಎ)		1230
5	ಹೆಚ್‌ಡಬ್ಲ್ಯುಎಂ ಅಧಿಕಾರ ಪತ್ರ		118
6	ಸ್ಥಳೀಯ ಸಂಸ್ಥೆಗಳು	14	26
7	ಸಾಮಾನ್ಯ ವಿಷಯಗಳು	05	08
	ಚರ್ಚಿಸಿದ ವಿಷಯಗಳ ಒಟ್ಟು ಸಂಖ್ಯೆ		**3265**

3.4: ಎಂಪವರ್ಡ್ ಸಮಿತಿ

ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1974ರ ಕಲಂ 33(ಎ) ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ, 1981ರ ಕಲಂ 31(ಎ) ರೊಂದಿಗೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ನಿಯಮ, 1975 ನಿಯಮ 34 ಮತ್ತು ಕರ್ನಾಟಕ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ನಿಯಮ, 1983 ನಿಯಮ 20(ಎ) ರನ್ವಯ ಇರುವ ಅಧಿಕಾರವನ್ನು ಜಾರಿಗೊಳಿಸಲು ಎಂಪವರ್ಡ್ ಸಮಿತಿಯನ್ನು ರಚಿಸಿದೆ. ಸದಸ್ಯರ ವಿವರಗಳು **ಅನುಬಂಧ–– VII** ರಲ್ಲಿದೆ. 2017–18 ನೇ ಸಾಲಿನಲ್ಲಿ ನಡೆದ ಸಭೆಗಳ ವಿವರ ಕೆಳಕಂಡ ಕೊಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: 3.4: 2017–18 ನೇ ಸಾಲಿನಲ್ಲಿ ನಡೆದ ಅಧಿಕಾರ ನಿಯೋಜನೆ ಸಮಿತಿ ಸಭೆಗಳು

ಕ್ರಮ ಸಂಖ್ಯೆ	ಸಭೆಯ ದಿನಾಂಕ	ಕ್ರಮ ಸಂಖ್ಯೆ	ಸಭೆಯ ದಿನಾಂಕ
1.	25.04.2017	9.	27.09.2017
2.	29.05.2017	10.	12.10.2017
3.	09.06.2017	11.	10.11.2017
4.	03.07.2017	12.	22.12.2017
5.	12.07.2017	13.	08.02.2018
6.	31.07.2017	14.	24.02.2018
7.	22.08.2017	15.	23.03.2018
8.	12.09.2017		

3.5: ಜಾಗೃತಿ ಸಮಿತಿ

ಸದಸ್ಯರ ಪಟ್ಟಿಯನ್ನು **ಅನುಬಂಧ– VIII** ರಲ್ಲಿ ಒದಗಿಸಿದೆ. 2017–18 ನೇ ಸಾಲಿನಲ್ಲಿ ನಡೆದ ಸಭೆಗಳ ವಿವರವನ್ನು ಮುಂದೆ ಕಾಣಿಸಿರುವ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: 3.5: 2017–18 ನೇ ಸಾಲಿನಲ್ಲಿ ನಡೆದ ಜಾಗೃತಿ ಸಮಿತಿ ಸಭೆಗಳ ವಿವರ

ಕ್ರಮ ಸಂಖ್ಯೆ	ಸಭೆಯ ದಿನಾಂಕ
1.	27.04.2017
2.	18.08.2017
3.	09.01.2018

3.6: ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ರಡಿಯಲ್ಲಿ ಅಧಿಕಾರ ಪತ್ರ ನೀಡುವಿಕೆಗೆ ರಚಿಸಲಾದ ಸಮಿತಿ

ದಿನಾಂಕ: 28–05–2002 ರಂದು ನಡೆದ 145ನೇ ಮಂಡಳಿಯ ಸಭೆಯಲ್ಲಿ ಮುನ್ಸಿಪಲ್ ಘನ ತ್ಯಾಜ್ಯಗಳ (ನಿರ್ವಹಣೆ ಮತ್ತು ನಿಭಾವಣೆ) ನಿಯಮ, 2000 ರಡಿಯಲ್ಲಿ ಅಧಿಕಾರ ಪತ್ರ ನೀಡಲೆಂದು ಒಂದು ಸಮಿತಿ ರಚಿಸಲು ಒಪ್ಪಿಗೆ ನೀಡಿತು ಹಾಗೂ ಅಧ್ಯಕ್ಷರಿಗೆ ಮತ್ತು ಸದಸ್ಯ ಕಾರ್ಯದರ್ಶಿಯವರಿಗೆ ಸದರಿ ಅಧಿಕಾರ ಪತ್ರ ನೀಡುವ ಅಧಿಕಾರವನ್ನು ನಿಯೋಜಿಸಲಾಯಿತು. ಅಂತೆಯೇ, ಮೇಲೆ ತಿಳಿಸಿರುವ ಮುನಿಸಿಪಲ್ ಘನ ತ್ಯಾಜ್ಯಗಳ ಅಧಿಕಾರ ಪತ್ರ ನೀಡುವ ಸಮಿತಿಯನ್ನು ನಿಯಮ 6(2) ಅನ್ವಯ ರಚಿಸಲಾಯಿತು. ಘನತ್ಯಾಜ್ಯ ನಿರ್ವಹಣೆ ನಿಯಮ, 2016 ರನ್ವಯ ಘನತ್ಯಾಜ್ಯಗಳ ಸಂಗ್ರಹ ಮತ್ತು ವಿಲೇವಾರಿ ವ್ಯವಸ್ಥೆಗಳನ್ನು ಸ್ಥಾಪಿಸಲು ಅಧಿಕಾರ ಪತ್ರವನ್ನು ನೀಡಲು ಸದರಿ ಸಮಿತಿಯನ್ನು ಮುಂದುವರೆಸಲಾಗಿದೆ ಹಾಗೂ ಸದರಿ ನಿಯಮಗಳ ಷೆಡ್ಯೂಲ್ 1 & 2 ನ್ನು ಪಾಲಿಸುವುದನ್ನು ಸೂಚಿಸುತ್ತದೆ. ಸದಸ್ಯರ ವಿವರಗಳನ್ನು **ಅನುಬಂಧ – IX** ರಲ್ಲಿ ನೀಡಲಾಗಿದೆ.

ಕೋಷ್ಟಕ: 3.6: 2017–18 ನೇ ಸಾಲಿನಲ್ಲಿ ನಡೆದ ಮುನಿಸಿಪಲ್ ಘನತ್ಯಾಜ್ಯ ಸಮ್ಮತಿ ಪತ್ರ ಸಮಿತಿ ಸಭೆಗಳು

ಸಭೆಯ ಸಂಖ್ಯೆ	ಸಭೆಯ ದಿನಾಂಕ
1.	01.08.2017
2.	28.02.2018

ಅಧ್ಯಾಯ ೪

ರಾಜ್ಯ ಮಂಡಳಿಯ ಸಭೆಗಳು

ಅಧ್ಯಾಯ – 4
ರಾಜ್ಯ ಮಂಡಳಿಯ ಸಭೆಗಳು

2017–18 ನೇ ಸಾಲಿನಲ್ಲಿ ನಡೆದ ಸಭೆಗಳ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: 4.1: 2017–18 ರಲ್ಲಿ ನಡೆದ ಮಂಡಳಿಯ ಸಭೆಗಳ ವಿವರ

ಸಭೆಯ ಸಂಖ್ಯೆ	ಸಭೆಯ ದಿನಾಂಕ
212	06.05.2017
213	03.08.2017
214	21.08.2017
215	30.10.2017
216	22.12.2017
217	07.02.2018
218	26.03.2018

ಮಂಡಳಿಯು ತನ್ನ ಸಭೆಗಳಲ್ಲಿ ತೆಗೆದುಕೊಂಡ ಮುಖ್ಯ ನಿರ್ಧಾರಗಳನ್ನು **ಅನುಬಂಧ – X** ರಲ್ಲಿ ಒದಗಿಸಿದೆ.

ಅಧ್ಯಾಯ ೫ ಎ

ಮಂಡಳಿಯ ಚಟುವಟಿಕೆಗಳು ಹಾಗೂ ಜಲ ಮತ್ತು ವಾಯು ಕಾಯ್ದೆ 17ನೇಯ ಉಪಬಂಧದ ಅಡಿಯಲ್ಲಿ ನಿರ್ವಹಿಸುವ ವಿವಿಧ ಕಾರ್ಯಚಟುವಟಿಕೆಗಳು

ಅಧ್ಯಾಯ – 5 ಎ

ಮಂಡಳಿಯ ಚಟುವಟಿಕೆಗಳು ಹಾಗೂ ಜಲ ಮತ್ತು ವಾಯು ಕಾಯ್ದೆ 17ನೇಯ ಉಪಬಂಧದ ಅಡಿಯಲ್ಲಿ ನಿರ್ವಹಿಸುವ ವಿವಿಧ ಕಾರ್ಯಚಟುವಟಿಕೆಗಳು

5ಎ.1: ಮಂಡಳಿಯ ಕಾರ್ಯಭಾರಗಳು ಹೀಗಿವೆ:

- ನೀರಿನ ಧಾರೆ ಮತ್ತು ಬಾವಿಗಳ ಮಾಲಿನ್ಯವನ್ನು ಹಾಗು ರಾಜ್ಯದಲ್ಲಿನ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಅಥವಾ ತಗ್ಗಿಸಲು ಸಮಗ್ರವಾದ ಕಾರ್ಯಕ್ರಮಗಳ ಯೋಜನೆಯನ್ನು ರೂಪಿಸುವುದು ನಿವಾರಿಸಲು, ಹಾಗು ಅವುಗಳನ್ನು ಕಾರ್ಯಗತಗೊಳಿಸುವುದು.
- ಜಲ ಮತ್ತು ವಾಯು ಮಾಲಿನ್ಯಗಳನ್ನು ನಿವಾರಿಸುವುದು, ನಿಯಂತ್ರಿಸುವುದು ಅಥವಾ ತಗ್ಗಿಸುವುದರ ಕುರಿತಾದ ಯಾವುದೇ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
- ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯ ಮತ್ತು ಅವುಗಳ ನಿವಾರಣೆ, ನಿಯಂತ್ರಣ ಅಥವಾ ತಗ್ಗಿಸುವಿಕೆಯ ಕುರಿತಾದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಮಾಹಿತಿಯನ್ನು ಪ್ರಸಾರ ಮಾಡುವುದು.
- ಜಲ ಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ತಗ್ಗಿಸುವಿಕೆಯ ಕುರಿತಾದ ಸಮಸ್ಯೆಗಳ ಬಗೆಗಿನ ತೀವ್ರ ಪರಿಶೀಲನೆ ಹಾಗು ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು, ನಡೆಸುವುದು ಮತ್ತು ಪಾಲ್ಗೊಳ್ಳುವುದು.
- ಜಲ ಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ತಗ್ಗಿಸುವಿಕೆಯ ಕುರಿತಾದ ತರಬೇತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಅಥವಾ ತೊಡಗಿಸಿಕೊಳ್ಳಬಹುದಾದ ವ್ಯಕ್ತಿಗಳನ್ನು ಸಂಘಟಿಸುವುದರಲ್ಲಿ ಕೇಂದ್ರ ಮಂಡಳಿಯ ಜೊತೆಗೆ ಸಹಭಾಗಿಯಾಗುವುದು ಮತ್ತು ಆ ಕುರಿತಾದ ಸಮೂಹ ಶಿಕ್ಷಣ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.
- ಚರಂಡಿಗಳಲ್ಲಿ ಹರಿಯುವ ಅಥವಾ ಉದ್ಯಮಗಳಿಂದ ಹೊರಬರುವ ಜಲತ್ಯಾಜ್ಯವನ್ನು, ಜಲತ್ಯಾಜ್ಯ ಸಂಸ್ಕರಣೆಯ ಕಾರ್ಯಸ್ಥಳ ಅಥವಾ ಸಂಸ್ಕರಣಾ ಘಟಕಗಳನ್ನು ಪರಿಶೀಲಿಸುವುದು. ಜೊತೆಗೆ ಜಲಸಂಸ್ಕರಣ ಘಟಕಗಳಿಗಾಗಿ ನಿಗದಿಯಾಗಿರುವ ಮಾನಕಗಳು, ನಿರ್ದಿಷ್ಟತೆಗಳು ಅಥವಾ ಉದ್ದೇಶಿತ ಜಲಸಂಸ್ಕರಣ ಘಟಕಗಳಿಗೆ ಸಂಬಂಧಿಸಿದ ಇತರ ದತ್ತಾಂಶಗಳನ್ನು ಪರಿಷ್ಕರಿಸಲು, ಅವುಗಳ ನಿರ್ಮಲೀಕರಣದ ಕೆಲಸಗಳು ಮತ್ತು ಚರಂಡಿಗಳಲ್ಲಿ ಹರಿಯುವ ಅಥವಾ ಉದ್ಯಮಗಳಿಂದ ಹೊರಬರುವ ಜಲತ್ಯಾಜ್ಯದ ವಿನಿಯೋಗದ ಕುರಿತು ಅಥವಾ ಕಾಯ್ದೆದ ಅಡಿಯಲ್ಲಿ ಅಗತ್ಯವಾದ ಯಾವುದೇ ಅನುಮೋದನೆಯ ಕುರಿತು ಯೋಜನೆಗಳನ್ನು ಪರಿಷ್ಕರಿಸುವುದು. ಮಂಡಳಿಯು ಸೂಕ್ತವೆಂದು ಭಾವಿಸಿದ ಕಾಲಾಂತರಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶಗಳನ್ನು ಪರಿವೀಕ್ಷಿಸುವುದು, ಅಲ್ಲಿನ ವಾಯುಗುಣಮಟ್ಟದ ಮೌಲ್ಯಮಾಪನೆ ಮಾಡುವುದು ಮತ್ತು ಆ ಪ್ರದೇಶದ ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ತಗ್ಗಿಸುವಿಕೆಗಾಗಿ ಕ್ರಮಗಳನ್ನು ತೆಗೆದುಕೊಳ್ಳುವುದು.
- ಮಂಡಳಿಯು ಸೂಕ್ತವೆಂದು ಭಾವಿಸಿದ ಕಾಲಾಂತರಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶಗಳನ್ನು ಪರಿವೀಕ್ಷಿಸುವುದು, ಅಲ್ಲಿನ ವಾಯುಗುಣಮಟ್ಟದ ಮೌಲ್ಯಮಾಪನೆ ಮಾಡುವುದು ಮತ್ತು ಆ ಪ್ರದೇಶದ ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ತಗ್ಗಿಸುವಿಕೆಗಾಗಿ ಕ್ರಮಗಳನ್ನು ತೆಗೆದುಕೊಳ್ಳುವುದು.
- ಒಳಚರಂಡಿಗಳ ಮತ್ತು ಉದ್ಯಮದ ಜಲತ್ಯಾಜ್ಯಗಳಿಗಾಗಿ ಮತ್ತು ಒಳಸ್ವೀಕರಿಸುವ ನೀರಿನ (ಬೇರೆ ಬೇರೆ ರಾಜ್ಯಗಳ ನಡುವೆ ಹರಿಯುವ ನೀರಿನದ್ದಲ್ಲ) ಗುಣಮಟ್ಟ ಶಿಷ್ಟತೆಗಳನ್ನು ನಿಗದಿ ಮಾಡುವುದು, ಬದಲಾವಣೆ ಮಾಡುವುದು ಅಥವಾ ರದ್ದು ಮಾಡುವುದು.

- ಕೇಂದ್ರ ಮಂಡಳಿಯ ಜೊತೆಗಿನ ಸಮಾಲೋಚನೆಯೊಂದಿಗೆ ಮತ್ತು ಕೇಂದ್ರ ಮಂಡಳಿ ನಿಗದಿಪಡಿಸಿರುವ ವಾಯುಗುಣಮಟ್ಟದ ಶಿಷ್ಟತೆಗಳನ್ನು ಗಮನದಲ್ಲಿಟ್ಟುಕೊಂಡು, ಕೈಗಾರಿಕಾ ಸ್ಥಾವರಗಳು ಮತ್ತು ವಾಹನೋದ್ಯಮಗಳು ಉತ್ಸರ್ಜಿಸುವ ವಾಯು ಮಾಲಿನ್ಯಕಾರಕಗಳನ್ನು ಕುರಿತಂತೆ ಅಥವಾ ಹಡಗು ಮತ್ತು ವಿಮಾನಗಳನ್ನುಳಿದು ಇತರ ಯಾವುದೇ ಮೂಲದಿಂದ ವಾತಾವರಣಕ್ಕೆ ಸೇರಿಸಲಾಗುವ ಯಾವುದೇ ಬಗೆಯ ವಾಯು ಮಾಲಿನ್ಯಕಾರಕಗಳನ್ನು ಕುರಿತಂತೆ ಶಿಷ್ಟತೆಗಳನ್ನು ರೂಪಿಸುವುದು.
- ನೀರಿನ ಧಾರೆ ಮತ್ತು ಬಾವಿಗಳಲ್ಲಿನ ನೀರಿನ ಹರಿಯುವಿಕೆಯ ಲಕ್ಷಣಗಳಿಂದಾಗಿ ನೀರನ್ನು ಕನಿಷ್ಠ ಮಟ್ಟಕ್ಕೆ ತಿಳಿಗೊಳಿಸುವುದೂ ಅಸಾಧ್ಯವಾಗುತ್ತದೆಯೋ ಅಂತಹ ವಿಶಿಷ್ಟ ಸಂಗತಿಗಳನ್ನು ಮತ್ತು ವಿವಿಧ ಪ್ರದೇಶಗಳ ಮಣ್ಣಿನ, ಹವಾಮಾನ ಮತ್ತು ಜಲಸಂಪನ್ಮೂಲಗಳ ವಿಚಿತ್ರ ಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಒಳಚರಂಡಿ ಮತ್ತು ಉದ್ಯಮದ ಜಲತ್ಯಾಜ್ಯಗಳನ್ನು ಸಂಸ್ಕರಿಸಲು ಕಡಿಮೆವೆಚ್ಚದ ಮತ್ತು ವಿಶ್ವಾಸಾರ್ಹವಾದ ವಿಧಾನಗಳನ್ನು ರೂಪಿಸುವುದು.
- ಒಳಚರಂಡಿ ತ್ಯಾಜ್ಯ ಮತ್ತು ಸೂಕ್ತ ಉದ್ಯಮ ತ್ಯಾಜ್ಯಗಳನ್ನು ಕೃಷಿ ಉದ್ದೇಶಗಳಿಗೆ ಬಳಸಿಕೊಳ್ಳುವ ವಿಧಾನಗಳನ್ನು ರೂಪಿಸುವುದು.
- ವರ್ಷದ ಬಹುತೇಕ ಅವಧಿಯಲ್ಲಿ ಲಭ್ಯವಿರುವ ಅತಿ ದುರ್ಬಲ ಹರಿವಿನ ಆಕರಗಳಿಂದ ತ್ಯಾಜ್ಯಗಳನ್ನು ಕನಿಷ್ಠಮಟ್ಟಕ್ಕೂ ತಿಳಿಗೊಳಿಸಲು ಸಾಧ್ಯವಾಗದಿರುವ ಕಠಿಣ ಪರಿಸ್ಥಿತಿಗಳಿಂದಾಗಿ ಒಳಚರಂಡಿ ತ್ಯಾಜ್ಯ ಮತ್ತು ಉದ್ಯಮ ತ್ಯಾಜ್ಯಗಳನ್ನು ಭೂಮಿಯ ಮೇಲೆ ವಿಲೇವಾರಿ ಮಾಡಲು ದಕ್ಷ ವಿಧಾನಗಳನ್ನು ರೂಪಿಸುವುದು.
- ಒಳಚರಂಡಿ ಮತ್ತು ಉದ್ಯಮ ತ್ಯಾಜ್ಯಗಳನ್ನು ಯಾವುದಾದರೂ ನಿರ್ದಿಷ್ಟ ಹರಿವಿನ ಆಕರಕ್ಕೆ ಬಿಡುವಾಗ, ಅಲ್ಲಿಯ ನೀರಿನ ಹರಿವು ಹೊಂದಿರುವ, ಸಾಧಾರಣ ಹವಾಮಾನದಲ್ಲಿ ತ್ಯಾಜ್ಯಗಳನ್ನು ತಿಳಿಗೊಳಿಸಬಲ್ಲ ಕನಿಷ್ಠ ಸಾಮರ್ಥ್ಯ ಮತ್ತು ನೀರಿನ ಅನುಮೋದನೆ ಸಾಧ್ಯ ಸಹಿಷ್ಣುತೆಯ ಮಟ್ಟಗಳನ್ನು ಗಮನದಲ್ಲಿರಿಸಿಕೊಂಡು ತ್ಯಾಜ್ಯಗಳನ್ನು ಸಂಸ್ಕರಿಸಲು ಶಿಷ್ಟತೆಗಳನ್ನು ರೂಪಿಸುವುದು.
- ಯಾವುದೇ ಆದೇಶಗಳನ್ನು ರಚಿಸಲು, ವ್ಯತ್ಯಯಗೊಳಿಸಲು ಅಥವಾ ರದ್ದುಗೊಳಿಸಲು;
    - ನೀರಿನ ಧಾರೆ ಅಥವಾ ಬಾವಿಗಳಿಗೆ ತ್ಯಾಜ್ಯಗಳನ್ನು ವಿಸರ್ಜಿಸುವುದನ್ನು ನಿವಾರಿಸಲು, ನಿಯಂತ್ರಿಸಲು ಅಥವಾ ತಗ್ಗಿಸುವುದಕ್ಕಾಗಿ.
    - ಯಾವುದೇ ವ್ಯಕ್ತಿ ತ್ಯಾಜ್ಯಗಳ ವಿಲೇವಾರಿಗಾಗಿ ಹೊಸ ವ್ಯವಸ್ಥೆಯೊಂದನ್ನು ನಿರ್ಮಿಸಲು ಅಥವಾ ಸದ್ಯ ಇರುವ ವ್ಯವಸ್ಥೆಯನ್ನು ಸುಧಾರಣೆ ಮಾಡಲು, ಬದಲಾಯಿಸಲು ಅಥವಾ ವಿಸ್ತರಿಸಲು ಅಥವಾ ಜಲಮಾಲಿನ್ಯವನ್ನು ನಿವಾರಿಸಲು, ನಿಯಂತ್ರಿಸಲು ಅಥವಾ ತಗ್ಗಿಸಲು ಆವಶ್ಯಕವಾಗಿರುವ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ.
- ಗ್ರಾಮ ಸಾರ ಅಥವಾ ಗೃಹತ್ಯಾಜ್ಯ ಅಥವಾ ಅವೆರಡನ್ನೂ ವಿಸರ್ಜನೆಗಳಿಗೆ ಕಾರಣವಾಗುವ ವ್ಯಕ್ತಿಗಳು ಅನುಪಾಲಿಸ ಬೇಕಾದ ಶಿಷ್ಟತೆಗಳನ್ನು ರೂಪಿಸುವುದು ಮತ್ತು ಗೃಹತ್ಯಾಜ್ಯ ಮತ್ತು ಕೈಗಾರಿಕಾ/ಉದ್ಯಮ ತ್ಯಾಜ್ಯಗಳಿಗೆ ಸಂಬಂಧಿಸಿದಂತೆ ಶಿಷ್ಟತೆಯನ್ನು ರೂಪಿಸುವುದು, ಮಾರ್ಪಡಿಸುವುದು ಅಥವಾ ರದ್ದುಗೊಳಿಸುವುದು.
- ಯಾವುದೇ ನದಿ, ತೊರೆ ಅಥವಾ ಬಾವಿಗಳನ್ನು ಮಲಿನಗೊಳಿಸುವ ಸಂಭವವಿರುವ, ನಿರ್ಮಿಸಬಹುದಾದ ಯಾವುದೇ ಕೈಗಾರಿಕೆಯ ಸ್ಥಳದ ಕುರಿತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
- ವಾಯು ಮಾಲಿನ್ಯವನ್ನು ಉಂಟು ಮಾಡುವ ಸಂಭವವಿರುವ ಯಾವುದೇ ಕೈಗಾರಿಕೆಯ ಸ್ಥಾಪನಾ ಸ್ಥಳದ ಸೂಕ್ತತೆಯ ಕುರಿತಾಗಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
- ಮಂಡಳಿಯು ಕೇಂದ್ರ ಮಂಡಳಿಯಿಂದ ಅಥವಾ ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ವಹಿಸಲಾಗುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

5ಎ.2: 2017–18 ನೇ ಸಾಲಿನ ಮಂಡಳಿಯ ಚಟುವಟಿಕೆಗಳು

5ಎ.2.1: ಸಂಸ್ಥೆಗಳ ವ್ಯಾಪ್ತಿ

ಮಂಡಳಿಯು 1974ರಲ್ಲಿ ಸ್ಥಾಪಿತಗೊಂಡಿತು. 1974ರ ಜಲ ಕಾಯಿದೆ ಮತ್ತು 1981ರ ವಾಯು ಕಾಯಿದೆಯ ಅನುಗುಣವಾಗಿ ವಾಯು ಮತ್ತು ಜಲ ಮಾಲಿನ್ಯ ನಿವಾರಣೆ, ನಿಯಂತ್ರಣ ಮಾಡಲು ಬದ್ದವಾಗಿದೆ. ಶಾಸನ ಪಾಲನೆ, ಶಿಕ್ಷಣ, ಜಾಗೃತಿ ಮೂಡಿಸುವಿಕೆ, ವೈಜ್ಞಾನಿಕ ಮತ್ತು ತಾಂತ್ರಿಕ ಪರಿಹಾರಗಳನ್ನು ನೀಡುವುದರ ಮೂಲಕ ತನ್ನ ಧ್ಯೇಯಗಳಾದ ಸ್ವಚ್ಛ ಮತ್ತು ಹಸಿರು ಪರಿಸರವನ್ನು ನಿರ್ಮಾಣ ಮಾಡುತ್ತಿದೆ.

ಮಂಡಳಿಯು 2017–18 ನೇ ಸಾಲಿನಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳನ್ನು ಈ ಮುಂದೆ ವಿವರಿಸಿದೆ:

ಕೋಷ್ಟಕ 5ಎ.1: ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳ ಸಂಕ್ಷಿಪ್ತ ವಿವರ

ವಿವರಗಳು	ವರ್ಗ	31.03.2018 ರಂತೆ ಇರುವ ಸಂಖ್ಯೆ	ಕಾರ್ಯ ನಿರತ	ಮುಚ್ಚಿರುವ	ವೈಟಿಸಿ
ಕೈಗಾರಿಕೆಗಳು	ಕೆಂಪು	4822	2322	1915	585
	ಕಿತ್ತಳೆ	9532	5643	2723	1166
	ಹಸಿರು	20796	11888	5690	3218
	ಬಿಳಿ	4185	2755	836	594
ಕಲ್ಲುಪುಡಿ ಮಾಡುವ ಘಟಕಗಳು	ಕಿತ್ತಳೆ	4156	1713	1870	573
ಹತ್ತು ಎಕರೆಗಳಿಗಿಂತ ಹೆಚ್ಚಿನ ಬಡಾವಣೆಗಳು	ಹಸಿರು	1751	55	8	1688
ಮೂಲಸೌಲಭ್ಯ ಪರಿಯೋಜನೆಗಳು (ಅಪಾರ್ಟ್‌ಮೆಂಟುಗಳು, ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು ಮುಂತಾದುವು)	ಕೆಂಪು	1211	650	6	555
	ಕಿತ್ತಳೆ	2579	695	19	1865
	ಹಸಿರು	1286	196	218	872
ಅತಿಥಿ ಸತ್ಕಾರ ಸಂಸ್ಥೆಗಳು (ಹೋಟೆಲುಗಳು, ರೆಸಾರ್ಟುಗಳು ಇತ್ಯಾದಿ) ಎ. ಒಟ್ಟಾರೆ 100 ಕೆ.ಎಲ್.ಡಿ ಮತ್ತು ಹೆಚ್ಚಿನ ತ್ಯಾಜ್ಯ ನೀರಿನ ಉತ್ಪಾದನೆ ಆಗುವ ಹೋಟೆಲ್/ರೆಸಾರ್ಟ್ಗಳು	ಕೆಂಪು	149	106	6	37
ಬಿ. ಹೋಟೆಲುಗಳು (3 ನಕ್ಷತ್ರಕ್ಕಿಂತ ಕಡಿಮೆ ದರ್ಜೆಯ) ಅಥವಾ 20 ಕ್ಕಿಂತ ಹೆಚ್ಚಿನ ಹಾಗೂ ನೂರಕ್ಕಿಂತ ಕಡಿಮೆ ಕೊಠಡಿಗಳಿರುವ ಹಾಗೂ 100 ಕೆ.ಎಲ್.ಡಿ ಗಿಂತ ಕಡಿಮೆ ಪ್ರಮಾಣದ ತ್ಯಾಜ್ಯ ನೀರಿನ ಉತ್ಪಾದನೆ ಹಾಗೂ ಕಲ್ಲಿದ್ದಲು/ ಎಣ್ಣೆ ಬಳಸುವ ಬಾಯ್ಲರ್‌ಗಳನ್ನು ಹೊಂದಿರುವ ಹೋಟೆಲು/ರೆಸಾರ್ಟ್ಗಳು,	ಕಿತ್ತಳೆ	299	220	13	66
ಸಿ. 20 ಕ್ಕಿಂತ ಹೆಚ್ಚಿನ ಕೊಠಡಿಗಳಿರುವ, 10 ಕೆ.ಎಲ್.ಡಿ ಗಿಂತ ಕಡಿಮೆ ಪ್ರಮಾಣದ ತ್ಯಾಜ್ಯ ನೀರಿನ ಉತ್ಪತ್ತಿಯಾಗುವ ಹಾಗೂ ಬಾಯ್ಲರ್	ಹಸಿರು	593	380	125	88

ಇಲ್ಲದ, ಅಪಾಯಕಾರಿ ತ್ಯಾಜ್ಯ ಉತ್ಪತ್ತಿಯಾಗದ ಹೋಟೆಲು/ರೆಸಾರ್ಟುಗಳು					
ಆಸ್ಪತ್ರೆಗಳು / ಹೆಚ್.ಸಿ.ಇ ಗಳು ಅ. ಇನ್‌ಸಿನಿರೇಟರ್ ಹೊಂದಿರುವ ಅಥವಾ ಹೊಂದದಿರುವ, 100 ಕೆ.ಎಲ್.ಡಿ ಗಿಂತ ಹೆಚ್ಚಿನ ತ್ಯಾಜ್ಯ ನೀರು ಉತ್ಪತ್ತಿ ಮಾಡುವ ಘಟಕಗಳು	ಕೆಂಪು	518	502	4	12
ಬಿ. ಇನ್‌ಸಿನಿರೇಟರ್ ಹೊಂದದಿರುವ ಹಾಗೂ 100 ಕೆ.ಎಲ್.ಡಿ ಗಿಂತ ಕಡಿಮೆ ತ್ಯಾಜ್ಯ ನೀರು ಉತ್ಪತ್ತಿ ಮಾಡುವ ಘಟಕಗಳು	ಕಿತ್ತಳೆ	904	851	32	21
ಸಿ. ಹಾಸಿಗೆಗಳಿಲ್ಲದ ಹಾಗೂ 30 ಕ್ಕಿಂತ ಕಡಿಮೆ ಹಾಸಿಗೆಗಳಿರುವ ಘಟಕಗಳು	ಬಿಳಿ	32318	31060	1244	14
ಗಣಿ	ಕೆಂಪು	750	202	427	121
ಕಾಫ್ಲೀ ಎಸ್ಟೇಟುಗಳು	ಕಿತ್ತಳೆ	2748	2596	150	2
ಅ) D.G. Set 250 ಕೆ.ವಿ.ಎ ಗಿಂತ ಕಡಿಮೆಯಿರುವ ದೂರವಾಣಿ ಗೋಪುರಗಳು	ಬಿಳಿ	12379	12184	84	111
ಆ) ಡೀಸೆಲ್ ಜನರೇಟರ್ ಅನ್ನು ವಾಯುಮಾಲಿನ್ಯಕಾರಕ ಮೂಲವಾಗುಳ್ಳ ಬ್ಯಾಂಕುಗಳು, ಕಲ್ಯಾಣ ಮಂಟಪಗಳು, ಕಛೇರಿ ಸಮುಚ್ಚಯಗಳು, ಸಂಘಟನಾ ಕಛೇರಿಗಳು ಇತ್ಯಾದಿ.	ಬಿಳಿ	896	523	310	63
ಒಟ್ಟು		**101872**	**74541**	**15680**	**11651**

5ಎ.2.2: 2017–18 ರಲ್ಲಿ ಪ್ರಾದೇಶಿಕ ಕಚೇರಿಗಳು ನಡೆಸಿರುವ ಪರಿವೀಕ್ಷಣೆಗಳು

ಕೆಂಪು, ಕಿತ್ತಳೆ ಮತ್ತು ಹಸಿರು ವರ್ಗಗಳಲ್ಲಿರುವ ಕೈಗಾರಿಕೆ/ ಸಂಸ್ಥೆಗಳ ಪರಿವೀಕ್ಷಣೆಗೆ ಮಂಡಳಿಯು ಒಂದು ವೇಳಾಪಟ್ಟಿಯನ್ನು ರೂಪಿಸಿದೆ. ಕೆಂಪು ವರ್ಗದ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಕನಿಷ್ಠ ಮೂರು ತಿಂಗಳಲ್ಲಿ ಒಮ್ಮೆಯಾದರೂ, ಕಿತ್ತಳೆ ವರ್ಗದ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಒಂದು ವರ್ಷದಲ್ಲಿ ಒಮ್ಮೆಯಾದರೂ ಪರಿವೀಕ್ಷಿಸಲಾಗುತ್ತಿದೆ. ಇದಲ್ಲದೆ, ಕೆಂಪು ವರ್ಗದ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಒಂದು ವರ್ಷದಲ್ಲಿ ಒಮ್ಮೆಯಾದರೂ ಮತ್ತು ಕಿತ್ತಳೆ ವರ್ಗದ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಕನಿಷ್ಠ ಮೂರು ವರ್ಷಗಳಲ್ಲಿ ಒಮ್ಮೆಯಾದರೂ ಪರಿವೀಕ್ಷಿಸಲಾಗುತ್ತಿದೆ. ತೃಪ್ತಿಕರವಾದ ಅನುಸರಣೆಯ ಇತಿಹಾಸ ಹೊಂದಿದ ಹಸಿರುವ ವರ್ಗದ ಕೈಗಾರಿಕೆಗಳಿಗೆ ಪರಿಸರೀಯ ಅನುಸರಣಾ ತಪಾಸಣೆಯಿಂದ ವಿನಾಯಿತಿ ನೀಡಲಾಗಿದೆ. ತಾಂತ್ರಿಕ ಸಿಬ್ಬಂದಿಯ ಕೊರತೆಯಿಂದಾಗಿ ಪರಿವೀಕ್ಷಣೆಯ ಆವರ್ತನೆಯನ್ನು ಕಾಯ್ದುಕೊಳ್ಳುವುದರಲ್ಲಿ ಸ್ವಲ್ಪ ಕೊರತೆಯಾಗಿದೆ. 2017–18 ರಲ್ಲಿ ಒಟ್ಟು 22466 ಪರಿವೀಕ್ಷಣೆಗಳನ್ನು ನಡೆಸಲಾಗಿದೆ. ನಡೆಸಿದ ಪರಿವೀಕ್ಷಣೆಗಳ ಸಾರಾಂಶ ಹೀಗಿದೆ:

ಕೋಷ್ಟಕ: 5ಎ.2: ಪರಿವೀಕ್ಷಣೆಗಳ ಸಾರಾಂಶ

ವಿವರಗಳು		2017–18 ರಲ್ಲಿ ನಡೆಸಿದ ಪರಿವೀಕ್ಷಣೆಗಳು										
ವಲಯಗಳು		ಬೆಂಗಳೂರು ನಗರ	ಬೆಂಗಳೂರು ಗ್ರಾಮಾಂತರ	ಬೆಂಗಳೂರು ದಕ್ಷಿಣ	ಬೆಂಗಳೂರು ಉತ್ತರ	ಮೈಸೂರು	ಮಂಗಳೂರು	ಬಳ್ಳಾರಿ	ಚಿತ್ರದುರ್ಗ	ಧಾರವಾಡ	ಕಲಬುರ್ಗಿ	ಒಟ್ಟು
ಕೈಗಾರಿಕೆಗಳು	ದೊಡ್ಡ	222	535	576	301	515	140	386	134	558	187	3554
	ಮಧ್ಯಮ	168	106	207	119	71	58	26	70	101	34	960
	ಸಣ್ಣ	897	514	1136	493	935	615	567	530	952	291	6930
ಕಲ್ಲುಪುಡಿ ಮಾಡುವ ಘಟಕ		0	219	153	40	146	128	152	412	605	369	2224
ಹೆಚ್ ಡಬ್ಲ್ಯುಎಂ		22	45	57	36	11	21	0	5	38	7	242
ಪ್ಲಾಸ್ಟಿಕ್		3	5	31	22	5	47	8	17	32	0	170
ಹೆಚ್‌ಸಿಇ		115	37	43	14	154	83	34	138	81	51	750
ಸಾಮಾನ್ಯ ಬಿ.ಎಂ.ಡಬ್ಲ್ಯು ಸೌಲಭ್ಯ		0	0	4	2	2	8	5	14	9	12	56
ಸಿ ಇ ಟಿ ಪಿ		4	1	9	9	0	3	0	6	0	1	33
ಎಂ ಎಸ್ ಡಬ್ಲ್ಯು		0	8	13	15	16	28	17	18	34	33	182
ಗಣಿಗಳು		0	0	0	0	0	0	75	26	21	2	124
ಕಾಫೀ ಎಸ್ಟೇಟುಗಳು		0	0	0	0	257	139	0	0	0	0	396
ಬಡಾವಣೆಗಳು		0	15	49	4	9	0	9	15	13	15	129
ಮೂಲಸೌಲಭ್ಯ		325	136	1031	42	3	88	0	5	47	0	1677
ಸ್ಥಳೀಯ ಸಂಸ್ಥೆಗಳು		48	6	7	17	20	14	6	30	32	2	182
ದೂರುಗಳು		122	69	171	61	111	182	21	120	85	41	983
ಇತರೆ		243	487	975	969	241	352	1	415	159	32	3874
ಒಟ್ಟು		**2169**	**2183**	**4462**	**2144**	**2496**	**1906**	**1307**	**1955**	**2767**	**1077**	**22466**

ಕೋಷ್ಟಕ 5ಎ.3: ಕೈಗಾರಿಕೆಗಳ ಜಲಮಾಲಿನ್ಯ ನಿಯಂತ್ರಣದ ಸ್ಥಿತಿ: ಕೈಗಾರಿಕೆಗಳ ಜಲಮಾಲಿನ್ಯ ನಿಯಂತ್ರಣದ ಸ್ಥಿತಿಯ ವಿವರಗಳು ಹೀಗಿದೆ:

ವಲಯ ಕಛೇರಿ	ವರ್ಗ	ಕೈಗಾರಿಕಾ & ಕೊಳಚೆ ತ್ಯಾಜ್ಯದ ವಿವರ	ಒಟ್ಟು ಕಾರ್ಯ ನಿರತ ಕೈಗಾರಿಕೆಗಳ ಸಂಖ್ಯೆ	ತ್ಯಾಜ್ಯ ಸಂಸ್ಕರಣ ಘಟಕದ ನಿರ್ವಹಣೆ	ಒಳಚರಂಡಿಗೆ ಸಂಪರ್ಕ	ಸಾಮಾನ್ಯ ತ್ಯಾಜ್ಯ ಸಂಸ್ಕರಣ ಘಟಕದ ಜೊತೆ ಸಂಪರ್ಕ	ಬೆಂ.ನೀ.ಸ & ಒ.ಮಂಡಳಿಗೆ ಕೊಷಚೆ ತ್ಯಾಜ್ಯ ಸಾಗಿಸುವ ಕೈಗಾರಿಕೆಗಳ ಸಂಖ್ಯೆ	ಉಲ್ಲಂಘನೆದಾರರು (ಸಮರ್ಪಕವಾದ ಸೌಲಭ್ಯವಿಲ್ಲ)
ಬೆಂಗಳೂರು ನಗರ	ಕೆಂಪು	ಕೈಗಾರಿಕಾ ತ್ಯಾಜ್ಯ	305	43	0	262	0	0
		ರೊಚ್ಚು ನೀರು	414	128	286	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	232	139	6	87	0	0
		ರೊಚ್ಚು ನೀರು	615	139	475	0	1	0
ಬೆಂಗಳೂರು ಪೂರ್ವ	ಕೆಂಪು	ಕೈಗಾರಿಕಾ ತ್ಯಾಜ್ಯ	135	60	0	75	0	0
		ರೊಚ್ಚು ನೀರು	195	194	1	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	128	99	0	25	0	4
		ರೊಚ್ಚು ನೀರು	327	326	1	0	0	0
ಬೆಂಗಳೂರು ದಕ್ಷಿಣ	ಕೆಂಪು	ಕೈಗಾರಿಕಾ ತ್ಯಾಜ್ಯ	369	169	0	198	0	2
		ರೊಚ್ಚು ನೀರು	548	532	15	1	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	340	267	12	60	0	1
		ರೊಚ್ಚು ನೀರು	836	779	56	0	0	1
ಬೆಂಗಳೂರು ಉತ್ತರ	ಕೆಂಪು	ಕೈಗಾರಿಕಾ ತ್ಯಾಜ್ಯ	193	63	0	130	0	0
		ರೊಚ್ಚು ನೀರು	272	257	14	1	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	107	71	2	32	1	1
		ರೊಚ್ಚು ನೀರು	380	348	31	1	0	0
ಮೈಸೂರು	ಕೆಂಪು	ಕೈಗಾರಿಕಾ ತ್ಯಾಜ್ಯ	148	148	0	0	0	0
		ರೊಚ್ಚು ನೀರು	22	22	0	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	284	284	0	0	0	0
		ರೊಚ್ಚು ನೀರು	413	402	11	0	0	0
ಮಂಗಳೂರು	ಕೆಂಪು	ಕೈಗಾರಿಕಾ ತ್ಯಾಜ್ಯ	85	82	1	0	0	2
		ರೊಚ್ಚು ನೀರು	125	124	1	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	461	445	2	13	0	1
		ರೊಚ್ಚು ನೀರು	1026	1005	21	0	0	0
ಬಳ್ಳಾರಿ	ಕೆಂಪು	ಕೈಗಾರಿಕಾ ತ್ಯಾಜ್ಯ	32	32	0	0	0	0
		ರೊಚ್ಚು ನೀರು	202	202	0	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	132	112	17	0	0	3
		ರೊಚ್ಚು ನೀರು	527	117	0	0	0	10
ಚಿತ್ರದುರ್ಗ	ಕೆಂಪು	ಕೈಗಾರಿಕಾ ತ್ಯಾಜ್ಯ	90	77	2	11	0	0
		ರೊಚ್ಚು ನೀರು	97	97	0	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	363	250	69	4	0	40
		ರೊಚ್ಚು ನೀರು	622	617	5	0	0	0
ಧಾರವಾಡ	ಕೆಂಪು	ಕೈಗಾರಿಕಾ ತ್ಯಾಜ್ಯ	134	134	0	0	0	0
		ರೊಚ್ಚು ನೀರು	201	199	2	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	195	180	9	0	0	6
		ರೊಚ್ಚು ನೀರು	559	554	5	0	0	0
ಕಲಬುರ್ಗಿ	ಕೆಂಪು	ಕೈಗಾರಿಕಾ ತ್ಯಾಜ್ಯ	79	79	0	0	0	0
		ರೊಚ್ಚು ನೀರು	85	80	5	0	0	0
	ಕಿತ್ತಳೆ	ಕೈಗಾರಿಕಾ ತ್ಯಾಜ್ಯ	123	106	17	0	0	0
		ರೊಚ್ಚು ನೀರು	151	131	20	0	0	0

ಕೋಷ್ಟಕ: 5ಎ.4: ಕೈಗಾರಿಕೆಗಳ ವಾಯುಗುಣಮಟ್ಟ ನಿಯಂತ್ರಣ ಸ್ಥಿತಿ

ಪ್ರಾದೇಶಿಕ ಕಛೇರಿ	ವರ್ಗ	ಒಟ್ಟು ಕಾರ್ಯನಿರತ ಕೈಗಾರಿಕೆಗಳ ಸಂಖ್ಯೆ	ಕಾರ್ಯನಿರತ ಎಪಿಸಿ ವ್ಯವಸ್ಥೆ	ಉಲ್ಲಂಘನೆದಾರರು (ಸಮರ್ಪಕವಾದ ಸೌಲಭ್ಯವಿಲ್ಲ)
ಬೆಂಗಳೂರು ನಗರ	ಕೆಂಪು	410	410	0
	ಕಿತ್ತಳೆ	570	570	0
ಬೆಂಗಳೂರು ಪೂರ್ವ	ಕೆಂಪು	181	181	0
	ಕಿತ್ತಳೆ	302	302	0
ಬೆಂಗಳೂರು ದಕ್ಷಿಣ	ಕೆಂಪು	510	510	0
	ಕಿತ್ತಳೆ	652	652	0
ಬೆಂಗಳೂರು ಉತ್ತರ	ಕೆಂಪು	259	259	0
	ಕಿತ್ತಳೆ	291	291	0
ಮೈಸೂರು	ಕೆಂಪು	201	201	0
	ಕಿತ್ತಳೆ	394	394	0
ಮಂಗಳೂರು	ಕೆಂಪು	114	113	1
	ಕಿತ್ತಳೆ	916	916	0
ಬಳ್ಳಾರಿ	ಕೆಂಪು	184	179	5
	ಕಿತ್ತಳೆ	575	564	11
ಚಿತ್ರದುರ್ಗ	ಕೆಂಪು	99	99	0
	ಕಿತ್ತಳೆ	620	606	14
ಧಾರವಾಡ	ಕೆಂಪು	187	187	0
	ಕಿತ್ತಳೆ	588	588	0
ಕಲಬುರ್ಗಿ	ಕೆಂಪು	88	88	0
	ಕಿತ್ತಳೆ	179	179	0

5ಎ.2.3: ಸಮ್ಮತಿಯುಕ್ತ ಆಡಳಿತದ ಮೂಲಕ ಮಾಲಿನ್ಯ ನಿಯಂತ್ರಣ

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ಮತ್ತು 1981ರ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಗಳ ಉಪಬಂಧಗಳ ಅಡಿಯಲ್ಲಿ ಉದ್ಯಮ ತ್ಯಾಜ್ಯ ಅಥವಾ ಕೊಳಚೆ ತ್ಯಾಜ್ಯವನ್ನು ವಿಸರ್ಜಿಸುವ ಅಥವಾ ವಾಯು ಮಾಲಿನ್ಯಕಾರಕ ಅನಿಲಗಳನ್ನು ಉತ್ಸರ್ಜಿಸುವ ಕೈಗಾರಿಕೆಗಳು/ಸಂಸ್ಥೆಗಳು/ಉದ್ಯಮಗಳು ತ್ಯಾಜ್ಯ ಸಂಸ್ಕರಣಾ ಸ್ಥಾವರಗಳನ್ನು ಸ್ಥಾಪಿಸಬೇಕು. ತ್ಯಾಜ್ಯಗಳ ಮತ್ತು ಅನಿಲಗಳ ನಿಯಂತ್ರಿತ ಬಿಡುಗಡೆ ಮಾಡಲು ಮಂಡಳಿಯ ಸಮ್ಮತಿ ಕಡ್ಡಾಯವಾಗಿದೆ. ವಿವರಗಳು ಈ ಮುಂದಿನಂತಿವೆ:

ಸ್ಥಾಪನೆಗೆ ಮುಂಚೆ ಹೊಸ ಕೈಗಾರಿಕೆಗಳಿಗೆ ಅಥವಾ ಈಗಿರುವ ಕೈಗಾರಿಕೆಗಳಿಗೆ ವಿಸ್ತರಣೆ/ ಉತ್ಪಾದನೆ/ವಿವಿಧೀಕರಣಗಳ ಸಂದರ್ಭದಲ್ಲಿ 'ಸ್ಥಾಪನಾ ಸಮ್ಮತಿ ಪತ್ರ'.

ಹೊಸ ಕೈಗಾರಿಕೆಗಳಿಗೆ ಕಾರ್ಯಾರಂಭ ಮಾಡುವಾಗ, ಕಾರ್ಯನಿರತ ಕೈಗಾರಿಕೆಗಳಿಗೆ ಸಮ್ಮತಿಯನ್ನು ಪುನರೂರ್ಜಿತಗೊಳಿಸಿಕೊಳ್ಳಲು ' ಚಾಲನಾ ಸಮ್ಮತಿ ಪತ್ರ'.

5ಎ.2.4: ಸಮ್ಮತಿ ಅರ್ಜಿಗಳ ವಿಲೇವಾರಿ ಸ್ಥಿತಿಗತಿ

ಜಲ ಮತ್ತು ವಾಯು ಕಾಯ್ದೆಗಳ ಅಡಿಯಲ್ಲಿ ಸಮ್ಮತಿಗಾಗಿ ಸ್ವೀಕರಿಸಿದ/ಇತ್ಯರ್ಥವಾಗದಿರದ/ತಿರಸ್ಕರಿಸಿದ ಅರ್ಜಿಗಳ ವಿವರ ಮುಂದಿನಂತಿದೆ.

ಕೋಷ್ಟಕ: 5ಎ.5: ಕಾರ್ಯಾರಂಭಕ್ಕಾಗಿ ಸಮ್ಮತಿ ಪತ್ರದ ಅರ್ಜಿಗಳ ಸ್ಥಿತಿಯ ವಿವರಗಳು

ವಿವರಗಳು	ಅರ್ಜಿಗಳ ಸಂಖ್ಯೆ
ಸ್ವೀಕರಿಸಿದ ಸಮ್ಮತಿ ಪತ್ರದ ಅರ್ಜಿಗಳ ಸಂಖ್ಯೆ	2268
ಕಾರ್ಯಾರಂಭ ಸಮ್ಮತಿ ಪತ್ರಗಳ ನೀಡಿದ ಸಂಖ್ಯೆ	1539
ತಿರಸ್ಕರಿಸಿದ ಕಾರ್ಯಾರಂಭ ಸಮ್ಮತಿ ಪತ್ರಗಳ ಸಂಖ್ಯೆ	28
ಸಮ್ಮತಿ ಅರ್ಜಿಗಳನ್ನು ಹಿಂತಿರುಗಿಸಿದ ಸಂಖ್ಯೆ	221
ದಾಖಲಿಸಿದ ಸಮ್ಮತಿ ಪತ್ರಗಳ ಸಂಖ್ಯೆ	13
ಬಾಕಿ ಇರುವ ಸಮ್ಮತಿ ಪತ್ರಗಳ ಸಂಖ್ಯೆ	467

ಕೋಷ್ಟಕ: 5ಎ.6: ವಿಸ್ತರಣೆಗಾಗಿ ಸಮ್ಮತಿ ಪತ್ರದ ಅರ್ಜಿಗಳ ಸ್ಥಿತಿಯ ವಿವರಗಳು

ವಿವರಗಳು	ಅರ್ಜಿಗಳ ಸಂಖ್ಯೆ
ಸ್ವೀಕರಿಸಿದ ಸಮ್ಮತಿ ಪತ್ರದ ಅರ್ಜಿಗಳ ಸಂಖ್ಯೆ	461
ಕಾರ್ಯಾರಂಭ ಸಮ್ಮತಿ ಪತ್ರಗಳ ನೀಡಿದ ಸಂಖ್ಯೆ	270
ತಿರಸ್ಕರಿಸಿದ ಕಾರ್ಯಾರಂಭ ಸಮ್ಮತಿ ಪತ್ರಗಳ ಸಂಖ್ಯೆ	4
ಸಮ್ಮತಿ ಅರ್ಜಿಗಳನ್ನು ಹಿಂತಿರುಗಿಸಿದ ಸಂಖ್ಯೆ	61
ದಾಖಲಿಸಿದ ಸಮ್ಮತಿ ಪತ್ರಗಳ ಸಂಖ್ಯೆ	2
ಬಾಕಿ ಇರುವ ಸಮ್ಮತಿ ಪತ್ರಗಳ ಸಂಖ್ಯೆ	124

ಕೋಷ್ಟಕ: 5ಎ.7: ಚಾಲನಾ ಸಮ್ಮತಿ ಪತ್ರದ ಅರ್ಜಿಗಳ ಸ್ಥಿತಿಯ ವಿವರ

ವಿವರಗಳು	ವಾಯು ಕಾಯ್ದೆ	ಜಲ ಕಾಯ್ದೆ	ಎರಡು ಕಾಯ್ದೆಗಳು	ಒಟ್ಟು
ಸಮ್ಮತಿ ಪತ್ರಕ್ಕಾಗಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ	870	1644	4111	6625
ಸಮ್ಮತಿ ಪತ್ರಗಳ ನೀಡಿದ ಸಂಖ್ಯೆ	470	1122	2430	4022
ತಿರಿಸ್ಕರಿಸಿದ ಸಮ್ಮತಿ ಪತ್ರ ಅರ್ಜಿಗಳ ಸಂಖ್ಯೆ	1	2	12	15
ಸಮ್ಮತಿ ಅರ್ಜಿಗಳನ್ನು ಹಿಂತಿರುಗಿಸಿದ ಸಂಖ್ಯೆ	155	158	402	715
ದಾಖಲಿಸಿದ ಸಮ್ಮತಿ ಪತ್ರಗಳ ಸಂಖ್ಯೆ	1	4	12	17
ಬಾಕಿ ಇರುವ ಸಮ್ಮತಿ ಪತ್ರಗಳ ಸಂಖ್ಯೆ	243	358	1255	1856

5ಎ.2.5: ಐಎಸ್ಒ 14001 ಶಿಷ್ಟತೆಗಳ ಪ್ರವರ್ತನೆ.

ಅಂತರರಾಷ್ಟ್ರೀಯ ಶಿಷ್ಟತೆ ಸಂಸ್ಥೆಯು ಐಎಸ್ಒ 14000 ಸರಣಿಯ ಶಿಷ್ಟತೆಗಳನ್ನು ಪ್ರಕಟಿಸಿದೆ. ಇದು ಸಂಸ್ಥೆಗೆ ಪಾರಿಸಾರಿಕ ವ್ಯವಸ್ಥಾಪನೆಗೆ ಮತ್ತು ಪಾರಿಸರಿಕ ಸಂಗತಿಗಳನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಿಲು ಒಂದು ಒಳ್ಳೆಯ ರಚನಾ ವಿನ್ಯಾಸವನ್ನೂ ಮತ್ತು ಕ್ರಮ ಬದ್ದವಾದ ವಿಧಾನವನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ. ಐಎಸ್ಒ 14000 ಸರಣಿಯ ಶಿಷ್ಟತೆಗೆ ಬದ್ದವಾದ ಪಾರಿಸಾರಿಕ ವ್ಯವಸ್ಥಾಪನಾ ಪದ್ಧತಿಯನ್ನು ರೂಪಿಸುವುದರಿಂದ ಕೈಗಾರಿಕೆಗಳಿಗೆ ಕಾನೂನಿನ ಕ್ರಮಬದ್ಧ ಅನುಪಾಲನೆ, ಮಾಲಿನ್ಯ ನಿವಾರಣೆ ಮತ್ತು ನಿರಂತರವಾಗಿ ಪಾರಿಸಾರಿಕ ಪಾಲನೆಯನ್ನು ಮಾಡುವ ಸಾಮರ್ಥ್ಯ ಉಂಟಾಗುತ್ತದೆ. ಅದು ಕೈಗಾರಿಕೆಗಳಿಗೆ ಪರಿಸರ ಸಂರಕ್ಷಣೆಯ ಕುರಿತು ತಮಗಿರುವ ಬದ್ಧತೆಯನ್ನು ಪ್ರದರ್ಶಿಸಲು ಸಮರ್ಥರನ್ನಾಗಿಸುತ್ತದೆ.

ಮಂಡಳಿಯು ತನ್ನ 139ನೆಯ ಸಭೆಯಲ್ಲಿ ಹೆಚ್ಚಿನ ಮಟ್ಟದ ಮಾಲಿನ್ಯಕಾರಕ ಕೈಗಾರಿಕೆಗಳಿಗೆ ಐಎಸ್ಒ 14001 ಪ್ರಮಾಣೀಕರಣವನ್ನು ಕಡ್ಡಾಯ ಮಾಡಬೇಕೆಂದು ಶಿಫಾರಸು ಮಾಡಿದೆ. ದಿನಾಂಕ: 31.03.2018 ರಂತೆ 402 ಕೈಗಾರಿಕೆಗಳು ಐ ಎಸ್ ಒ 14001 ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಾರೆ.

ದಿನಾಂಕ: 26.03.2015 ರಂದು ನಡೆದ ತನ್ನ 197ನೆಯ ಸಭೆಯಲ್ಲಿ ಮಂಡಳಿಯು 'ಹೆಚ್ಚಿನ ಮಟ್ಟದ ಮಾಲಿನ್ಯಕಾರಕ ಕೈಗಾರಿಕೆ' ಗಳು ಐ ಎಸ್ ಒ 14001 ಶಿಷ್ಟತೆ/ಅಗತ್ಯಗಳಿಗೆ ಅನುಸಾರವಾಗಿ' ಪಾರಿಸಾರಿಕ ವ್ಯವಸ್ಥಾಪನಾ ಪದ್ಧತಿಯನ್ನು ಸ್ವಯಂಪ್ರೇರಣೆಯಿಂದ ಅಳವಡಿಸಿಕೊಳ್ಳಬೇಕೆಂದು ನಿರ್ಣಯಿಸಿತು.

ಕೋಷ್ಟಕ 5ಎ.8: ಐಎಸ್ಒ 14001ರ ಅನ್ವಯ ಪ್ರಮಾಣೀತವಾದ ಕೈಗಾರಿಕೆಗಳ ಸಂಖ್ಯೆಯ ವಿವರ.

ಕ್ರಮ ಸಂಖ್ಯೆ	ಪ್ರಾದೇಶಿಕ ಕಚೇರಿ	ಐಎಸ್ಒ 14001 ಪ್ರಮಾಣ ಪತ್ರ ಪಡೆದ ಕೈಗಾರಿಕೆಗಳ ಸಂಖ್ಯೆ
1	ಬೆಂಗಳೂರು ನಗರ	34
2	ಬೆಂಗಳೂರು ಪೂರ್ವ	40
3	ಬೆಂಗಳೂರು ದಕ್ಷಿಣ	70
4	ಬೆಂಗಳೂರು ಉತ್ತರ	45
5.	ಮೈಸೂರು	70
6	ಮಂಗಳೂರು	38

7	ಬಳ್ಳಾರಿ	16
8	ಚಿತ್ರದುರ್ಗ	21
9	ಧಾರವಾಡ	50
10	ಕಲಬುರ್ಗಿ	18
ಒಟ್ಟು		**402**

5ಎ.2.6: ಜಲ ಉಪಕರ ನಿಯಮಗಳ ಅನುಷ್ಠಾನ

ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಕಾಯ್ದೆ ಮತ್ತು ನಿಯಮಗಳಿಗನುಸಾರವಾಗಿ ಗೊತ್ತುಪಡಿಸಿರುವ ದರಗಳಲ್ಲಿ ಬಳಸಿಕೊಂಡ ನೀರಿಗಾಗಿ ಕೈಗಾರಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಉಪಕರವನ್ನು ಪಾವತಿಸಬೇಕು. ಜಲ ಉಪಕರವು ಮಂಡಳಿಗೆ ಒಂದು ಆದಾಯವಾಗಿದೆ. ಜಲ ತೆರಿಗೆಯು 2017–18 ನೇ ಆರ್ಥಿಕ ವರ್ಷದಲ್ಲಿ ಅಂದಾಜಿಸಿದ ಮತ್ತು ಸಂಗ್ರಹಿಸಿದ ಜಲ ಉಪಕರದ ವಿವರಗಳು ಕೆಳಕಂಡಂತ್ತಿವೆ.

ಕೋಷ್ಟಕ: 5ಎ.9: ಜಲ ಉಪಕರದ ಅಂದಾಜು ಮತ್ತು ಸಂಗ್ರಹದ ವಿವರಗಳು

ವಿವರಗಳು	ಸ್ಥಳೀಯ ಸಂಸ್ಥೆಗಳು	ಕೈಗಾರಿಕೆಗಳು
ಅಂದಾಜಿಸಿದ ಒಟ್ಟು ಜಲ ಉಪಕರ (ರೂ.ಗಳಲ್ಲಿ)	93990575.68	336637737.90
ಸಂಗ್ರಹಿಸಿದ ಒಟ್ಟು ಉಪಕರ (ರೂ.ಗಳಲ್ಲಿ)	25458109.00	1491684.00

ಕಾನೂನು ಮತ್ತು ನ್ಯಾಯ ಸಚಿವಾಲಯ, ಭಾರತ ಸರ್ಕಾರ ತೆರಿಗೆ ಕಾನೂನು (ತಿದ್ದುಪಡಿ) ಕಾಯಿದೆ, 2017 ಅನ್ನು ಜಾರಿಗೆ ತಂದಿದೆ ಮತ್ತು ಮೇ 5, 2017 ರಂದು ಭಾರತದ ಗೆಜ್ಜೆಟ್ ಪ್ರಕಟಗೊಂಡಿದೆ. ಈ ಕಾಯ್ದೆಯಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಉಪಕರ ಕಾಯ್ದೆ, 1977 ಅನ್ನು ಸೆಕ್ಷನ್ 18(1) ಮತ್ತು ಮೂರನೇ ಷೆಡ್ಯೂಲ್‌ನಲ್ಲಿ ಸಂಪೂರ್ಣ ರದ್ದುಗೊಳಿಸಲಾಗಿದೆ. ಪ್ರೆಸ್ ಇನ್ಫರ್ಮೇಷನ್ ಬ್ಯೂರೋ, ಭಾರತ ಸರ್ಕಾರ, ಹಣಕಾಸು ಸಚಿವಾಲಯದ ಪ್ರಕಾರ ಜಿಎಸ್‌ಟಿ ರೋಲ್ – ಔಟ್ ದಿನಾಂಕದಿಂದ ಮೇಲ್ಕಂಡ ತಿದ್ದುಪಡಿಯು ಜಾರಿಗೆ ಬರುತ್ತದೆ.

5ಎ.2.7: ಮಂಡಳಿಯ ಇ–ಆಡಳಿತ ಉಪಕ್ರಮಗಳು:

ವರದಿ ವರ್ಷದಲ್ಲಿ ಮಂಡಳಿಯು ಆಂತರಿಕವಾಗಿ ಅಭಿವೃದ್ಧಿಪಡಿಸಿದ ತಂತ್ರಾಂಶವಾದ "ಸಮ್ಮತಿ ಘಟಕ" ವನ್ನು ಎಲ್ಲಾ ವಲಯ ಹಿರಿಯ ಪರಿಸರ ಅಧಿಕಾರಿಗಳು (ಆರ್.ಎಸ್.ಇ.ಓ), ಪ್ರಾದೇಶಿಕ ಅಧಿಕಾರಿಗಳು ಸಹಾಯ ಮೇಜು ಮತ್ತು ಕೇಂದ್ರ ಕಛೇರಿಯಲ್ಲಿ ಬಳಸಲಾಗಿದೆ. ಇವರುಗಳಿಂದ ಪಡೆದ ಪ್ರತಿಕ್ರಿಯೆಯನ್ನು ಆಧರಿಸಿ ಕಾಲಕಾಲಕ್ಕೆ ಮಾಡೂಲ್ ಅನ್ನು ಉನ್ನತೀಕರಿಸಲಾಗಿದೆ. ಸಮ್ಮತಿ/ಅಧಿಕಾರಿ/ನೋಂದಣಿಗೆ ಸಂಬಂಧಿಸಿದಂತೆ ಅಗತ್ಯವಾದ ವಿವಿಧ ಅಂಕಿಅಂಶಗಳನ್ನು ಮಾಡ್ಯೂಲಿನಿಂದ ಪಡೆಯಲಾಗಿದೆ. ಫಲಿತಾಂಶ ಚೌಕಟ್ಟು ದಾಖಲೆಗೆ ವಿವರಗಳನ್ನು ಸಮ್ಮತಿ ಮಾಡ್ಯೂಲ್ ತಂತ್ರಾಂಶದಿಂದ ಒದಗಿಸಿದೆ.

5ಎ.2.7.1: 2017–18 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಹೆಚ್ಚುವರಿ ತಂತ್ರಾಂಶಗಳು/ ಘಟಕಗಳು

ಸಮ್ಮತಿ ಪತ್ರಗಳ ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತುಗಳ ನಿರ್ವಹಣಾ ಅಧಿಕಾರ ಪತ್ರಗಳ ನಿರ್ವಹಣೆಗೆ, ಕೇಂದ್ರ ಸರ್ಕಾರದ ಸಂಸ್ಥೆಯಾದ ರಾಷ್ಟ್ರೀಯ ಮಾಹಿತಿ ಕೇಂದ್ರವು (ಎನ್.ಐ.ಸಿ) ಅಭಿವೃದ್ಧಿಗೊಳಿಸಿದ "ವಿಸ್ತರಿತ ಹಸಿರು ಕೇಂದ್ರ (ಎಕ್ಸ್.ಜಿ.ಎನ್) (XGN)" ಎಂಬ ಹೆಸರಿನ ಆನ್ ಲೈನ್ ತಂತ್ರಾಂಶವನ್ನು ಮಂಡಳಿಯು ಉಪಯೋಗಿಸುತ್ತಿದೆ. ಆನ್‌ಲೈನ್ ಮುಖಾಂತರ ಸ್ವೀಕರಿಸಲಾದ ಹಸಿರು, ಕಿತ್ತಳೆ ಹಾಗೂ ಕೆಂಪು ಪ್ರವರ್ಗದ ಸಮ್ಮತಿ ಅರ್ಜಿಗಳನ್ನು ಹಾಗೂ

ಅಪಾಯಕಾರಿ ತ್ಯಾಜ್ಯ ವಸ್ತುಗಳ ನಿರ್ವಹಣಾ ಅಧಿಕಾರ ಪತ್ರಗಳ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಪ್ರಕ್ರಿಯೆ ನಡೆಸಿ, ಡಿಜಿಟಲ್ ಸಹಿ ಮಾಡಿದ ಸಮ್ಮತಿ ಪತ್ರಗಳನ್ನು ಆನ್ ಲೈನ್ (ಎಲೆಕ್ಟ್ರಾನಿಕ್ ವ್ಯವಸ್ಥೆ) ಮುಖಾಂತರ ನೀಡಲಾಗುತ್ತಿದೆ. ಅಲ್ಲದೇ ಡಿಜಿಟಲ್ ಸಹಿ ಮಾಡಿದ ಸಮ್ಮತಿ ಪತ್ರ / ಅಧಿಕಾರ ಪತ್ರಗಳು ಅರ್ಜಿದಾರರ ಲಾಗಿನ್ ಗಳಲ್ಲಿ ಹಾಗೂ ಮಂಡಳಿಯ ವೆಬ್ ಸೈಟ್ ನಲ್ಲಿ ಲಭ್ಯವಿರುವಂತೆ ಮಾಡಲಾಗಿದೆ. ಈ ತಂತ್ರಾಂಶದಲಿ ಕೈಗಾರಿಕೆಗಳ ವಿವರಗಳನ್ನು ಪಡೆದುಕೊಳ್ಳುವ ಮಾಡ್ಯೂಲ್, ಅಂತರಜಾಲದ ಮುಖೇನ ಅರ್ಜಿ ಸಲ್ಲಿಕೆ ಮಾಡ್ಯೂಲ್, ಅರ್ಜಿ ಪರಿಶೀಲನಾ ವ್ಯವಸ್ಥೆ, ಕಡತಗಳ ವಿದ್ಯುನ್ಮಾನ ಚಲನೆ, ಪರಿವೀಕ್ಷಣಾ ಮಾಡ್ಯೂಲ್, ಅಪಾಯಕಾರಿ ತ್ಯಾಜ್ಯ ವಸ್ತುಗಳ ನಿರ್ವಹಣಾ ಮಾಡ್ಯೂಲ್ ಮುಂತಾದ ಅನೇಕ ಮಾಡ್ಯೂಲ್ ಗಳು ಈ ತಂತ್ರಾಂಶದಲ್ಲಿವೆ. ರಾಷ್ಟ್ರೀಯ ಮಾಹಿತಿ ಕೇಂದ್ರದ ಸಹಾಯದಿಂದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಮಾಡ್ಯೂಲ್ ಹಾಗೂ ವೈದ್ಯಕೀಯ ತ್ಯಾಜ್ಯ ವಸ್ತುಗಳ ನಿರ್ವಹಣಾ ಮಾಡ್ಯೂಲ್ ಅಭಿವೃದ್ಧಿ ಪಡಿಸಲಾಗುತ್ತಿದೆ.

ಮಂಡಳಿಯಲ್ಲಿಯೆ ಅಭಿವೃದ್ಧಿಗೊಳಿಸಲಾದ ಕನ್ಸೆಂಟ್ ಮಾಡ್ಯೂಲ್ ತಂತ್ರಾಂಶವನ್ನು ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ಪ್ರಾದೇಶಿಕ ಅಧಿಕಾರಿಗಳು, ಸಹಾಯ ಮೇಜು ಹಾಗೂ ಕೇಂದ್ರ ಕಛೇರಿಯಲ್ಲಿ ಬಳಸಲಾಗುತ್ತಿದೆ. ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ಪ್ರಾದೇಶಿಕ ಅಧಿಕಾರಿಗಳು, ಸಹಾಯಕ ಮೇಜು ಹಾಗೂ ಕೇಂದ್ರ ಕಛೇರಿಯಲ್ಲಿ ನೀಡಲಾದ ಪ್ರತಿಕ್ರಿಯೆಯ ಆಧಾರದ ಮೇಲೆ ಕಾಲಕಾಲಕ್ಕೆ ಈ ಮಾಡ್ಯೂಲನ್ನು ಉನ್ನತೀಕರಿಸಲಾಗಿದೆ. ಸಮ್ಮತಿ/ಅಧಿಕಾರ ಪತ್ರ/ನೋಂದಣಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಈ ಮಾಡ್ಯೂಲಿನಿಂದ ಪಡೆಯಲಾಗುತ್ತಿದೆ.

5ಎ.2.7.2: ಮಂಡಳಿಯ ಜಾಲತಾಣ

ಮಂಡಳಿಯ ಜಾಲತಾಣ http://kspcb.gov.in ಅನ್ನು ಬೆಂಗಳೂರಿನ ರಾಷ್ಟ್ರೀಯ ಮಾಹಿತಿ ಕೇಂದ್ರದಿಂದ ಪ್ರಕಟಿಸಲಾಗಿದೆ. ತಾಣದ ಮಾಹಿತಿಯನ್ನು ಮಂಡಳಿಯು ನಿರ್ವಹಿಸುತ್ತಿದೆ.

5ಎ.2.7.3: ಎನ್‌ಐಸಿ ಯ ನೈಸ್‌ಅಂಚೆ:

ಮಂಡಳಿಯು ರಾಷ್ಟ್ರೀಯ ಮಾಹಿತಿ ಕೇಂದ್ರ ಸಿದ್ಧಪಡಿಸಿರುವ ವಿದ್ಯುನ್ಮಾನ ಅಂಚೆ (ನೈಸ್‌ಅಂಚೆ) ಯ ಮೂಲಕ ವಿದ್ಯುನ್ಮಾನ ಅಂಚೆ ಖಾತೆಗಳನ್ನು ತೆರೆದು ಮಂಡಳಿಯ ಅಧಿಕಾರಿಗಳು ಹಾಗೂ ಭಾಗೀದಾರರೊಡನೆ ವ್ಯವಹರಿಸಲು ಸುರಕ್ಷಿತ ಅಂಚೆ ವ್ಯವಸ್ಥೆಯನ್ನು ಒದಗಿಸಿದೆ.

5ಎ.2.7.4: ಹೆಚ್.ಆರ್.ಎಂ.ಎಸ್ ತಂತ್ರಾಂಶ

ಮಂಡಳಿಯು ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರವು ಅಭಿವೃದ್ಧಿಪಡಿಸಿರುವ ಮಾನವಸಂಪನ್ಮೂಲ ವ್ಯವಸ್ಥಾಪನಾ ತಂತ್ರಾಂಶ (ಹೆಚ್‌ಆರ್‌ಎಂಎಸ್) ಅನ್ನು ತನ್ನ ಖಾಯಂ ಸಿಬ್ಬಂದಿಗಳ ವೇತನ ನಿರ್ವಹಣೆಗಾಗಿ ಬಳಸುತ್ತಿದೆ.

5ಎ.2.7.5: ಈಸ್ ಆಫ್ ಡೂಯಿಂಗ್ ಬ್ಯೂಸಿನೆಸ್ – ಬ್ಯೂಸಿನೆಸ್ ರಿಫಾರ್ಮ್ಸ್ ಆಕ್ಷನ್ ಪ್ಲ್ಯಾನ್ – 2017 ಹಾಗೂ ಅನುಷ್ಠಾನ ಸ್ಥಿತಿ

ಇಒಡಿಬಿ 2017 ರಡಿಯಲ್ಲಿ ಭಾರತ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನಾ ಇಲಾಖೆಯು (ಡಿಐಪಿಪಿ) ಬ್ಯೂಸಿನೆಸ್ ರಿಫಾರ್ಮ್ಸ್ ಆಕ್ಷನ್ ಪ್ಲ್ಯಾನ್, 2017 ರ ಯೋಜನೆ ರೂಪಿಸಿದೆ. ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ ವಾಣಿಜ್ಯ ಹಾಗೂ ಕೈಗಾರಿಕಾ ಅಭಿವೃದ್ಧಿ ನಿರ್ದೇಶಕರಿಂದ ಕಳುಹಿಸಲಾದ ಬ್ಯೂಸಿನೆಸ್ ರಿಫಾರ್ಮ್ಸ್ ಆಕ್ಷನ್ ಪ್ಲ್ಯಾನ್, 2017 ರಲ್ಲಿ 52 ಕ್ರಿಯಾ ಅಂಶಗಳು (ಆಕ್ಷನ್ ಪಾಯಿಂಟ್‌ಗಳು) ಮಂಡಳಿಗೆ ಸಂಬಂಧಿಸಿದ್ದಾಗಿರುತ್ತದೆ. ಮಂಡಳಿಯು ಎಲ್ಲಾ ಕ್ರಿಯಾ ಅಂಶಗಳನ್ನು ನಿಗಧಿತ ಸಮಯದೊಳಗೆ ಕಾರ್ಯಗತಗೊಳಿಸಿದೆ.

ಮಂಡಳಿಯು ನಾಗರೀಕ ಸೇವಾ ಖಾತರಿ ವ್ಯವಸ್ಥೆ ಶಾಸನದಡಿಯಲ್ಲಿ (ಸಕಾಲ) ಜಲ ಮತ್ತು ವಾಯು ಕಾಯ್ದೆಯಡಿಯಲ್ಲಿ ಸ್ಥಾಪನಾ ಸಮ್ಮತಿ ಪತ್ರ ಹಾಗೂ ಸ್ಥಾಪನಾ ವಿಸ್ತರಣಾ ಸಮ್ಮತಿ ಪತ್ರಗಳ ನೀಡುವಿಕೆಗೆ ಸಂಬಂಧಿಸಿದಂತೆ ಗರಿಷ್ಠ ಕಾಲಾವಧಿ ಈಗಾಗಲೇ ನಿಗಧಿಪಡಿಸಿದ್ದು, ಅದರೊಂದಿಗೆ ಚಾಲನಾ ಸಮ್ಮತಿ ಪತ್ರ ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತುಗಳ ನಿರ್ವಹಣಾ ಅಧಿಕಾರ ಪತ್ರಗಳ ನೀಡುವಿಕೆಗೂ ಗರಿಷ್ಠ ಕಾಲಾವಧಿಯನ್ನು ನಿಗಧಿಪಡಿಸಿದೆ.

5ಎ.2.7.6: ಬೆಂಗಳೂರಿನಲ್ಲಿ ಸಹಾಯಮೇಜು

ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸಮ್ಮತಿ ಪತ್ರ ಮತ್ತು ಅಧಿಕಾರ ಪತ್ರಗಳಿಗೆ ಸಂಬಂಧಿಸಿದಂತೆ ಸಹಭಾಗಿಗಳಿಗೆ ಮಂಡಳಿಯನ್ನು ಸಂಪರ್ಕಿಸಲು ಅನುವಾಗಲು ಕೇಂದ್ರ ಕಛೇರಿಯಲ್ಲಿ ಸಹಾಯಮೇಜನ್ನು ಸ್ಥಾಪಿಸಲಾಗಿದೆ.

5ಎ.3: ಪರಿಸರ ಮೇಲ್ವಿಚಾರಣೆ.

ಮಂಡಳಿ ಮತ್ತು ಅದೇ ಬಗೆಯ ಕಾರ್ಯದಲ್ಲಿ ತೊಡಗಿರುವ ಇತರ ಇಲಾಖೆಗಳು ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು, ಮಂಡಳಿಯು ಪರಿಸರದ ಗುಣಮಟ್ಟದಲ್ಲಿನ ವ್ಯತ್ಯಯಗಳ ಮಾಪನ ಮಾಡಲು ವಿವಿಧ ಪ್ರಾಚರಗಳನ್ನು ಗಮನಿಸುತ್ತಿದೆ. ಹೀಗೆ ಪರಿಶೀಲಿಸ ಬೇಕಾದವುಗಳಲ್ಲಿ ಸ್ಥಳೀಯ ವಾಯುಗುಣಮಟ್ಟ, ಭೂಜಲ ಮತ್ತು ಅಂತರ್ಜಲ ಗುಣಮಟ್ಟ, ತ್ಯಾಜ್ಯಗಳು, ಉತ್ಸರ್ಜನಗಳು, ಮಣ್ಣು, ಶಬ್ದದ ಪ್ರಮಾಣ, ಅಪಾಯಕಾರಿ ತ್ಯಾಜ್ಯಗಳು ಮತ್ತು ಕ್ಷಾಲಕಗಳನ್ನು ಒಳಗೊಂಡಿದೆ. ಸಮ್ಮತಿ ಪತ್ರ ನೀಡಿಕೆಗಾಗಿ ಕೈಗಾರಿಕಾ ತ್ಯಾಜ್ಯಗಳು ಮತ್ತು ಉತ್ಸರ್ಜನೆಗಳನ್ನು ವಿಧಿಸಿದ ಮಿತಿಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ನಿರ್ಧರಿಸಲು ಗಮನಿಸಲಾಗುತ್ತದೆ. 2017–18ನೆಯ ಸಾಲಿನಲ್ಲಿ ಮಂಡಳಿಯ ಎಲ್ಲಾ ಪ್ರಯೋಗಾಲಯಗಳ ಮಾದರಿ ವಿಶ್ಲೇಷಣೆಗಳು ಸೇರಿದಂತೆ ಒಟ್ಟು 90394 ಮಾದರಿಗಳನ್ನು ವಿಶ್ಲೇಷಿಸಲಾಗಿದೆ. ವಿವರಗಳು ಹೀಗಿವೆ:

ಕೋಷ್ಟಕ: 5ಎ.10: ಕೇಂದ್ರ ಮತ್ತು ಪ್ರಾದೇಶಿಕ ಪ್ರಯೋಗಾಲಯಗಳಲ್ಲಿ ವಿಶ್ಲೇಷಿಸಲಾದ ಮಾದರಿಗಳು:

ಕ್ರಮ ಸಂಖ್ಯೆ	ಮಾದರಿಯ ಬಗೆ	ಮಾದರಿಗಳ ಸಂಖ್ಯೆ
1.	ನದಿ ನೀರು	676
2.	ನೀರು– ಕೆರೆ/ ಟ್ಯಾಂಕ್	1235
3.	ಅಂತರ್ಜಲ	2318
4.	ಸರೋವರ/ ಕೆರೆ ನೀರು (ಎನ್.ಡಬ್ಲ್ಯೂ.ಎಂ.ಪಿ ಹೊರತು ಪಡಿಸಿ)	1340
5.	ತ್ಯಾಜ್ಯಜಲ–ಉದ್ಯಮ ಮತ್ತು ಒಳಚರಂಡಿ	6834
6.	ಪರಿವೇಷ್ಟಕ ವಾಯುಗುಣಮಟ್ಟ	13414
7.	ಚಿಮಣಿ	1219
8.	ಬ್ಯಾಕ್ಟೀರಿಯಾ ಮಾದರಿ	4319
9.	ಜೈವಿಕ ಮೌಲ್ಯಮಾಪನ	114
10.	ಮಣ್ಣು/ಕೆಸರು/ಲೀಚೇಟ್	844
11.	ಘನತ್ಯಾಜ್ಯ	01

12.	ಶಬ್ದ ಪ್ರಮಾಣದ ಪರಿಶೀಲನೆ	13
13.	ವಿಶ್ಲೇಷಣಾತ್ಮಕ ಗುಣಮಟ್ಟ ನಿಯಂತ್ರಣ ಮಾದರಿ	141
14.	ಜೀವ ವೈದ್ಯಕೀಯ ತ್ಯಾಜ್ಯ	55
15.	**NAMP** (SO_2, NOx, PM_{10}, $PM_{2.5}$, Pb & NH_3)	55780
16.	ಎನ್.ಡಬ್ಲ್ಯು.ಎಂ.ಪಿ – ನದಿಗಳು, ಉಪನದಿಗಳು, ಸರೋವರಗಳು ಮತ್ತು ಕೆರೆಗಳು	1841
17	ಕೀಟನಾಶಕಗಳ ಮಾದರಿ	250
ಒಟ್ಟು		**90394**

ಈ ವರ್ಷದಲ್ಲಿ ಕೇಂದ್ರ ಮತ್ತು ಪ್ರಾದೇಶಿಕ ಪ್ರಯೋಗಾಲಯಗಳಲ್ಲಿ ವಿಶ್ಲೇಷಿಸಲಾದ ಮಾದರಿಗಳ ವಿವರಗಳನ್ನು **ಅನುಬಂಧ – XI** ರಲ್ಲಿ ನೀಡಿದೆ. ಕೈಗಾರಿಕೆಗಳಿಂದ ಸಂಗ್ರಹಿಸಿದ ಮಾದರಿಗಳಲ್ಲಿ ಯಾವುದೇ ಮಾದರಿ/ಮಾದರಿಗಳು ವಿಧಿಸಿರುವ ಮಿತಿಗಳನ್ನು ಮೀರಿದ್ದರೆ ಶಾಸನದ ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾ: ವೈಯಕ್ತಿಕ ವಿಚಾರಣೆ, ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸುವುದು, ತ್ಯಾಜ್ಯ ವಿಸರ್ಜನೆಯನ್ನು ತಡೆಯಲು ಅಥವಾ ಘಟಕವನ್ನು ಮುಚ್ಚಲು ನಿರ್ದೇಶನಗಳನ್ನು ನೀಡುವುದು.

5ಎ.4 : ನದಿ ನೀರು ಗುಣಮಟ್ಟ ಪರಿಶೀಲನೆ

ಕರ್ನಾಟಕದಲ್ಲಿ ಏಳು ನದಿ ಪಾತ್ರಗಳಿವೆ. ಅವು: ಗೋದಾವರಿ, ಕೃಷ್ಣಾ, ಕಾವೇರಿ, ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್, ಪಾಲಾರ್ ಮತ್ತು ಪಶ್ಚಿಮ ಮುಖಿಯಾಗಿ ಹರಿಯುವ ನದಿಗಳು. ಈ ನದಿಗಳು ತಮ್ಮ ಉಪನದಿಗಳು ಮತ್ತು ತೊರೆಗಳೊಂದಿಗೆ ರಾಜ್ಯದಲ್ಲಿ ಹರಿಯುತ್ತಿವೆ. ರಾಜ್ಯದಲ್ಲಿನ ಪ್ರಮುಖ ನದಿ ವ್ಯವಸ್ಥೆಗಳೆಂದರೆ ಕೃಷ್ಣಾ ಮತ್ತು ಕಾವೇರಿ; ಒಟ್ಟು ನದಿನೀರು ಹರಿಯುವ ಪಾತ್ರದಲ್ಲಿ ಇವುಗಳ ಪಾಲು ಶೇ.78.47 ರಷ್ಟಿದೆ; ಪಶ್ಚಿಮ ಮುಖಿಯಾಗಿ ಹರಿಯುವ ಮಹದಾಯಿ, ಕಾಳಿ, ಬೇಡ್ತಿ (ಗಂಗೊಳ್ಳಿ), ಅಘನಾಶಿನಿ, ಶರಾವತಿ, ಚಕ್ರಾ, ವರಾಹಿ, ನೇತ್ರಾವತಿ, ಬಾರ್ಪೊಳೆ ಇವುಗಳ ಪಾಲು ಶೇ.12.73ರಷ್ಟಿದೆ.


ರಾಜ್ಯದಲ್ಲಿನ ನದಿಗಳು, ಉಪನದಿಗಳು ಮತ್ತು ತೊರೆಗಳಲ್ಲಿನ ನೀರಿನ ಗುಣಮಟ್ಟವನ್ನು ಮಂಡಳಿಯು "ರಾಷ್ಟ್ರೀಯ ಜಲ ಗುಣಮಟ್ಟ ಪರಿಶೀಲನಾ ಕಾರ್ಯಕ್ರಮ" ಅಡಿಯಲ್ಲಿ 83 ಸ್ಥಳಗಳಲ್ಲಿ ಪರಿಶೀಲಿಸುತ್ತಿದೆ. ಈ ಕಾರ್ಯಕ್ರಮದಲ್ಲಿ 120 ಕೆರೆಗಳ ಪರಿಶೀಲನೆಯೂ ಸೇರಿವೆ. ನದಿ ನೀರು ಗುಣಮಟ್ಟದ ವರ್ಗೀಕರಣೆಯ ವಿವರಗಳನ್ನು **ಅನುಬಂಧ– XII** ರಲ್ಲಿ ನೀಡಿದೆ.

ನದಿ ನೀರು ಗುಣಮಟ್ಟ ಪರಿಶೀಲನೆಯ ಕುರಿತ ತೀರ್ಮಾನ:

ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಅತ್ಯುತ್ತಮ ಬಳಕೆ ಮತ್ತು ನದಿಯಲ್ಲಿ ಚಟುವಟಿಕೆಗಳನ್ನವಲಂಬಿಸಿ ನೀರಿನ ಗುಣಮಟ್ಟದ ಬಗ್ಗೆ ಕೆಲವು ನಿರ್ದಿಷ್ಟತೆಗಳನ್ನು ರೂಪಿಸಿದೆ. ಆ ನಿರ್ದಿಷ್ಟತೆಗಳು ಹೀಗಿವೆ:

ವರ್ಗ ಎ – ಸಾಂಪ್ರದಾಯಿಕ ಸಂಸ್ಕರಣೆ ಮಾಡದ ಆದರೆ ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು
ವರ್ಗ ಬಿ – ಹೊರಗಡೆಯ ಸ್ನಾನ (ವ್ಯವಸ್ಥಿತ)
ವರ್ಗ ಸಿ – ಸಾಂಪ್ರದಾಯಿಕ ಸಂಸ್ಕರಣೆ ಮಾಡಿದ ಮತ್ತು ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು
ವರ್ಗ ಡಿ – ವನ್ಯಜೀವಿಗಳ ಉಳಿವು, ಪ್ರಸರಣ, ಮೀನುಗಾರಿಕೆ

ವರ್ಗ ಇ – ನೀರಾವರಿ, ಕೈಗಾರಿಕಾ ಶೈತ್ಯೀಕರಣ, ನಿಯಂತ್ರಿತ ತ್ಯಾಜ್ಯ ವಿಲೇವಾರಿ
'ಇ' ವರ್ಗದ ಕೆಳಗೆ– ಎ, ಬಿ, ಸಿ, ಡಿ ಮತ್ತು ಇ ಮಾನದಂಡಗಳಿಗೆ ಹೊಂದಿಕೆಯಾಗದೆ ಇರುವುದು



* 2015-16 ರ ಗ್ರಾಫಿಕಲ್ ಪ್ರಾತಿನಿಧ್ಯವು ಸರೋವರದ ಮಾದರಿಗಳನ್ನು ಒಳಗೊಂಡಿರುತ್ತದೆ.


ಪರಿಶೀಲನೆಯ ಫಲಿತಾಂಶಗಳು ಪಟ್ಟಣಗಳ ತ್ಯಾಜ್ಯಗಳು ನದಿ ನೀರನ್ನು ಸೇರಿದ ಮೇಲೆ ನದಿ ನೀರಿನ ಗುಣಮಟ್ಟವು ಬಾಧಿತವಾಗಿದೆ ಎಂಬುದನ್ನು ತೋರಿಸುತ್ತವೆ. ಬಹುತೇಕ ನದಿ ಹರಹುಗಳು "ಸಿ" ವರ್ಗಕ್ಕೆ (76%)ಸೇರುತ್ತವೆ; ಎಂದರೆ ಅಲ್ಲಿಯ ನೀರು ಭೌತಿಕ ಮತ್ತು ರಾಸಾಯನಿಕ ಸಂಸ್ಕರಣೆಯ ಮತ್ತು ಸೋಂಕು ನಿವಾರಣೆಯ ನಂತರವೇ ಜನಬಳಕೆಗೆ ಯೋಗ್ಯವಾಗುತ್ತವೆ ಎಂದರ್ಥ.

ಈ ಮುಂದಿನ ಮೂರು ಸ್ಥಳಗಳಲ್ಲಿ ಸಂಸ್ಕರಿತ ಕೈಗಾರಿಕಾ ತ್ಯಾಜ್ಯಗಳನ್ನು ನದಿಗೆ ಬಿಡಲು ಅನುಮತಿ ಇದೆ. ಹೀಗೆ ನದಿಗೆ ಬಿಡುವ ಸ್ಥಳದಿಂದ ಕೆಳಗೆ ನೂರು ಮೀಟರು ದೂರದಲ್ಲಿ ನೀರಿನ ಗುಣಮಟ್ಟ ಹೀಗಿದೆ.

ಅ. ಮೈಸೂರು ಕಾಗದ ಕಾರ್ಖಾನೆಯಿಂದ ಹೊರಹರಿಯುವ ಸಂಸ್ಕರಿತ ತ್ಯಾಜ್ಯ ಭದ್ರಾನದಿಗೆ, ಭದ್ರಾವತಿ ಸಮೀಪ ಶಿವಮೊಗ್ಗ ಜಿಲ್ಲೆ.
ಭದ್ರಾವತಿಯಿಂದ ಕೆಳಗೆ ಹರಿಯುವ ಭದ್ರಾನದಿಯ ನೀರು ವರ್ಗ 'ಡಿ' ಗೆ ಅನುಗುಣವಾಗಿದೆ.

ಆ. ಹರಿಹರ ಪಾಲಿಫೈಬರ್ಸ್ – ಗ್ರಾಸೆಲೀನ್ ವಿಭಾಗ: ಸಂಸ್ಕರಿತ ಸಂಯೋಜಿತ ತ್ಯಾಜ್ಯ ಹರಿಹರದ ಬಳಿ ತುಂಗಭದ್ರಾ ನದಿಗೆ – ಹರಿಹರದ ಸಮೀಪ, ಹಾವೇರಿ ಜಿಲ್ಲೆ.
ಹರಿಹರ ಪಾಲಿಫೈಬರ್ಸ್ ನಿಂದ ಕೆಳಗೆ ತುಂಗಭದ್ರಾ ನದಿಯ ನೀರಿನ ಗುಣಮಟ್ಟ 'ಡಿ' ವರ್ಗಕ್ಕೆ ಅನುಗುಣವಾಗಿದೆ.

ಇ. ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯಿಂದ ಸಂಸ್ಕರಿತ ತ್ಯಾಜ್ಯ ಕಾಳಿ ನದಿಗೆ – ಬಂಗೂರು ನಗರ ಪ್ರದೇಶ – ದಾಂಡೇಲಿ, ಉತ್ತರ ಕನ್ನಡದ ಸಮೀಪ.
ಕಾಳಿ ನದಿಯ ನೀರಿನ ಗುಣಮಟ್ಟವು ಉದ್ಯಮದ ಕೆಳಗೆ 'ಸಿ' ಪ್ರವರ್ಗಕ್ಕೆ ಅನುಗುಣವಾಗಿದೆ.



ವರ್ಗ ಎ – ಸಾಂಪ್ರದಾಯಿಕ ಸಂಸ್ಕರಣೆ ಮಾಡದ ಆದರೆ ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು

ವರ್ಗ ಬಿ – ಹೊರಗಡೆಯ ಸ್ನಾನ (ವ್ಯವಸ್ಥಿತ)

ವರ್ಗ ಸಿ – ಸಾಂಪ್ರದಾಯಿಕ ಸಂಸ್ಕರಣೆ ಮಾಡಿದ ಮತ್ತು ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು

ವರ್ಗ ಡಿ – ವನ್ಯಜೀವಿಗಳ ಉಳಿವು, ಪ್ರಸರಣ, ಮೀನುಗಾರಿಕೆ


ವರ್ಗ ಇ – ನೀರಾವರಿ, ಕೈಗಾರಿಕಾ ಶೈತ್ಯೀಕರಣ, ನಿಯಂತ್ರಿತ ತ್ಯಾಜ್ಯ ವಿಲೇವಾರಿ

'ಇ' ವರ್ಗದ ಕೆಳಗೆ– ಎ, ಬಿ, ಸಿ, ಡಿ ಮತ್ತು ಇ ಮಾನದಂಡಗಳಿಗೆ ಹೊಂದಿಕೆಯಾಗದೆ ಇರುವುದು

5ಎ.5: ಕೆರೆ ನೀರು ಪರಿಶೀಲನೆ

ಮಂಡಳಿಯು ರಾಜ್ಯದ 120 ಕೆರೆಗಳ ನೀರಿನ ಗುಣಮಟ್ಟವನ್ನು ಪರಿಶೀಲಿಸುತ್ತಿದೆ. ರಾಜ್ಯದಲ್ಲಿ ಮಾಪನ ಮಾಡುತ್ತಿರುವ ಒಟ್ಟಾರೆ 120 ಕೆರೆಗಳ ಪೈಕಿ, 30 ಕೆರೆಗಳಲ್ಲಿ ನೀರಿನ ಇರುವಿಕೆ ಇಲ್ಲದಿರುವುದರಿಂದ ಪರಿಶೀಲಿಸಲಾಗುತ್ತಿಲ್ಲ. ಪರಿಶೀಲಿಸಲಾಗುತ್ತಿರುವ ಕೆರೆಗಳ ಗುಣ ಮಟ್ಟವು ಈ ಕೆಳಕಂಡಂತಿವೆ.

1. 1 ಕೆರೆ 'ಎ' ವರ್ಗಕ್ಕೆ, 2. 1 ಕೆರೆ 'ಬಿ' ವರ್ಗಕ್ಕೆ, 3. 8 ಕೆರೆಗಳು 'ಸಿ' ವರ್ಗಕ್ಕೆ, 4. 60 ಕೆರೆಗಳು 'ಡಿ' ವರ್ಗಕ್ಕೆ 5. 20 ಕೆರೆಗಳು 'ಇ' ವರ್ಗಕ್ಕೆ ಹಾಗೂ 6. ಮಾದರಿ ಸಂಗ್ರಹಿಸದ ಕೆರೆಗಳು 30.



ವರ್ಗ ಎ – ಸಾಂಪ್ರದಾಯಿಕ ಸಂಸ್ಕರಣೆ ಮಾಡದ ಆದರೆ ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು
ವರ್ಗ ಬಿ – ಹೊರಗಡೆಯ ಸ್ನಾನ (ವ್ಯವಸ್ಥಿತ)
ವರ್ಗ ಸಿ – ಸಾಂಪ್ರದಾಯಿಕ ಸಂಸ್ಕರಣೆ ಮಾಡಿದ ಮತ್ತು ಸೋಂಕು ನಿವಾರಿತ ಕುಡಿಯುವ ನೀರಿನ ಆಕರಗಳು
ವರ್ಗ ಡಿ – ವನ್ಯಜೀವಿಗಳ ಉಳಿವು, ಪ್ರಸರಣ, ಮೀನುಗಾರಿಕೆ
ವರ್ಗ ಇ – ನೀರಾವರಿ, ಕೈಗಾರಿಕಾ ಶೈತ್ಯೀಕರಣ, ನಿಯಂತ್ರಿತ ತ್ಯಾಜ್ಯ ವಿಲೇವಾರಿ
'ಇ' ವರ್ಗದ ಕೆಳಗೆ– ಎ, ಬಿ, ಸಿ, ಡಿ ಮತ್ತು ಇ ಮಾನದಂಡಗಳಿಗೆ ಹೊಂದಿಕೆಯಾಗದೆ ಇರುವುದು

5ಎ.6: ಅಂತರ್ಜಲ ಪರಿಶೀಲನೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿವಿಧ ಕಾರ್ಯಚಟುವಟಿಕೆಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸುತ್ತಿದೆ. ಜೊತೆಗೆ ಅಪಾರ್ಟ್‌ಮೆಂಟುಗಳು/ಬಡಾವಣೆಗಳು/ವಾಣಿಜ್ಯ ಸಮುಚ್ಚಯಗಳಿಗೆ ಸಮ್ಮತಿ ಪತ್ರ ನೀಡುವಾಗ ಕೆಲವು ಷರತ್ತುಗಳನ್ನು ವಿಧಿಸುವ ಮೂಲಕ ಮಾಲಿನ್ಯ ನಿಯಂತ್ರಣಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮುಖ್ಯವಾಗಿ ಅಂತರ್ಜಲವನ್ನು ಸಂರಕ್ಷಿಸಿಡಲು ಮತ್ತು ನೆಲದ ಮೇಲಣ ಜಲವನ್ನು ಕಾಪಾಡಲು ಮಳೆನೀರು ಸಂಗ್ರಹವನ್ನು ಮತ್ತು ತ್ಯಾಜ್ಯಜಲವನ್ನು ಸಂಸ್ಕರಿಸಬೇಕೆಂಬುದನ್ನು ಕಡ್ಡಾಯ ಮಾಡಿದೆ. ಅಪಾರ್ಟ್‌ಮೆಂಟುಗಳು ಸಂಸ್ಕರಿತ ನೀರನ್ನು ಶೌಚಾಲಯಗಳಲ್ಲಿ, ತೋಟಗಾರಿಕೆಗೆ ಅಥವಾ ಇತರ ಉದ್ದೇಶಗಳಿಗೆ ಬಳಸಬೇಕು. ಬೆಂಗಳೂರು ಮಹಾನಗರ ಪಾಲಿಕೆಗೆ ಸಂಸ್ಕರಿತ ನೀರನ್ನು ಅದರ ಉದ್ಯಾನಗಳಲ್ಲಿ ಮತ್ತು ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಮಾತ್ರ ಬಳಸಬೇಕೆಂದು ಮಂಡಳಿ ನಿರ್ದೇಶನ ನೀಡಿದೆ.

ತ್ಯಾಜ್ಯ ಜಲವನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸುವ ಕೈಗಾರಿಕಾ ಪ್ರದೇಶದಲ್ಲಿ ಮತ್ತು ಪ್ರಮುಖ ಕೈಗಾರಿಕಾ ಕ್ಷೇತ್ರಗಳಲ್ಲಿ ಮತ್ತು ಅವುಗಳ ಸುತ್ತಮುತ್ತಣ ಪ್ರದೇಶದಲ್ಲಿನ ಅಂತರ್ಜಲ ನೀರಿನ ಗುಣಮಟ್ಟವನ್ನು ಮಂಡಳಿಯು ನಿಯತವಾಗಿ ಪರಿಶೀಲಿಸುತ್ತಿರುತ್ತದೆ. ಶ್ರೀ ರೇಣುಕಾ ಸಕ್ಕರೆ ಕಾರ್ಖಾನೆ, ಬುರಲಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ; ಮೆ॥ಗೋದಾವರಿ ಬಯೋ–ರಿಫೈನರೀಸ್ ಲಿಮಿಟೆಡ್, ಬಾಗಲಕೋಟ; ಮೆ॥ ಫೆಡರಲ್ ಮೊಘಲ್ ಇಂಡಿಯಾ, ಯಲಹಂಕ, , ಮೆ॥ಮಂಗಳೂರು ರಿಫೈನರೀಸ್ ಮತ್ತು ಪೆಟ್ರೋ ಕೆಮಿಕಲ್ಸ್, ಮಂಗಳೂರಿನ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು ಮತ್ತು ಕೋಲ್ಹಾರ ಕೈಗಾರಿಕಾ ಪ್ರದೇಶ, ಬೀದರ್‌ನ ಸುತ್ತಮುತ್ತಲಿನ ಪ್ರದೇಶಗಳ ಅಂತರ್ಜಲ ಗುಣಮಟ್ಟವು ಕೈಗಾರಿಕಾ ಮಾಲಿನ್ಯದಿಂದ ಬಾಧಿತವಾಗಿವೆ. ಎನ್.ಜಿ.ಆರ್.ಐ ಸಂಸ್ಥೆಯು ಪೀಣ್ಯ ಕೈಗಾರಿಕಾ ಪ್ರದೇಶದ "ಗ್ರೌಂಡ್ ವಾಟರ್ ಫ್ಲೋ ಅಂಡ್ ಜಿಯೋ–ಹೈಡ್ರಾಲಾಜಿಕಲ್ ಇನ್ವೆಸ್ಟಿಗೇಷನ್ ಆಫ್ ವಾಟರ್ ಶೆಡ್" ನ ಅಧ್ಯಯನವನ್ನು ಕೈಗೊಂಡಿದೆ. 22 ನೇ ಮಾರ್ಚ್ 2017 ರಂದು ಎನ್.ಈ.ಈ.ಆರ್.ಐ ಸಂಸ್ಥೆಗೆ "ಬೀದರ ಜಿಲ್ಲೆಯ ಕೋಲ್ಹಾರ ಕೈಗಾರಿಕಾ ಪ್ರದೇಶದ ಪರಿಸರ ಸ್ಥಿತಿ" ಅಧ್ಯಯನವನ್ನು ವಹಿಸಲಾಗಿದೆ.

ಅಂತರ್ಜಲ ಪರಿಶೀಲನೆ, ಅಭಿವೃದ್ಧಿ, ವಲಯಗಳ ವರ್ಗೀಕರಣ ಮುಂತಾದುವು ಕೇಂದ್ರ ಜಲಮಂಡಳಿ ಮತ್ತು ಕರ್ನಾಟಕ ಅಂತರ್ಜಲ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುತ್ತವೆ.

5ಎ.7: ಕರ್ನಾಟಕ ರಾಜ್ಯದ ರಾಷ್ಟ್ರೀಯ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕಾರ್ಯಕ್ರಮ

ಮಂಡಳಿಯು ವರದಿ ವರ್ಷದ ಅವಧಿಯಲ್ಲಿ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳು ಕೈಗಾರಿಕಾ ಪ್ರದೇಶ, ಮಿಶ್ರನಗರ ಪ್ರದೇಶ ಮತ್ತು ಸೂಕ್ಷ್ಮ ಪ್ರದೇಶಗಳನ್ನು ಒಳಗೊಂಡಂತೆ ಬೆಂಗಳೂರಿನಲ್ಲಿ 16 ಸ್ಥಳಗಳಲ್ಲಿ ರಾಷ್ಟ್ರೀಯ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕಾರ್ಯಕ್ರಮದ (NAMP) ಅಡಿಯಲ್ಲಿ ಪರಿವೇಷ್ಟಕ ವಾಯು ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ. ಎರಡು ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳಲ್ಲಿ (CAAQMS) ಒಂದನ್ನು ನಗರ ರೈಲ್ವೇ ನಿಲ್ದಾಣದಲ್ಲಿ ಮತ್ತು ಮತ್ತೊಂದನ್ನು ಎಸ್.ಜಿ. ಹಳ್ಳಿಯ ಮಂಡಳಿಯ ಪ್ರಾದೇಶಿಕ ಕಛೇರಿ ಸಂಕೀರ್ಣದಲ್ಲಿ ಸ್ಥಾಪಿಸಲಾಗಿದೆ. ರಾಜ್ಯದ 22 ಸ್ಥಳಗಳಲ್ಲಿ ಮಾನವ ಚಾಲಿತ ಉಪಕರಣಗಳನ್ನು ಉಪಯೋಗಿಸಿಕೊಂಡು ಪರಿವೇಷ್ಯಕ ವಾಯು ಗುಣಮಟ್ಟ ಮಾಪನವನ್ನು ಮಾಡಲಾಗುತ್ತಿದೆ.

CAAQM ಕೇಂದ್ರಗಳಲ್ಲಿ PM_{10}, SO_2, NO_2 ಮತ್ತು CO ಗಳ ಪ್ರಮಾಣಗಳ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಮಾಡಲಾಗುತ್ತಿದೆ. ಮಾನವ ಚಾಲಿತ ಕೇಂದ್ರಗಳಲ್ಲಿ ವಾರದಲ್ಲಿ 2 ಬಾರಿ 24 ಗಂಟೆ ನಿರಂತರವಾಗಿ PM_{10}, $PM_{2.5}$, SO_2, NO_2, NH_3, Pb ಹಾಗೂ CO ಗಳ ಮಾಪನವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ವಯ ಮಾಡಲಾಗುತ್ತಿದೆ. ಸಂಗ್ರಹಿಸಿದ ದತ್ತಾಂಶವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ದೆಹಲಿಗೆ ವಿದ್ಯುನ್ಮಾನ ಮೂಲಕ ಕಳುಹಿಸಲಾಗುತ್ತಿದೆ ಮತ್ತು ಮಂಡಳಿಯ ಅಂತರ್ಜಾಲದಲ್ಲಿ (ವೆಬ್‌ಸೈಟ್) ಪ್ರಕಟಿಸಲಾಗುತ್ತಿದೆ.

ಕೋಷ್ಟಕ: 5ಎ.11: 2017–18ರ ಅವಧಿಯಲ್ಲಿ ಬೆಂಗಳೂರು ನಗರದಲ್ಲಿನ ಸ್ಥಳಗಳಲ್ಲಿ ಪರಿವೇಷ್ಟಕ ವಾಯುಗುಣಮಟ್ಟದ ವಾರ್ಷಿಕ ಸರಾಸರಿ ಪ್ರಮಾಣಗಳು

ಕ್ರಮ ಸಂಖ್ಯೆ	ಸ್ಥಳ	SO_2 µg/m³	NO_2 µg/m³	PM_{10} µg/m³	$PM_{2.5}$ µg/m³	NH_3 µg/m³	Lead µg/m³	CO mg/m³	AQI	
1.	ಬೆಂಗಳೂರು ವಿಶ್ವವಿದ್ಯಾನಿಲಯ	3.7	10.7	25.0	*	*	*	*	25	ಉತ್ತಮ
2.	ನಿ.ಪ.ವಾ.ಮಾ.ಕೇಂದ್ರ, ಸಾಣೆಗುರುವನಹಳ್ಳಿ	2.2	24.0	50.4	*	*	*	0.5	50	ಉತ್ತಮ
3.	ಅರ್ಬನ್ ಇಕೋ ಪಾರ್ಕ್, ಪೀಣ್ಯ	2.0	31.9	95.2	44.2	31.0	0.150	*	95	ತೃಪ್ತಿಕರ
4.	ಸ್ವಾಸ್ಟನ್ ಸಿಲ್ಕ್ ಪ್ರೈ.ಲಿ, ಪೀಣ್ಯ	2.0	32.0	96.6	44.8	32.1	0.133	*	97	ತೃಪ್ತಿಕರ
5.	ಯಶವಂತಪುರ ಪೋಲೀಸ್ ಠಾಣೆ	2.0	33.0	95.0	44.5	32.7	0.101	*	95	ತೃಪ್ತಿಕರ
6.	ಆಮ್ಕೋ ಬ್ಯಾಟರೀಸ್, ಮೈಸೂರು ರಸ್ತೆ	2.0	32.7	86.1	39.9	33.6	0.202	*	86	ತೃಪ್ತಿಕರ
7.	ಬಾಣಸವಾಡಿ ಪೊಲೀಸ್ ಠಾಣೆ	2.0	24.3	68.7	32.0	20.7	0.145	*	69	ತೃಪ್ತಿಕರ
8.	ಮಾದವಚಾರಿ ಮನೆ, ಕಾಜಿಸೊಣ್ಣೇನಹಳ್ಳಿ	2.0	30.6	69.0	*	29.8	0.196	*	69	ತೃಪ್ತಿಕರ
9.	ಯು.ವಿ.ಸಿ.ಇ, ಕೆ.ಆರ್.ವೃತ್ತ	2.0	23.8	70.9	34.5	21.8	0.132	*	71	ತೃಪ್ತಿಕರ
10.	ವಿಕ್ಟೋರಿಯಾ ಆಸ್ಪತ್ರೆ	2.0	31.7	65.3	40.0	32.1	0.083	*	67	ತೃಪ್ತಿಕರ
11.	ಇಂದಿರಾ ಗಾಂಧಿ ಮಕ್ಕಳ ಶುಶ್ರೂಷಾ ಕೇಂದ್ರ	2.0	31.9	65.6	30.4	32.0	0.085	*	66	ತೃಪ್ತಿಕರ
12.	ಎಕ್ಸಪೋರ್ಟ್ ಪ್ರಮೋಷನಲ್ ಪಾರ್ಕ್, ವೈಟ್‌ಫೀಲ್ಡ್	2.0	31.7	103.9	50.8	30.9	0.148	*	103	ಮಧ್ಯಮ
13.	ರೈಲ್ ವ್ಹೀಲ್ ಫ್ಯಾಕ್ಟರಿ, ಯಲಹಂಕ	2.0	29.7	101.9	65.8	30.3	0.118	*	119	ಮಧ್ಯಮ
14.	ಸೆಂಟ್ರಲ್ ಸಿಲ್ಕ್ ಬೋರ್ಡ್, ಹೊಸೂರು ರಸ್ತೆ	2.0	32.0	118.8	*	33.5	0.104	*	113	ಮಧ್ಯಮ
15.	ನಿ.ಪ.ವಾ.ಮಾ.ಕೇಂದ್ರ, ಸಿಟಿ ರೈಲ್ವೆ ನಿಲ್ದಾಣ	7.5	52.0	100.9	*	*	*	1.3	101	ಮಧ್ಯಮ
16.	ಟೆರ್ರಿ ಕಛೇರಿ, ದೊಮಲೂರು	2.0	32.4	118.4	52.1	30.8	0.182	*	112	ಮಧ್ಯಮ
	ವಾರ್ಷಿಕ ಸರಾಸರಿ ಮೌಲ್ಯಗಳು	2.3	31.5	87.1	43.1	29.5	0.2		83.5	ತೃಪ್ತಿಕರ
	ಶಿಷ್ಟತೆಗಳು	50	40	60	40	100	0.500	2		

* ಟಿಪ್ಪಣಿ : ಮಾಪನ ನಡೆಸಲಾಗಿರುವುದಿಲ್ಲ.

ಉತ್ತಮ (0–50)	**ಕನಿಷ್ಠ ಪರಿಣಾಮ**	**ಕಳಪೆ (201–300)**	**ದೀರ್ಘಕಾಲದ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ**
ತೃಪ್ತಿಕರ (51–100)	ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ	ಅತಿ ಕಳಪೆ (301–400)	ದೀರ್ಘಕಾಲದ ಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ
ಮಧ್ಯಮ (101–200)	ಶ್ವಾಸಕೋಶದ ಸೋಂಕುಗಳೊಂದಿಗಿನ ಜನರಿಗೆ ಉಸಿರಾಟದ ಅಸ್ವಸ್ಥತೆ	ತೀವ್ರ (>401)	ಆರೋಗ್ಯಕರ ಜನರ ಮೇಲೆಯು ಸಹ ಶ್ವಾಸಕೋಶಕ್ಕೆ ಸಂಬಂಧಿಸಿದ ಅಸ್ವಸ್ಥತೆ

ಫಲಿತಾಂಶಗಳ ಸಂಕ್ಷಿಪ್ತ ಸಾರಾಂಶ :


1. ಮಾಪನ ಮಾಡಿದ ಎಲ್ಲಾ ಸ್ಥಳಗಳಲ್ಲಿ, SO_2 , NH_3 ಮತ್ತು Pb ಮೌಲ್ಯಗಳು ಕ್ರಮವಾಗಿ ರಾಷ್ಟ್ರೀಯ ಮಿತಿಗಳಾದ (50.0 µg/m^3) (100.0 µg/ m^3) ಮತ್ತು (0.5 µg/ m^3) ರ ಮಿತಿಯೊಳಗಿರುತ್ತದೆ.
2. ಸಿಟಿ ರೈಲ್ವೆ ನಿಲ್ದಾಣ ಹೊರತುಪಡಿಸಿ, ಮಾಪನ ಮಾಡಿದ ಎಲ್ಲಾ ಸ್ಥಳಗಳಲ್ಲಿ, NO_2 ಮೌಲ್ಯಗಳು ರಾಷ್ಟ್ರೀಯ ಮಿತಿಯಾದ (40.0 µg/m^3) ರ ಮಿತಿಯೊಳಗಿರುತ್ತದೆ.
3. 7 ಸ್ಥಳಗಳಲ್ಲಿ $PM_{2.5}$ ಮೌಲ್ಯವು ರಾಷ್ಟ್ರೀಯ ಮಿತಿ (40.0 µg/m^3) ಗಿಂತ ಅಧಿಕವಿರುತ್ತದೆ.
4. ಎಸ್.ಜಿ.ಹಳ್ಳಿ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಉಳಿದ 14 ಸ್ಥಳಗಳಲ್ಲಿ PM_{10} ಮೌಲ್ಯವು ರಾಷ್ಟ್ರೀಯ ಮಿತಿ (60.0 µg/m^3) ಗಿಂತ ಅಧಿಕವಿರುತ್ತದೆ.
5. ಒಟ್ಟು 16 ಸ್ಥಳಗಳಲ್ಲಿ, ಎಸ್.ಜಿ.ಹಳ್ಳಿ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಕ್ಯೂಐ ಉತ್ತಮವಾಗಿದ್ದು, 9 ಸ್ಥಳಗಳಲ್ಲಿ ತೃಪ್ತಿಕರವಾಗಿ ಹಾಗೂ 5 ಸ್ಥಳಗಳಲ್ಲಿ ಮಧ್ಯಮವಾಗಿರುತ್ತದೆ.
6. PM_{10}/$PM_{2.5}$ ಮಟ್ಟಗಳು ವಾಹನದ ಹೊರಸೂಸುವಿಕೆ / ಚಲನೆ, ರಸ್ತೆ ಧೂಳು ಮತ್ತು ನಿರ್ಮಾಣ ಚಟುವಟಿಕೆಗಳಿಂದ ಅಧಿಕವಾಗಿದೆ.

5ಎ.7.1: ಬೆಂಗಳೂರಿನ ವಿವಿಧ ವಲಯಗಳಲ್ಲಿ ವಾಯು ಗುಣಮಟ್ಟವು ಈ ಕೆಳಕಂಡಂತಿದೆ;

- **ಕೈಗಾರಿಕಾ ವಲಯ :** ಕೈಗಾರಿಕಾ ವಲಯದಲ್ಲಿ ಪರಿವೇಷ್ಟಕ ವಾಯುಗುಣಮಟ್ಟವನ್ನು ನಾಲ್ಕು ಮಾಪನ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ. ಅವುಗಳು ಈ ಕೆಳಕಂಡಂತಿದೆ.

    1. ಎಕ್ಸ್‌ಪೋರ್ಟ್ ಪ್ರಮೋಷನಲ್ ಪಾರ್ಕ್, ಐಟಿಪಿಎಲ್, ವೈಟ್ ಫೀಲ್ಡ್ ಕೈಗಾರಿಕಾ ಪ್ರದೇಶ
    2. ರೈಲು ಗಾಲಿ ಮತ್ತು ಅಚ್ಚು ಕಾರ್ಖಾನೆ, ಯಲಹಂಕ
    3. ಸ್ವಾಸ್ಟನ್ ಸಿಲ್ಕ್ ಪ್ರೈ.ಲಿ, ಪೀಣ್ಯ
    4. ಪೀಣ್ಯ ಕೈಗಾರಿಕಾ ಪ್ರದೇಶ, ಪ್ರಾದೇಶಿಕ ಕಚೇರಿ, ಅರ್ಬನ್ ಇಕೋ ಪಾರ್ಕ್


1. ಎಕ್ಸ್‌ಪೋರ್ಟ್ ಪ್ರಮೋಷನಲ್ ಪಾರ್ಕ್, ಐಟಿಪಿಎಲ್, ಬೆಂಗಳೂರು.



	2012-13	2013-14	2014-15	2015-16	2016-17	2017-18	STD
SO2	16.0	15.0	12.3	3.8	2.0	2.0	50.0
NO2	31.0	30.0	33.5	21.1	33.1	37.7	40.0
PM10	162.0	133.0	230.0	189.0	131.0	103.9	60.0

PM_{10}ರ ಪ್ರಮಾಣವು ಎಲ್ಲಾ ಮಾಪನ ವರ್ಷಗಳಲ್ಲಿ ರಾಷ್ಟ್ರೀಯ ಮಿತಿ (60.0 $\mu g/M^3$) ಗಿಂತ ಹೆಚ್ಚಿದೆ. 2012–2018ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣಗಳು ರಾಷ್ಟ್ರೀಯ ಮಿತಿಯೊಳಗೆ ಇವೆ. ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳಿನ ಕಾರಣದಿಂದಾಗಿ PM_{10} ನ ಹೆಚ್ಚಿನ ಮಟ್ಟವು ಕಾರಣವಾಗಿದೆ.


2. ರೈಲು ಗಾಲಿ ಮತ್ತು ಅಚ್ಚು ಕಾರ್ಖಾನೆ, ಯಲಹಂಕ, ಬೆಂಗಳೂರು.



	2012-13	2013-14	2014-15	2015-16	2016-17	2017-18	STD
SO2	15.0	14.0	11.0	3.6	2.0	2.0	50.0
NO2	30.0	25.0	29.6	15.5	28.5	29.7	40.0
PM10	182.0	128.0	121.0	109.0	111.0	101.9	60.0

PM_{10} ರ ಪ್ರಮಾಣವು ಎಲ್ಲಾ ಮಾಪನ ವರ್ಷಗಳಲ್ಲಿ ರಾಷ್ಟ್ರೀಯ ಪರಿವೇಷ್ಟಕ ವಾಯುಗುಣಮಟ್ಟದ ಮಿತಿ(60.0 $\mu g/M^3$)ಗಿಂತ ಹೆಚ್ಚಿದೆ. ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು ಈ ಹೆಚ್ಚಳಕ್ಕೆ ಕಾರಣವಾಗಿದ್ದು, ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ – 2012–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣಗಳು ರಾಷ್ಟ್ರೀಯ ಮಿತಿಯೊಳಗಿವೆ.


3. ಸ್ವಾನ್ ಸಿಲ್ಕ್ ಕೈಗಾರಿಕೆ, ಪೀಣ್ಯ ಬೆಂಗಳೂರು.



	2013-14	2014-15	2016-17	2017-18	Standards
SO2	12.4	11.7	2.3	2	50.0
NO2	28.3	26.8	37.9	32	40.0
PM10	125.0	119.0	99.0	96.6	60.0

ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ PM_{10} ಪ್ರಮಾಣವು ರಾಷ್ಟ್ರೀಯ ಮಿತಿ (60.0 **µg/M^3**) ಗಿಂತ ಹೆಚ್ಚಿದ್ದು, ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು ಈ ಹೆಚ್ಚಳಕ್ಕೆ ಕಾರಣವಾಗಿದೆ. ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ – 2013–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣಗಳು ರಾಷ್ಟ್ರೀಯ ಮಿತಿಯೊಳಗಿವೆ.

4. ಪೀಣ್ಯ ಕೈಗಾರಿಕಾ ಪ್ರದೇಶ (ಅರ್ಬನ್ ಇಕೋ ಪಾರ್ಕ್ – ಪೀಣ್ಯ), ಬೆಂಗಳೂರು.




	2012-13	2013-14	2014-15	2015-16	2016-17	2017-18	STD
SO2	16.0	15.0	12.0	3.9	2.0	2.0	50.0
NO2	30.0	30.0	32.0	20.2	37.0	25.5	40.0
PM10	121.0	123.0	144.0	127.0	109.0	76.1	60.0

PM_{10} ರ ಪ್ರಮಾಣವು ರಾಷ್ಟ್ರೀಯ ಪರಿವೇಷ್ಟಕ ವಾಯುಗುಣಮಟ್ಟದ ಮಿತಿ(60.0 **µg/M^3**)ಗಿಂತ ಹೆಚ್ಚಿದ್ದು, ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು ಈ ಹೆಚ್ಚಳಕ್ಕೆ ಕಾರಣವಾಗಿದೆ. SO_2 ಮತ್ತು NO_2 ಗಳು 2012–2018 ಮಾಪನ ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಮಿತಿಯೊಳಗಿದೆ.

- **ನಗರದ ಸಮ್ಮಿಶ್ರ ವಲಯ:** ಬೆಂಗಳೂರು ನಗರದಲ್ಲಿ ಏಳು ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳನ್ನು ಸಮ್ಮಿಶ್ರ ವಲಯಗಳಲ್ಲಿ (ವಸತಿ, ಗ್ರಾಮೀಣ ಹಾಗು ಇತರೆ ಪ್ರದೇಶ) ಸ್ಥಾಪಿಸಲಾಗಿದೆ. ಅವುಗಳೆಂದರೆ; 1. ಆಮ್ಕೋ ಬ್ಯಾಟರೀಸ್, ಮೈಸೂರು ರಸ್ತೆ; 2. ಯಶವಂತಪುರ ಪೊಲೀಸ್ ಸ್ಟೇಷನ್; 3. ಕೇಂದ್ರ ರೇಷ್ಮೆ ಮಂಡಳಿ, ಹೊಸೂರು ರಸ್ತೆ; 4. ಟೆರ್ರಿ ಕಛೇರಿ, ದೊಮಲೂರು, 5. ಬಾಣಸವಾಡಿ ಪೊಲೀಸ್ ಸ್ಟೇಶನ್; 6. ಕಾಜಿಸೊಣ್ಣೇನಹಳ್ಳಿ, ವೈಟ್‌ಫೀಲ್ಡ್. 7. ಯು.ಪಿ.ಸಿ.ಇ, ಕೆ.ಆರ್ ವೃತ್ತ


1) ಆಮ್ಕೋ ಬ್ಯಾಟರೀಸ್, ಮೈಸೂರು ರಸ್ತೆ, ಬೆಂಗಳೂರು



	2012-13	2013-14	2014-15	2015-16	2016-17	2017-18	STD
SO2	15.0	15.0	11.9	4.0	2.0	2.0	50.0
NO2	31.0	29.0	32.9	20.2	38.0	32.7	40.0
PM10	169.0	170.0	209.0	119.0	107.0	86.1	60.0

PM_{10} ಪ್ರಮಾಣವು 2012–2018 ರ ಅವಧಿಯಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 **µg/M^3**)ಗಿಂತ ಹೆಚ್ಚಿದೆ. ಈ ಹೆಚ್ಚಳಕ್ಕೆ ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು ಕಾರಣ. 2012–2018ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.


2) ಯಶವಂತಪುರ ಪೋಲೀಸ್ ಸ್ಟೇಷನ್, ಬೆಂಗಳೂರು.



	2012-13	2013-14	2014-15	2015-16	2016-17	2017-18	STD
SO2	16.0	14.0	10.8	3.6	2.0	2.0	50.0
NO2	31.0	31.0	31.5	22.6	39.6	33.0	40.0
PM10	152.0	110.0	129.0	105.0	93.0	95.0	60.0

PM_{10} ಪ್ರಮಾಣವು ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ(60.0 $\mu g/M^3$) ಗಿಂತ ಹೆಚ್ಚಿದೆ. 2012–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ. ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು PM_{10} ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಿವೆ.


3) ಕೇಂದ್ರ ರೇಷ್ಮೆ ಮಂಡಳಿ, ಹೊಸೂರು ರಸ್ತೆ, ಬೆಂಗಳೂರು



	2012-13	2013-14	2014-15	2015-16	2016-17	2017-18	Standards
SO2	15.0	15.0	11.5	3.9	2.3	2	50.0
NO2	30.0	30.0	31.3	21.1	39.4	30.8	40.0
PM10	155.0	175.0	189.0	165.0	132.0	93.3	60.0

PM_{10} ಪ್ರಮಾಣವು ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ(60.0 $\mu g/M^3$) ಗಿಂತ ಹೆಚ್ಚಿದೆ. ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗು ರಸ್ತೆ ಧೂಳು PM_{10} ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಿವೆ. 2012–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.


4. ಟೆರ್ರಿ ಕಛೇರಿ, ದೊಮಲೂರು, ಬೆಂಗಳೂರು



	2013-14	2014-15	2016-17	2017-18	Standards
SO2	6.7	6.3	2.0	2.0	50.0
NO2	9.8	10.8	32.0	32.4	40.0
PM10	58.8	58.0	120.0	118.4	60.0

2013–18ರ ಅವಧಿಯಲ್ಲಿ PM_{10} ರ ಪ್ರಮಾಣವು ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 **µg/M^3**)ಗಿಂತ ಹೆಚ್ಚಿದೆ. ಈ ಹೆಚ್ಚಳವು ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗೂ ರಸ್ತೆ ಧೂಳಿನಿಂದಾಗಿದೆ. 2013–18ರ ಅವಧಿಯಲ್ಲಿ SO_2 ಹಾಗೂ NO_2 ಮೌಲ್ಯಗಳು ರಾಷ್ಟ್ರೀಯ ಮಿತಿಯೊಳಗಿದೆ.


5. ಬಾಣಸವಾಡಿ ಪೊಲೀಸ್ ಸ್ಟೇಶನ್, ಬೆಂಗಳೂರು.



	2013-14	2014-15	2016-17	2017-18	Standards
SO2	11.0	10.2	2.0	2.0	50.0
NO2	24.3	25.0	26.8	30.8	40.0
PM10	85.0	84.0	80.0	93.3	60.0

2013–18ರ ಅವಧಿಯಲ್ಲಿ PM_{10} ರ ಪ್ರಮಾಣವು ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 **µg/M^3**)ಗಿಂತ ಹೆಚ್ಚಿದೆ. ಈ ಹೆಚ್ಚಳವು ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗೂ ರಸ್ತೆ ಧೂಳಿನಿಂದಾಗಿದೆ. 2013–18ರ ಅವಧಿಯಲ್ಲಿ SO_2 ಹಾಗೂ NO_2 ಮೌಲ್ಯಗಳು ರಾಷ್ಟ್ರೀಯ ಮಿತಿಯೊಳಗಿದೆ.


6. ಮಾದವಚಾರಿ ಮನೆ, ಕಾಜಿಸೊಣ್ಣೇನಹಳ್ಳಿ, ಬೆಂಗಳೂರು



	2012-13	2013-14	2014-15	2015-16	2016-17	2017-18	Standards
SO2	13.0	12.0	9.8	3.6	2.0	2.6	50.0
NO2	29.0	29.0	25.4	12.6	24.3	32.2	40.0
PM10	59.0	67.0	69.0	75.0	83.0	89.8	60.0

2012–13 ಹೊರತು ಪಡಿಸಿ ಉಳಿದ ಎಲ್ಲಾ ಮಾಪನ ವರ್ಷಗಳಲ್ಲಿ PM_{10} ರ ಪ್ರಮಾಣವು ರಾಷ್ಟ್ರೀಯ ಮಿತಿ(60.0 $\mu g/M^3$)ಗಿಂತ ಹೆಚ್ಚಾಗಿರುವುದು ಕಂಡು ಬಂದಿದೆ. 2012–13 ನೇ ಸಾಲಿನಲ್ಲಿ PM_{10} ರ ಪ್ರಮಾಣವು 59.0 $\mu g/M^3$ ಇದ್ದು, ರಾಷ್ಟ್ರೀಯ ಮಿತಿಯ ಹತ್ತಿರವಿದೆ. 2012–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.


7. ಯು.ವಿ.ಸಿ.ಇ, ಕೆ.ಆರ್ ವೃತ್ತ, ಬೆಂಗಳೂರು



PM_{10} ರ ಪ್ರಮಾಣವು ಮಾಪನ ಮಾಡಿದ ಎಲ್ಲಾ ವರ್ಷಗಳಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 $\mu g/M^3$)ಗಿಂತ ಹೆಚ್ಚಿದೆ. 2016–18ರ ಅವಧಿಯಲ್ಲಿ SO_2 ಹಾಗೂ NO_2 ಮೌಲ್ಯಗಳು ರಾಷ್ಟ್ರೀಯ ಮಿತಿಯೊಳಗಿದೆ. PM_{10}ರ ಪ್ರಮಾಣದ ಹೆಚ್ಚಳವು ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಹಾಗೂ ರಸ್ತೆ ಧೂಳಿನಿಂದಾಗಿದೆ.

- **ಸೂಕ್ಷ್ಮ ವಲಯ:** ಬೆಂಗಳೂರು ನಗರದ ಸೂಕ್ಷ್ಮ ವಲಯಗಳಲ್ಲಿರುವ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳು ಈ ಕೆಳಗಿನಂತಿವೆ.
    1. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
    2. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಕೇಂದ್ರ, ನಿಮ್ಹಾನ್ಸ್.


1. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.



	2012-13	2013-14	2014-15	2015-16	2016-17	2017-18	STD
SO2	13.0	13.0	11.2	4.0	2.0	2.6	50.0
NO2	30.0	29.0	30.9	23.0	36.3	31.7	40.0
PM10	152.0	88.0	154.0	100.0	80.0	88.3	60.0

PM_{10} ಪ್ರಮಾಣವು ಮಾಪನ ಅವಧಿ 2012–2018 ರಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 **µg/M3**)ಗಿಂತ ಹೆಚ್ಚಿದೆ. ಇದಕ್ಕೆ ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಮತ್ತು ರಸ್ತೆ ಧೂಳು ಕಾರಣವಾಗಿದೆ. 2012–2018 ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.

2. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಕೇಂದ್ರ, ನಿಮ್ಹಾನ್ಸ್, ಬೆಂಗಳೂರು.



	2012-13	2013-14	2014-15	2015-16	2016-17	2017-18	Standards
SO2	13.0	13.0	10.7	3.8	2.0	2.6	50.0
NO2	29.0	29.0	30.3	17.5	31.0	32.3	40.0
PM10	70.0	79.0	125.0	113.0	78.0	89.4	60.0

PM_{10} ಪ್ರಮಾಣವು 2012–2018 ರ ಅವಧಿಯಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 **µg/M3**)ಗಿಂತ ಹೆಚ್ಚಿದೆ. ಇದಕ್ಕೆ ನಿರ್ಮಾಣ ಚಟುವಟಿಕೆಗಳು, ವಾಹನ ಸಂಚಾರ ಮತ್ತು ರಸ್ತೆ ಧೂಳು ಕಾರಣವಾಗಿದೆ. 2012–2018ರ ಅವಧಿಯಲ್ಲಿ SO_2 ಮತ್ತು NO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.

5ಎ.7.2: ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವಾಯು ಗುಣಮಟ್ಟದ ವಿವರ

ಮಂಡಳಿಯು ವರದಿ ವರ್ಷದ ಅವಧಿಯಲ್ಲಿ ರಾಜ್ಯದ ಪ್ರಮುಖ 19 ನಗರಗಳಲ್ಲಿ ರಾಷ್ಟ್ರೀಯ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕಾರ್ಯಕ್ರಮದ (NAMP) ಅಡಿಯಲ್ಲಿ ಪರಿವೇಷ್ಟಕ ವಾಯು ಗುಣಮಟ್ಟ ಮಾಪನವನ್ನು ಮಾಡಿದೆ. ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳಲ್ಲಿ ವರ್ಷವಿಡಿ ವಾರದಲ್ಲಿ 2 ಬಾರಿ 24 ಗಂಟೆ PM_{10}, $PM_{2.5}$, SO_2, NO_2, NH_3, Pb ಹಾಗೂ CO ಗಳ ಮಾಪನವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ವಯ ಮಾಡಲಾಗುತ್ತಿದೆ. ಸಂಗ್ರಹಿಸಿದ ದತ್ತಾಂಶವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ದೆಹಲಿಗೆ ವಿದ್ಯುನ್ಮಾನ ಮೂಲಕ ಕಳುಹಿಸಲಾಗುತ್ತಿದೆ ಮತ್ತು ಮಂಡಳಿಯ ಅಂತರ್ಜಾಲದಲ್ಲಿ (ವೆಬ್‌ಸೈಟ್) ಪ್ರಕಟಿಸಲಾಗುತ್ತಿದೆ.

ಕೋಷ್ಟಕ: 5ಎ:12: ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ 2017–18 ರ ಅವಧಿಯಲ್ಲಿ ಪರಿವೇಷ್ಟಕ ವಾಯುಗುಣ ಮಟ್ಟದ ವಾರ್ಷಿಕ ಸರಾಸರಿ ಪ್ರಮಾಣದ ವಿವರ


ಕ್ರಮ ಸಂಖ್ಯೆ	ಸ್ಥಳ	SO_2 µg/m^3	NO_2 µg/m^3	PM_{10} µg/m^3	$PM_{2.5}$ µg/M^3	NH_3 µg/M^3	Pb µg/M^3	AQI	
1	ಪ್ರಾದೇಶಿಕ ಕಛೇರಿ, ಮಂಡ್ಯ.	2.1	14.5	42.8	24.0	10.4	0.002	43	ಉತ್ತಮ
2	ಕರಾಮಾನಿಮಂ, ಮೈಸೂರು.	2.3	16.6	46.4	25.0	11.2	0.002	46	ಉತ್ತಮ
3	ಕರಾಮಾನಿಮಂ ಕಛೇರಿ, ಮಡಿಕೇರಿ	2.1	13.1	35.4	18.5	7.1	0.001	35	ಉತ್ತಮ
4	ಪ್ರಾದೇಶಿಕ ಕಛೇರಿ, ಚಿತ್ರದುರ್ಗ	2.3	4.5	47.5	17.1	4.9	0.030	48	ಉತ್ತಮ
5	ವಿಐಎಸ್ಎಲ್ ಭದ್ರಾವತಿ	2.4	4.5	36.3	18.2	6.6	0.027	36	ಉತ್ತಮ
6	ಪ್ರಾದೇಶಿಕ ಕಛೇರಿ ದಾವಣಗೆರೆ	2.6	4.5	47.5	21.2	4.7	0.030	48	ಉತ್ತಮ
7	ಕೆ.ಆರ್.ವೃತ್ತ, ಮೈಸೂರು	2.2	16.8	53.3	28.0	13.3	0.004	53	ತೃಪ್ತಿಕರ
8	ಪ್ರಾದೇಶಿಕ ಕಛೇರಿ ಕೋಲಾರ	2.0	31.0	**72.3**	36.6	31.9	0.138	72	ತೃಪ್ತಿಕರ
9	ಪ್ರಾದೇಶಿಕ ಕಛೇರಿ ಚಾಮರಾಜನಗರ	2.1	17.3	59.1	30.2	12.3	0.004	59	ತೃಪ್ತಿಕರ
10	ಪ್ರಾದೇಶಿಕ ಕಛೇರಿ ಹಾಸನ	5.1	19.4	33.1	31.3	2.0	BDL	52	ತೃಪ್ತಿಕರ
11	ಬೈಕಂಪಾಡಿ ಕೈಗಾರಿಕಾ ಪ್ರದೇಶ, ಮಂಗಳೂರು	8.3	10.3	**69.8**	**45.6**	BDL	0.173	76	ತೃಪ್ತಿಕರ
12	ಹೆಚ್.ಪಿ.ಎಫ್ ಇನ್ಟೇಕ್ ಪಾಯಿಂಟ್, ರಾಣೆಬೆನ್ನೂರ	2.5	4.5	46.1	19.3	7.7	0.020	87	ತೃಪ್ತಿಕರ
13	ಪ್ರಾದೇಶಿಕ ಕಛೇರಿ ಧಾರವಾಡ	5.2	21.4	**67.2**	27.8	23.7	*	67	ತೃಪ್ತಿಕರ
14	ಗೋಕುಲ ರಸ್ತೆ, ಹುಬ್ಬಳ್ಳಿ	5.6	26.4	**89.2**	34.2	25.8	*	89	ತೃಪ್ತಿಕರ
15	ಪ್ರಾದೇಶಿಕ ಕಛೇರಿ ಬೆಳಗಾವಿ	2.0	15.4	**79.3**	**40.2**	*	*	79	ತೃಪ್ತಿಕರ
16	ಸರ್ಕಾರಿ ಆಸ್ಪತ್ರೆ, ಕಲಬುರ್ಗಿ	2.3	24.0	**65.6**	**42.0**	*	*	70	ತೃಪ್ತಿಕರ
17	ಪ್ರಾದೇಶಿಕ ಕಛೇರಿ ರಾಯಚೂರು	2.6	12.3	**98.3**	38.6	19.1	*	98	ತೃಪ್ತಿಕರ
18	ಪ್ರಾದೇಶಿಕ ಕಛೇರಿ ಬಳ್ಳಾರಿ	4.8	11.5	51.8	20.5	*	*	52	ತೃಪ್ತಿಕರ
19	ಸಿಎಂಸಿ ಬಳ್ಳಾರಿ	4.9	11.6	57.9	25.3	*	*	58	ತೃಪ್ತಿಕರ
20	ಪ್ರಾದೇಶಿಕ ಕಛೇರಿ ಬೀದರ	2.0	19.7	**101.9**	**54.7**	*	*	101	ಮಧ್ಯಮ
21	ಪ್ರಾದೇಶಿಕ ಕಛೇರಿ ತುಮಕೂರು	2.0	31.3	**118.1**	**56.0**	31.9	0.114	112	ಮಧ್ಯಮ
22	ಮೋತಿ ಟಾಕೀಸ್, ದಾವಣಗೆರೆ	5.3	10.0	**164.6**	*	9.4	0.040	143	ಮಧ್ಯಮ
	ಎನ್.ಎ.ಎ.ಕ್ಯೂ ಶಿಷ್ಟತೆ µg/M^3	**50.0**	**40.0**	**60.0**	**40.0**	**100.0**	**0.50**		

PM_{10}ರ ಪ್ರಮಾಣವು 10 ನಗರಗಳಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ (60.0 µg/M^3)ಗಿಂತ ಹೆಚ್ಚಿದೆ ಯಾವುವೆಂದರೆ, ಕೋಲಾರ, ಮಂಗಳೂರು, ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಕಲಬುರ್ಗಿ, ರಾಯಚೂರು, ಬೀದರ, ತುಮಕೂರು ಹಾಗೂ ದಾವಣಗೆರೆ. $PM_{2.5}$ ರ ಪ್ರಮಾಣವು ಮಂಗಳೂರು, ಬೆಳಗಾವಿ, ಕಲಬುರ್ಗಿ, ಬೀದರ ಹಾಗೂ ತುಮಕೂರಿನಲ್ಲಿ ಹೆಚ್ಚಾಗಿದೆ. 2017–18 ನೇ ಸಾಲಿನಲ್ಲಿ SO_2 ಮತ್ತು NO_2 ಪ್ರಮಾಣವು ಕ್ರಮವಾಗಿ 40.0 µg/M^3 ಹಾಗೂ 50.0 µg/M^3 ರ ರಾಷ್ಟ್ರೀಯ ಮಿತಿಯೊಳಗಿದೆ. ಮಂಡ್ಯ, ಮೈಸೂರು, ಮಡಿಕೇರಿ ಹಾಗೂ ಭದ್ರಾವತಿಯ ವಾಯು ಗುಣಮಟ್ಟದ ಸೂಚ್ಯಂಕ (AQI) ಉತ್ತಮವಾಗಿದೆ. ಕೋಲಾರ, ಚಾಮರಾಜನಗರ, ಹಾಸನ, ಮಂಗಳೂರು, ರಾಣೇಬೆನ್ನೂರು, ಹುಬ್ಬಳ್ಳಿ – ಧಾರವಾಡ, ಬೆಳಗಾವಿ, ರಾಯಚೂರು, ಕಲಬುರ್ಗಿ, ಬಳ್ಳಾರಿ ಹಾಗೂ ಕೆ.ಆರ್.ವೃತ್ತ, ಮೈಸೂರಿನ ವಾಯು ಗುಣಮಟ್ಟದ ಸೂಚ್ಯಂಕ ತೃಪ್ತಿಕರವಾಗಿದೆ. ಬೀದರ, ತುಮಕೂರು ಹಾಗೂ ಮೋತಿ ಟಾಕೀಸ್, ದಾವಣಗೆರೆಯ ವಾಯು ಗುಣಮಟ್ಟದ ಸೂಚ್ಯಂಕ ಮಧ್ಯಮವಾಗಿದೆ. ಇದಕ್ಕೆ ನಿರ್ಮಾಣ ಚಟುವಟಿಕೆ, ವಾಹನ ಸಂಚಾರ ಹಾಗೂ ರಸ್ತೆ ಧೂಳು ಕಾರಣವಾಗಿದೆ.

5ಎ.7.3: ನಿರಂತರ ಪರಿವೇಷ್ಠಕ ವಾಯು ಗುಣಮಟ್ಟ ಮಾಪನ

5ಎ.7.3.1: ಬೆಂಗಳೂರು ನಗರದ ನಿರಂತರ ಪರಿವೇಷ್ಠಕ ವಾಯು ಗುಣಮಟ್ಟ ಮಾಪನ ಕೇಂದ್ರ (CAAQMS)


1. ನಗರ ರೈಲು ನಿಲ್ದಾಣ, ಬೆಂಗಳೂರು.



	2012-13	2013-14	2014-15	2015-16	2016-17	2017-18	STD
SO2	8.3	8.7	10.6	9.0	6.8	7.5	50.0
NO2	29.5	22.7	22.7	45.6	45.8	52.0	40.0
PM10	99.0	64.0	67.0	104.0	102.0	100.9	60.0

PM_{10} ಪ್ರಮಾಣವು 2012–2018 ರ ಅವಧಿಯಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ 60.0 **µg/M^3** ಗಿಂತ ಹೆಚ್ಚಿದೆ. NO_2 ಪ್ರಮಾಣವು 2012–15 ರ ಅವಧಿಯಲ್ಲಿ ರಾಷ್ಟ್ರೀಯ ಮಿತಿ 40.0 **µg/M^3** ಯೊಳಗಿದ್ದು, 2015–16ರ ನಂತರ ಪ್ರಮಾಣವು ಹೆಚ್ಚಳವಾಗಿರುತ್ತದೆ. 2012–2018 ರ ಅವಧಿಯಲ್ಲಿ SO_2 ಪ್ರಮಾಣವು ರಾಷ್ಟ್ರೀಯ ಮಿತಿಯೊಳಗಿದೆ.

2. ಎಸ್.ಜಿ. ಹಳ್ಳಿ, ಶಿವನಗರ:



	2012-13	2013-14	2014-15	2015-16	2016-17	2017-18	STD
SO2	6.3	6.5	6.2	3.7	3.7	2.2	50.00
NO2	17.5	17.5	16.5	25.7	30.3	24	40.00
PM10	29.0	22.0	24.0	72.0	46.0	50.4	60.00

ಸಾಣೇಗೊರವನಹಳ್ಳಿಯಲ್ಲಿ SO_2 ಮತ್ತು NO_2 ಪ್ರಮಾಣವು 2012–2018 ರ ಅವಧಿಯಲ್ಲಿ ರಾಷ್ಟ್ರೀಯ ಮಿತಿ 40.0 **µg/M^3** ಹಾಗೂ 50.0 **µg/M^3** ಯೊಳಗೆ ಇದೆ. PM_{10} ಪ್ರಮಾಣವು 2015–16 ಹೊರತುಪಡಿಸಿ, 2012–2018 ರ ಅವಧಿಯಲ್ಲಿ ರಾಷ್ಟ್ರೀಯ ವಾಯುಗುಣಮಟ್ಟದ ಮಿತಿ 60.0 **µg/M^3** ಯೊಳಗಿದೆ. ಎಸ್.ಜಿ.ಹಳ್ಳಿಯ ಸುತ್ತಮುತ್ತಲಿನ ಪ್ರದೇಶದಲ್ಲಿನ ಒಳಚರಂಡಿ ಲೈನ್ ಮತ್ತು ಮುಖ್ಯ ಡ್ರೈನ್ ನಿರ್ಮಾಣ ಚಟುವಟಿಕೆ, ವಾಹನ ಚಲನೆ ಹಾಗೂ ರಸ್ತೆ ಧೂಳು ಇದಕ್ಕೆ ಕಾರಣವಾಗಿದೆ.

5ಎ.7.3.2.: ಹೊಸ ನಿರಂತರ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ಸ್ಥಾಪನೆ

ವರದಿಯ ವರ್ಷದಲ್ಲಿ ಮಂಡಳಿಯು 29 ನಿರಂತರ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಉಪಕರಣಗಳನ್ನು ಪಡೆದಿದೆ. ಆಮದು ಮಾಡಿದ ಅತ್ಯಾಧುನಿಕ ಉಪಕರಣಗಳಲ್ಲಿ ಸುತ್ತುವರಿದ ಗಾಳಿಯ 8 ಹಾಗೂ ಹವಾಮಾನದ 5 ನಿಯತಾಂಕಗಳನ್ನು ವಿಶ್ಲೇಷಿಸುವ ಸಾಧನ, ಸಾಫ್ಟವೇರ್ ಹಾಗೂ ಹಾರ್ಡ್‌ವೇರ್‌ಳನ್ನು ಒಳಗೊಂಡಿದೆ. ವಿವರಗಳು ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಸ್ತುಗಳ ವಿವರಣೆ	ಮಾಪನ ವಿಧಾನಗಳು
1.	SO_2 ಅನಲೈಜರ್	ಅಲ್ಟ್ರಾವೈಲೆಟ್ ಫ್ಲೂರೆಸನ್ಸ್
2.	NO-NO_2-NOx ಅನಲೈಜರ್	ಕೆಮಿಲುಮಿನೆಸ್ಸೆನ್ಸ್
3.	NH_3 ಕನ್ವರ್ಟರ್	ಕೆಮಿಲುಮಿನೆಸ್ಸೆನ್ಸ್
4.	CO ಅನಲೈಜರ್	ನಾನ್ ಡಿಸ್ಪರ್ಸಿವ್ ಇನ್‌ಫ್ರಾರೆಡ್ (NDIR)
5.	O_3 ಅನಲೈಜರ್	ಫೋಟೋಮೆಟ್ರಿಕ್
6.	ಬೆನ್‌ಜೀನ್ ಅನಲೈಜರ್ (BTX)	ಜಿಸಿ ಬೇಸ್ಡ್ ಕನ್ಟಿನ್ಯೂಸ್ ಅನಲೈಜರ್
7.	$PM_{2.5}$ ಅನಲೈಜರ್	ಬೀಟಾ ಅಟೆನ್ಯೂಷನ್
8.	PM_{10} ಅನಲೈಜರ್	ಬೀಟಾ ಅಟೆನ್ಯೂಷನ್
9.	ಹವಾಮಾನ ಸಂವೇದಕಗಳು (ಗಾಳಿಯ ವೇಗ, ಗಾಳಿಯ ದಿಕ್ಕು, ಹೊರಗಿನ ತಾಪಮಾನ, ಒತ್ತಡ ಮತ್ತು ತೇವಾಂಶ)	
10.	ಬಹು ಅನಿಲ ಮಾಪನಾಂಕ ನಿರ್ಣಯ ವ್ಯವಸ್ಥೆಗಳು ಝೀರೋ ಮತ್ತು ಏರ್ ಜನರೇಟರ್	
11.	ತಂತ್ರಾಂಶದೊಂದಿಗೆ ಪಿಸಿ ಆಧಾರಿತ ಡೇಟಾ ಲಾಗರ್, ಪ್ರತಿ ಕೇಂದ್ರಗಳಲ್ಲಿ ಡೇಟಾ ಸ್ವಾಧೀನ ಮತ್ತು ನಿರ್ವಹಣಾ ವ್ಯವಸ್ಥೆ, ರಿಯಲ್ ಟೈಮ್ ಡಿಸ್ಪ್ಲೇಗಾಗಿ ಸರ್ವರ್‌ಗೆ ಡೇಟಾ ಅಪ್ಲೋಡ್	
12.	ಬೆಂಗಳೂರು ನಗರದಲ್ಲಿ ಕೇಂದ್ರ ಕಾರ್ಯಕ್ಷೇತ್ರಗಳು	



ಚಿತ್ರ – ಸಿ.ಎ.ಎ.ಕ್ಯೂ.ಎಂ ಕೇಂದ್ರ

ಕೋಷ್ಟಕ : 5ಎ.13: ವರದಿಯ ವರ್ಷದಲ್ಲಿ ಹೊಸ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ

ಕ್ರಮ ಸಂಖ್ಯೆ	ಜಿಲ್ಲೆ	ಸ್ಥಿತಿ
1.	ಕವಿಕಾ ಕೈಗಾರಿಕಾ ಆವರಣ, ಮೈಸೂರು ರಸ್ತೆ, ಬೆಂಗಳೂರು	ಸ್ಥಾಪನೆ ಮತ್ತು ಕಮೀಷನ್ ಪೂರ್ಣಗೊಂಡಿದೆ ಹಾಗೂ ಡೇಟಾ ಮಂಡಳಿ ವೆಬ್‌ಸೈಟ್‌ಗೆ ಸಂಪರ್ಕಗೊಂಡಿದೆ.
2.	ರಾಜೀವ್ ಗಾಂಧಿ ಇನ್ಸಟಿಟ್ಯೂಟ್ ಆಫ್ ಚೆಸ್ಟ್ ಡಿಸೀಸಸ್, ನಿಮ್ಹಾನ್ಸ್, ಬೆಂಗಳೂರು	
3.	ಶಾಲಿನಿ ಗ್ರೌಂಡ್ಸ್ ಆವರಣ, ಜಯನಗರ 5 ನೇ ಬ್ಲಾಕ್, ಬೆಂಗಳೂರು	
4.	ವೆಟರ್ನರಿ ಕಾಲೇಜ್ ಆವರಣ, ಹೆಬ್ಬಾಳ, ಬೆಂಗಳೂರು	
5.	ಸೆಂಟ್ರಲ್ ಸಿಲ್ಕ್ ಬೋರ್ಡ್ ಫ್ಲೈ ಓವರ್ ಹತ್ತಿರ, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು	
6.	ಕಾರ್ಪೋರೇಷನ್ ಕಛೇರಿ ಹತ್ತಿರ, ಹುಬ್ಬಳ್ಳಿ	
7.	ಸರ್ಕ್ಯೂಟ್ ಹೌಸ್ ಆವರಣ, ಮಂಗಳೂರು	
8.	ಜೂನಿಯರ್ ಕಾಲೇಜ್ ಆವರಣ, ಚಿಕ್ಕಬಳ್ಳಾಪುರ	

ಮಾಪನ ಕೇಂದ್ರಗಳ ಸ್ಥಾಪನೆಯ ಸ್ಥಿತಿಯ ವಿವರ ಕೆಳಕಂಡಂತಿದೆ

ಕೋಷ್ಟಕ : 5ಎ.14: ಸ್ಥಾಪನೆಯ ವಿವಿಧ ಹಂತದಲ್ಲಿರುವ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಿವರ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಸ್ಥಳದ ವಿವರ

ಕ್ರಮ ಸಂಖ್ಯೆ	ಜಿಲ್ಲೆ / ಸ್ಥಳ	ಸಿಎಎಕ್ಯೂಎಂಎಸ್
1.	ಪಾಲಿಟೆಕ್ನಿಕ್ ಕಾಲೇಜ್ ಆವರಣ, ಕಲಬುರ್ಗಿ	1
2.	ಪ್ರಾದೇಶಿಕ ಕಛೇರಿ ಕಟ್ಟಡ ಆವರಣ, ರಾಮನಗರ	1
3.	ಮಡಿಕೇರಿ	1
4.	ಡಿ.ಸಿ ಕಛೇರಿ ಆವರಣ, ಯಾದಗಿರಿ	1
5.	ಸರ್ಕಾರಿ ಕಾಲೇಜ್ ಆವರಣ, ಉಡುಪಿ	1
6.	ಪ್ರಾದೇಶಿಕ ಕಛೇರಿ ಕಟ್ಟಡ ಆವರಣ, ಹಾವೇರಿ	1
7.	ಡಿ.ಸಿ ಕಛೇರಿ ಆವರಣ, ಕೊಪ್ಪಳ	1
8.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್ ಆವರಣ, ಗದಗ	1
9.	ಪ್ರಾದೇಶಿಕ ಕಛೇರಿ ಆವರಣ, ಕಾರವಾರ	1
10.	ರಾಮತೀರ್ಥ ನಗರ ಉದ್ಯಾನವನ, ಬೆಳಗಾವಿ	1
11.	ಪ್ರಾದೇಶಿಕ ಕಛೇರಿ ಆವರಣ, ದಾವಣಗೆರೆ	1
12.	ಪ್ರಾದೇಶಿಕ ಕಛೇರಿ ಆವರಣ, ಹಾಸನ	1
13.	ಪ್ರಾದೇಶಿಕ ಕಛೇರಿ ಆವರಣ, ಬೀದರ	1
14.	ಪ್ರಾದೇಶಿಕ ಕಛೇರಿ ಆವರಣ, ಕೋಲಾರ	1
15.	ಡಿ.ಸಿ ಕಛೇರಿ ಆವರಣ, ರಾಯಚೂರು	1
16.	ಪ್ರಾದೇಶಿಕ ಕಛೇರಿ ಆವರಣ, ಮೈಸೂರು	1
17.	ಪ್ರಾದೇಶಿಕ ಕಛೇರಿ ಕಟ್ಟಡ ಆವರಣ, ಚಾಮರಾಜನಗರ	1
18.	ಪ್ರಾದೇಶಿಕ ಕಛೇರಿ ಆವರಣ, ಶಿವಮೊಗ್ಗ	1
19.	ಪ್ರಾದೇಶಿಕ ಕಛೇರಿ ಆವರಣ, ವಿಜಯಪುರ	1
20.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್ ಆವರಣ, ಬಾಗಲಕೋಟೆ	1
21.	ಪ್ರಾದೇಶಿಕ ಕಛೇರಿ ಕಟ್ಟಡ ಆವರಣ, ಚಿಕ್ಕಮಗಳೂರು	1

5ಎ.7.4 : ವಾಹನ ಹೊರಸೂಸುವಿಕೆ ಮಾನಿಟರಿಂಗ್

ವಾಹನದ ಹೊರಸೂಸುವಿಕೆಯಿಂದ ಪರಿವೇಷ್ಠಕ ವಾಯುಗುಣಮಟ್ಟದ ಮೇಲೆ ಆಗುವ ಪರಿಣಾಮವನ್ನು ತಿಳಿಯಲು ಮಂಡಳಿಯು ಹನ್ನೆರಡು ಮೊಬೈಲ್ ವ್ಯಾನ್‌ಗಳನ್ನು ಖರೀದಿಸಿದ್ದು, ಇವುಗಳಲ್ಲಿ ಸ್ಮೋಕ್ ಡೆನ್ಸಿಟಿ ಮೀಟರ್‌ಗಳನ್ನು ಹಾಗೂ ಗ್ಯಾಸ್ ಅನಲೈಸರ್‌ಗಳನ್ನು ಅಳವಡಿಸಲಾಗಿದೆ. 6 ವಾಹನಗಳನ್ನು ಬೆಂಗಳೂರು ಸಿಟಿಗೆ ಹಾಗೂ ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ, ಚಿತ್ರದುರ್ಗ ಹಾಗೂ ಬಳ್ಳಾರಿಗೆ ತಲಾ ಒಂದು ವಾಹನವನ್ನು ನಿಯೋಜಿಸಲಾಗಿದೆ. ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ, ಸಂಚಾರಿ ಪೊಲೀಸ್, ಬಿ.ಎಂ.ಟಿ.ಸಿ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವಲಯ ಕಚೇರಿ ಇವರುಗಳ ಸಹಯೋಗದೊಂದಿಗೆ ಜಂಟಿಯಾಗಿ ಮಂಡಳಿಯು ವಿವಿಧ ಸ್ಥಳಗಳಲ್ಲಿ ತಪಾಸಣಾ ಕಾರ್ಯವನ್ನು ಕೈಗೊಂಡಿದೆ. ವಾಹನ ಹೊರಸೂಸುವಿಕೆ ಫಲಿತಾಂಶಗಳನ್ನು ಕೆಳಗೆ ಸೂಚಿಸಲಾಗಿದೆ.

ಕೋಷ್ಠಕ 5ಎ.15: ವಾಹನಗಳ ತಪಾಸಣೆ ಮಾಡಲಾದ ಸ್ಥಿತಿಗತಿ

ವಾಹನಗಳು	ಒಟ್ಟು	ಕನ್‌ಫರ್ಮ್	ಕನ್‌ಫರ್ಮ್ (%)	ನಾನ್ ಕನ್‌ಫರ್ಮ್	ನಾನ್ ಕನ್‌ಫರ್ಮ್ (%)
ಪೆಟ್ರೋಲ್	17088	14795	86.0 %	2293	14.0 %
ಡೀಸೆಲ್ ವಾಹನ	10285	7811	75.0 %	2474	25.0 %
ಒಟ್ಟು ವಾಹನ	27373	22606	80.5 %	4767	19.5 %

5ಎ.7.5: ಮೊಬೈಲ್ ಆಂಬಿಯೆಂಟ್ ಏರ್ ಕ್ವಾಲಿಟಿ ಮಾನಿಟರಿಂಗ್ ವ್ಯಾನ್ಸ್

ಮಂಡಳಿಯು ಎರಡು ಮೊಬೈಲ್ ಆಂಬಿಯೆಂಟ್ ಏರ್ ಕ್ವಾಲಿಟಿ ಮಾನಿಟರಿಂಗ್ ವ್ಯಾನ್‌ಗಳನ್ನು ಖರೀದಿಸಿದೆ – ಒಂದು ಉತ್ತರ ಕರ್ನಾಟಕಕ್ಕೆ ಹಾಗೂ ಇನ್ನೊಂದು ದಕ್ಷಿಣ ಕರ್ನಾಟಕಕ್ಕೆ. ಈ ಮೊಬೈಲ್ ವಾಹನಗಳಲ್ಲಿ ಸಲ್ಫರ್ ಡಯಾಕ್ಸೈಡ್ (SO_2), ನೈಟ್ರೋಜನ್ ಡಯಾಕ್ಸೈಡ್ (NO_2), ಅಮೋನಿಯಾ (NH_3), ಬೆನ್ಜೀನ್, ಕಾರ್ಬನ್ ಮೋನಾಕ್ಸೈಡ್ (CO), ಓಜೋನ್ (O_3) , ಪಾರ್ಟಿಕುಲೇಟ್ ಮ್ಯಾಟರ್(2.5 ಮೈಕ್ರಾನ್ ಗಿಂತ ಕಡಿಮೆ ಗಾತ್ರ) $PM_{2.5}$ ಹಾಗೂ ಪಾರ್ಟಿಕುಲೇಟ್ ಮ್ಯಾಟರ್ (10 ಮೈಕ್ರಾನ್ ಗಿಂತ ಕಡಿಮೆ ಗಾತ್ರ) ಅನಲೈಜರ್‌ಗಳೊಂದಿಗೆ ಗಾಳಿಯ ವೇಗ, ಗಾಳಿಯ ದಿಕ್ಕು, ಹೊರಗಿನ ತಾಪಮಾನ, ಒತ್ತಡ ಮತ್ತು ತೇವಾಂಶಗಳನ್ನು ಮಾಪನ ಮಾಡುವ ಹವಾಮಾನ ಮಾಪನ ಸಾಧನಗಳನ್ನು ಒಳಗೊಂಡಿದೆ. ಏಪ್ರಿಲ್ 2018 ರಲ್ಲಿ ಮೊಬೈಲ್ ವ್ಯಾನ್‌ಗಳು ಮಂಡಳಿಗೆ ತಲುಪುವುದು.





5ಎ.8: ರಾಷ್ಟ್ರೀಯ ಪರಿವೇಷ್ಟಕ ಶಬ್ದ ಮಾಪನ ಕಾರ್ಯಕ್ರಮ (NANMP)





ರಾಷ್ಟ್ರೀಯ ಪರಿಸರ ನೀತಿ (NEP-2006) ರ ಸೆಕ್ಷನ್ 5.2.8 (IV) ರ ಅನ್ವಯ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಶಬ್ದ ಮಾನಿಟರಿಂಗ್ ನೆಟ್‌ವರ್ಕ್ ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿದೆ. ನಿಗದಿತ ನಗರ ಪ್ರದೇಶಗಳಲ್ಲಿ ಮೇಲ್ವಿಚಾರಣೆಗಾಗಿ ಪರಿವೇಷ್ಟಕ ಶಬ್ದ ಮಾಪನವನ್ನು ನಿಯತ ನಿಯತಾಂಕವಾಗಿ ಸೇರಿಸಲು ನಿರ್ಧರಿಸಿದೆ.

ಮಾನ್ಯ ಪರಿಸರ ಮತ್ತು ಅರಣ್ಯ ಸಚಿವರು, ಭಾರತ ಸರ್ಕಾರ ಇವರು ಪರಿವೇಷ್ಟಕ ಶಬ್ದದ ವ್ಯವಸ್ಥಿತ ಮೇಲ್ವಿಚಾರಣೆಗಾಗಿ, ಭಾರತೀಯ ನಗರಗಳು ಕಡಿಮೆ ಶಬ್ಧವನ್ನುಂಟು ಮಾಡುವ ನಿಟ್ಟಿನಲ್ಲಿ 25 ನಗರಗಳನ್ನೊಳಗೊಂಡ ರಾಷ್ಟ್ರೀಯ ಶಬ್ದ ಮಾನಿಟರಿಂಗ್ ನೆಟವರ್ಕ್ ಪ್ರಕಟಿಸಿರುತ್ತಾರೆ. ಇದರಲ್ಲಿ ಕರ್ನಾಟಕ ರಾಜ್ಯವು ಒಂದಾಗಿದ್ದು, ಬೆಂಗಳೂರಿನಲ್ಲಿ 10 ನಿರಂತರ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವನೆಯ ಅನ್ವಯ ಮಂಡಳಿಯು 10 ನಿರಂತರ ಪರಿವೇಷ್ಟಕ ಶಬ್ದ ಮಾಪನ ಕೇಂದ್ರಗಳನ್ನು 50:50 ವೆಚ್ಚ ಹಂಚಿಕೆ ಆಧಾರದ ಮೇಲೆ ಸ್ಥಾಪಿಸಿದೆ.

ಕೋಷ್ಟಕ 5ಎ.16: ಬೆಂಗಳೂರಿನಲ್ಲಿ ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿರುವ ಶಬ್ದ ಮಾನಿಟರಿಂಗ್ ಕೇಂದ್ರಗಳು

ಕ್ರಮ ಸಂಖ್ಯೆ	ಕೇಂದ್ರದ ಹೆಸರು	ಪ್ರದೇಶದ ವಿವರ
1.	ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ (ಗ್ರಾಫೈಟ್ ಇಂಡಿಯಾ), ಬೆಂಗಳೂರು	ಕೈಗಾರಿಕಾ ಪ್ರದೇಶ
2.	ಏಸ್ ಮ್ಯಾನುಫ್ಯಾಕ್ಚರಿಂಗ್ ಸಿಸ್ಟಂ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು	ಕೈಗಾರಿಕಾ ಪ್ರದೇಶ
3.	ಕರಾಮಾನಿಮಂ, ಪರಿಸರ ಭವನ, #49, ಚರ್ಚ್ ಸ್ಟ್ರೀಟ್, ಬೆಂಗಳೂರು	ವಾಣಿಜ್ಯ ಪ್ರದೇಶ
4.	ಬಿಡ್ಬ್ಲ್ಯೂಎಸ್ಎಸ್‌ಬಿ ಸೈಟ್ ನಂ.137, ಕಾಡುಬಿದನಹಳ್ಳಿ, ಮಾರತ್‌ಹಳ್ಳಿ, ಬೆಂಗಳೂರು	ವಾಣಿಜ್ಯ ಪ್ರದೇಶ
5.	ಯಶವಂತಪುರ ಪೊಲೀಸ್ ಠಾಣೆ, ಬೆಂಗಳೂರು	ವಾಣಿಜ್ಯ ಪ್ರದೇಶ
6.	ಕರಾಮಾನಿಮಂ ಕಛೇರಿ ಕಟ್ಟಡ, ನಿಸರ್ಗ ಭವನ, ಸಾಣೇಗೊರವನಹಳ್ಳಿ, ಬೆಂಗಳೂರು	ವಸತಿ ಪ್ರದೇಶ
7.	29 ನೇ ಮೇನ್, ಮಡಿವಾಳ ಕೆರೆ, ಬಿಟಿಎಂ 2ನೇ ಸ್ಟೇಜ್, ಬೆಂಗಳೂರು ಇಲ್ಲಿನ ಸಿಎಎಕ್ಯೂಎಂ ಕೇಂದ್ರದ ಆವರಣ	ವಸತಿ ಪ್ರದೇಶ
8.	ಟೆರ್ರಿ ಕಛೇರಿ, ದೊಮ್ಮಲೂರು, ಬೆಂಗಳೂರು	ವಸತಿ ಪ್ರದೇಶ
9.	ಇಂದಿರಾ ಗಾಂಧಿ ಇನ್ಸಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್ (ನಿಮ್ಹಾನ್ಸ್)	ಸೂಕ್ಷ್ಮ ಪ್ರದೇಶ
10.	ಆರ್.ವಿ.ಸಿ.ಇ, ಮೈಸೂರು ರಸ್ತೆ, ಬೆಂಗಳೂರು	ಸೂಕ್ಷ್ಮ ಪ್ರದೇಶ

ಕೋಷ್ಟಕ 5ಎ.17: 2017–18ರಲ್ಲಿ ಬೆಂಗಳೂರು ನಗರದಲ್ಲಿನ ಹತ್ತು ಶಬ್ದ ಮಟ್ಟದ ಮಾಪನ ಕೇಂದ್ರಗಳ ಶಬ್ದಮಟ್ಟದ ದತ್ತಾಂಶ

ಕ್ರಮ ಸಂಖ್ಯೆ	ಕೇಂದ್ರದ ಹೆಸರು	ಮಿತಿ dB(A) Leq	ದಿನದ ಸಮಯ			ಶೇ. ಆಧಿಕ್ಯ Leq	ಮಿತಿ dB(A) Leq	ರಾತ್ರಿ ಸಮಯ			ಶೇ. ಆಧಿಕ್ಯ Leq
			Leq	L min	L max			Leq	L min	L max	
1	ಪೀಣ್ಯ ಕೈಗಾರಿಕಾ ಪ್ರದೇಶ	75	59.5	44.2	89.7	ರಾಷ್ಟ್ರೀಯ ಮಿತಿಯೊಳಗೆ ಇದೆ	70	56.0	49.8	87.1	ರಾಷ್ಟ್ರೀಯ ಮಿತಿಯೊಳಗೆ ಇದೆ
2	ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ	75	65.4	47.7	91.7	ರಾಷ್ಟ್ರೀಯ ಮಿತಿಯೊಳಗೆ ಇದೆ	70	62.7	50.3	89.0	ರಾಷ್ಟ್ರೀಯ ಮಿತಿಯೊಳಗೆ ಇದೆ
3	ಪರಿಸರ ಭವನ, ಚರ್ಚ್ ರಸ್ತೆ	65	64.9	45.2	86.7	ರಾಷ್ಟ್ರೀಯ ಮಿತಿಯೊಳಗೆ ಇದೆ	55	58.5	48.5	80.5	6.4%
4	ಯಶವಂತಪುರ ಪೊಲೀಸ್ ಸ್ಟೇಷನ್	65	71.3	49.0	86.4	9.7%	55	62.6	52.6	79.1	13.8%
5	ಬಿ.ಡ್ಬ್ಲ್ಯೂ.ಎಸ್.ಎಸ್.ಬಿ, ಮಾರತ್‌ಹಳ್ಳಿ	65	51.2	37.6	90.5	ರಾಷ್ಟ್ರೀಯ ಮಿತಿಯೊಳಗೆ ಇದೆ	55	48.9	34.0	82.3	ರಾಷ್ಟ್ರೀಯ ಮಿತಿಯೊಳಗೆ ಇದೆ
6	ನಿಸರ್ಗ ಭವನ,	55	51.1	41.2	82.3	ರಾಷ್ಟ್ರೀಯ ಮಿತಿಯೊಳಗೆ ಇದೆ	45	47.4	41.9	75.6	5.3%
7	ಟೆರಿ ಕಚೇರಿ, ದೊಮ್ಮಲೂರು	55	61.6	45.2	93.6	12.0%	45	56.2	41.0	87.4	24.8%
8	ಬಿ ಟಿ ಎಂ ಬಡಾವಣೆ	55	62.0	47.3	80.6	12.7%	45	63.3	54.8	80.5	40.6%
9	ನಿಮ್ಹಾನ್ಸ್	50	57.9	44.6	98.5	15.8%	40	57.5	36.0	84.6	43.8%
10	ಆರ್‌ವಿಸಿಇ, ಮೈಸೂರು ರಸ್ತೆ	50	56.2	45.1	88.2	12.4%	40	52.8	46.5	79.6	32.0%

ಕ್ರಮ ಸಂಖ್ಯೆ	ಪ್ರದೇಶ	ದಿನ ಮಿತಿ dB(A) Leq	ದಿನದಲ್ಲಿ ಶಬ್ದ ಮಟ್ಟದ ಸ್ಥಿತಿ	ರಾತ್ರಿ ಮಿತಿ dB(A) Leq	ರಾತ್ರಿಯಲ್ಲಿ ಶಬ್ದ ಮಟ್ಟದ ಸ್ಥಿತಿ
1.	ಕೈಗಾರಿಕಾ ಪ್ರದೇಶ	75	ಮಿತಿಯೊಳಗಿದೆ	70	ಮಿತಿಯೊಳಗಿದೆ
2.	ವಾಣಿಜ್ಯ ಪ್ರದೇಶ	65	9.7% ಮೀರಿದೆ	55	6.4% ರಿಂದ 13.8% ಮೀರಿದೆ
3.	ವಸತಿ ಪ್ರದೇಶ	55	12% ರಿಂದ 12.7% ಮೀರಿದೆ	45	5.3% ರಿಂದ 40.6% ಮೀರಿದೆ
4.	ಸೂಕ್ಷ್ಮ ಪ್ರದೇಶ	50	12.4% ರಿಂದ 15.8% ಮೀರಿದೆ	40	32.0% ರಿಂದ 43.8% ಮೀರಿದೆ

ಟಿಪ್ಪಣಿ:

1. ದಿನದ ಸಮಯ ಎಂದರೆ ಬೆಳಿಗ್ಗೆ 6.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ
2. ರಾತ್ರಿ ಸಮಯ ಎಂದರೆ ರಾತ್ರಿ 10.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆವರೆಗೆ
3. ನಿಶ್ಯಬ್ದ ವಲಯ ಎಂದರೆ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ನ್ಯಾಯಾಲಯಗಳು, ಧಾರ್ಮಿಕ ಸ್ಥಳಗಳು ಅಥವಾ ಹಾಗೆಂದು ಅಧಿಕಾರಯುತ ಪ್ರಾಧಿಕಾರದಿಂದ ಘೋಷಿಸಲಾದ ಸ್ಥಳ ಇವುಗಳ ಸುತ್ತಣ ನೂರು ಮೀಟರ್ ದೂರದ ವ್ಯಾಪ್ತಿಯಲ್ಲಿ ಬರುವ ಪ್ರದೇಶ.

4. dB (A) Leq ಎನ್ನುವುದು ಮಾನವ ಶ್ರವಣಕ್ಕೆ ಸಂಬಂಧಿಸಿದ ಶಬ್ದದ ಡೆಸಿಬಲ್ ಗಳ 'ಎ'ಶ್ರೇಣಿಯಲ್ಲಿ ಕಾಲ ಸಮತೋಲನದ ಸರಾಸರಿಯನ್ನು ಸೂಚಿಸುತ್ತದೆ.
5. 'ಎ' ಡೆಸಿಬಲ್ ಎನ್ನುವುದು ಶಬ್ದದ ಅಳತೆಯ ಒಂದು ಮಾನ.
6. dB (A) Leq ನಲ್ಲಿ 'ಎ' ಎನ್ನುವುದು ಶಬ್ದದ ಅಳತೆಗಳಲ್ಲಿ ಕಂಪನ ಸಮತೋಲನವನ್ನು ಸೂಚಿಸುತ್ತದೆ ಮತ್ತು ಮಾನವ ಕಿವಿಯ ಸಂವೇದನಾ ಲಕ್ಷಣಗಳಿಗೆ ಸಂವಾದಿಯಾಗಿರುತ್ತದೆ.
7. 'Leq' ಎಂದರೆ ನಿರ್ದಿಷ್ಟ ಕಾಲಾವಧಿಯಲ್ಲಿನ ಶಬ್ದದ ಮಟ್ಟದ (ಮಾಧ್ಯ)ಸರಾಸರಿ.

ಅಧ್ಯಾಯ ೫ ಬಿ

ಪ್ರಸಕ್ತ ಪರಿಸರದ ಸ್ಥಿತಿ ಮತ್ತು ಪ್ರತಿಯಾಗಿ ಕೈಗೊಳ್ಳಬೇಕಾದ ಕ್ರಮಗಳು

ಅಧ್ಯಾಯ – 5 ಬಿ
ಪ್ರಸಕ್ತ ಪರಿಸರದ ಸ್ಥಿತಿ ಮತ್ತು ಪ್ರತಿಯಾಗಿ ಕೈಗೊಳ್ಳಬೇಕಾದ ಕ್ರಮಗಳು

5ಬಿ.1 ಸ್ಥಳೀಯ ಸಂಸ್ಥೆಗಳು, ಅಪಾರ್ಟ್‌ಮೆಂಟುಗಳು ಮತ್ತು ವಾಣಿಜ್ಯ ಸಮುಚ್ಚಯಗಳಲ್ಲಿ ರೊಚ್ಚು ಸಂಸ್ಕರಣೆ ಮತ್ತು ವಿಲೇವಾರಿಯ ಸ್ಥಿತಿ

5ಬಿ.1.1 ಸ್ಥಳೀಯ ಸಂಸ್ಥೆಗಳು:

ರಾಜ್ಯದಲ್ಲಿ ಹೊಸದಾಗಿ ಸೃಜಿಸಿರುವ 57 ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಂತೆ 276 ಸ್ಥಳೀಯ ಸಂಸ್ಥೆಗಳಲ್ಲಿ, ಗ್ರಾಮಸಾರ ಮತ್ತು ಗೃಹ ರೊಚ್ಚು ಸಂಸ್ಕರಿಸಲು 43 ಸ್ಥಳೀಯ ಸಂಸ್ಥೆಗಳಲ್ಲಿ ರೊಚ್ಚು ಸಂಸ್ಕರಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಮಂಡಳಿಯು ರೊಚ್ಚು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು 44 ಸ್ಥಳೀಯ ಸಂಸ್ಥೆಗಳಿಗೆ ಸ್ಥಾಪನಾ ಸಮ್ಮತಿಯನ್ನು ನೀಡಿದೆ.

5ಬಿ.1.2 ಬೆಂಗಳೂರು ನಗರದಲ್ಲಿ ತ್ಯಾಜ್ಯಜಲದ ವ್ಯವಸ್ಥಾಪನೆ.

ಪ್ರಸ್ತುತ ಬಿಬಿಎಂಪಿಯಲ್ಲಿ 198 ವಾರ್ಡುಗಳಿವೆ. 2007 ರಲ್ಲಿ 110 ಗ್ರಾಮಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಲಾಯಿತು. ಈ ಗ್ರಾಮಗಳಲ್ಲಿ ಜಲ ಮತ್ತು ಒಳಚರಂಡಿ ಮೂಲಸೌಲಭ್ಯಗಳ ಕೊರತೆ ಇದೆ. ಇದರಿಂದಾಗಿ ತ್ಯಾಜ್ಯ ಜಲ ನಾಲೆಗಳಿಗೆ ಹರಿದು ಕೆರೆ/ಇತರೆ ನೀರಿನ ಆಕರಗಳನ್ನು ಸೇರುತ್ತಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾವೇರಿ ನದಿಯಿಂದ ಬೆಂಗಳೂರಿಗೆ 1350 ದಶಲಕ್ಷ ಲೀಟರು ನೀರನ್ನು ಸರಬರಾಜು ಮಾಡುತ್ತಿದೆ. ಕೊಳವೆ ಬಾವಿಗಳಿಂದ ಮತ್ತು ಇತರ ಆಕರಗಳಿಂದ ಸುಮಾರು 600 ದಶಲಕ್ಷ ಲೀಟರು ನೀರನ್ನು ಸರಬರಾಜು ಮಾಡುತ್ತಿದೆ. ಸುಮಾರು 1400 ದಶಲಕ್ಷ ಲೀಟರು ತ್ಯಾಜ್ಯ ಜಲ ಉತ್ಪಾದಿತವಾಗುತ್ತಿದೆ. ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಹದಿನಾಲ್ಕು ಗೃಹ ರೊಚ್ಚು ನೀರು ಸಂಸ್ಕರಣಾ ಘಟಕಗಳಿವೆ. ಇವುಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದೆ. ಈ ಘಟಕಗಳ ಒಟ್ಟು ಸಂಸ್ಕರಣಾ ಸಾಮರ್ಥ್ಯ 721 ದಶಲಕ್ಷ ಲೀಟರು.

ಸದ್ಯ, ಈಗಿರುವ ಸಂಸ್ಕರಣಾ ಘಟಕಗಳಲ್ಲಿ 500 ದಶಲಕ್ಷ ಲೀಟರು ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುತ್ತಿದೆ. ಉಳಿದ 900 ದಶಲಕ್ಷ ಲೀಟರು ತ್ಯಾಜ್ಯಜಲ ಯಾವುದೇ ಸಂಸ್ಕರಣೆ ಇಲ್ಲದೆ ನೀರಿನ ಆಕರಗಳನ್ನು ಸೇರಿಕೊಳ್ಳುತ್ತಿದೆ.

5ಬಿ.2 ಮೂಲಭೂತ ಸೌಕರ್ಯ ಯೋಜನೆಗಳು

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯು 7.7.2004 ರಂದು ಅಧಿಸೂಚನೆ (1994ರ ಪರಿಸರ ಪರಿಣಾಮ ನಿರ್ಧರಣೆ ಅಧಿಸೂಚನೆಯ ತಿದ್ದುಪಡಿ) ಹೊರಡಿಸಿದಂದಿನಿಂದ ಹಾಗೂ ಈ ಮುಂದೆ ಕಾಣಿಸಿರುವಂತೆ ತದನಂತರದ ಪರಿಸರ ಪರಿಣಾಮ ನಿರ್ಧರಣೆ ಅಧಿಸೂಚನೆ, 2006 ರ ಷೆಡ್ಯೂಲ್ 1 ರ ಕ್ರಮ ಸಂಖ್ಯೆ : 8(ಎ) & 8(ಬಿ) ರನ್ವಯ ಮಂಡಳಿಯು ನಿರ್ಮಾಣ ಯೋಜನೆಗಳು/ಟೌನ್‌ಶಿಪ್ಸ್/ಪ್ರದೇಶ ಅಭಿವೃದ್ಧಿ ಯೋಜನೆಗಳು/ವಸತಿ ಅಪಾರ್ಟ್‌ಮೆಂಟ್/ ವಾಣಿಜ್ಯ ಸಮುಚ್ಚಯಗಳು/ ತಂತ್ರಾಂಶ ಪಾರ್ಕ್‌ಗಳನ್ನು ಸಮ್ಮತಿ ವ್ಯವಸ್ಥೆಯೊಳಗೆ ಸೇರ್ಪಡಿಸಿತು.

8 (ಎ)	ಕಟ್ಟಡ ಮತ್ತು ನಿರ್ಮಾಣ ಯೋಜನೆಗಳು	≥ 20,000 ಚ.ಮೀ.ಗಳು ≤ 1,50,000 ಹೆಕ್ಟೇರು ಅಥವಾ ನಿರ್ಮಿತ ಸ್ಥಳದ ವಿಸ್ತಾರ.
8 (ಬಿ)	ಪಟ್ಟಣ ಅಭಿವೃದ್ಧಿ ಮತ್ತು ಪ್ರದೇಶಾಭಿವೃದ್ಧಿ ಯೋಜನೆಗಳು	ಒಟ್ಟು ವಿಸ್ತೀರ್ಣ ≥ 50 ಹೆಕ್ಟೇರು ಅಥವಾ ನಿರ್ಮಿತ ಸ್ಥಳದ ವಿಸ್ತಾರ. ≥ 1,50,000 ಚ.ಮೀ.ಗಳು

ಕರ್ನಾಟಕ ಸರ್ಕಾರವು ಕೆಳಗಿನ ಯೋಜನೆಗಳನ್ನು ಒಳಗೊಳ್ಳಲು ದಿನಾಂಕ:19.01.2016 ರಂದು ಹೊಸ ಅಧಿಸೂಚನೆಯನ್ನು ಹೊರಡಿಸಿದ್ದು, ಮಂಡಳಿಯು ಅದನ್ನು ಅನುಸರಿಸುತ್ತಿದೆ.

1. 20 ಮತ್ತು ಹೆಚ್ಚಿನ ಯುನಿಟ್‌ಗಳನ್ನು ಹೊಂದಿರುವ ಗುಂಪು ವಸತಿ ಯೋಜನೆಗಳು / ಅಪಾರ್ಟ್‌ಮೆಂಟುಗಳು ಅಥವಾ ಬೇಸ್‌ಮೆಂಟ್ ಸೇರಿದಂತೆ 2000 ಚದರ ಮೀಟರ್‌ನ ಒಟ್ಟು ನಿರ್ಮಿತ ಪ್ರದೇಶವನ್ನು ಹೊಂದಿರುವ ಯೋಜನೆಗಳು ರೊಚ್ಚು ಸಂಸ್ಕರಣಾ ಘಟಕ (ಎಸ್.ಟಿ.ಪಿ) ಸ್ಥಾಪಿಸಬೇಕು.

2. 2000 ಹಾಗೂ ಹೆಚ್ಚಿನ ಚದರ ಮೀಟರ್‌ನ ಒಟ್ಟು ನಿರ್ಮಿತ ಪ್ರದೇಶವನ್ನು ಹೊಂದಿರುವ ವಾಣಿಜ್ಯ ನಿರ್ಮಾಣ ಯೋಜನೆಗಳು (ವಾಣಿಜ್ಯ ಸಮುಚ್ಚಯ, ಕಚೇರಿ, ಐ.ಟಿ ಸಂಬಂಧಿಸಿದ ಚಟುವಟಿಕೆ ಮುಂತಾದವುಗಳು) ರೊಚ್ಚು ಸಂಸ್ಕರಣಾ ಘಟಕ (ಎಸ್.ಟಿ.ಪಿ) ಸ್ಥಾಪಿಸಬೇಕು.

3. 5000 ಹಾಗೂ ಹೆಚ್ಚಿನ ಚದರ ಮೀಟರ್‌ನ ಒಟ್ಟು ನಿರ್ಮಿತ ಪ್ರದೇಶವನ್ನು ಹೊಂದಿರುವ, ವಿದ್ಯಾರ್ಥಿ ನಿಲಯ ಸೌಲಭ್ಯವಿರುವ ಅಥವಾ ಇಲ್ಲದಿರುವ ಶಿಕ್ಷಣ ಸಂಸ್ಥೆಗಳು ರೊಚ್ಚು ಸಂಸ್ಕರಣಾ ಘಟಕ (ಎಸ್.ಟಿ.ಪಿ) ಸ್ಥಾಪಿಸಬೇಕು.

4. 10 ಎಕರೆ ಹಾಗೂ ಇನ್ನೂ ಹೆಚ್ಚಿನ ಪ್ರದೇಶ ಹೊಂದಿರುವ ಟೌನ್‌ಶಿಪ್ ಹಾಗೂ ಪ್ರದೇಶ ಅಭಿವೃದ್ಧಿ ಯೋಜನೆಗಳು ರೊಚ್ಚು ಸಂಸ್ಕರಣಾ ಘಟಕ (ಎಸ್.ಟಿ.ಪಿ) ಸ್ಥಾಪಿಸಬೇಕು.

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯವು ಮೂಲಭೂತ ಸೌಕರ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ದಿನಾಂಕ: 9.12.2016 ರಂದು ಪರಿಷ್ಕೃತ ಪರಿಸರ ಪರಿಣಾಮ ನಿರ್ಧರಣೆ ಅಧಿಸೂಚನೆಯನ್ನು ಮುಂದಿನಂತೆ ಹೊರಡಿಸಿದೆ: "1,50,000 ಚದರ ಮೀಟರವರೆಗಿನ ವಸತಿ ಕಟ್ಟಡಗಳಿಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ಸ್ಥಾಪನಾ ಸಮ್ಮತಿ ಪತ್ರ ಹಾಗೂ ಚಾಲನಾ ಸಮ್ಮತಿ ಪತ್ರ ಪಡೆಯುವ ಅಗತ್ಯವಿರುವುದಿಲ್ಲ." ದಿನಾಂಕ : 28.12.2016 ರಂದು ನಡೆದ ರಾಜ್ಯ ಮಟ್ಟದ ಸಮ್ಮತಿ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು. ರಾಜ್ಯ ಸರ್ಕಾರವು ಹೊಸ ಅಧಸೂಚನೆಯಂತೆ ಬೈ–ಲಾ ಅಥವಾ ನಿಯಮಗಳನ್ನು ರೂಪಿಸುವವರೆಗೆ, ಮೂಲಭೂತ ಸೌಕರ್ಯ ಯೋಜನೆಗಳಿಗೆ ಪ್ರಸ್ತುತ ಜಾರಿಯಲ್ಲಿರುವಂತೆ ಸ್ಥಾಪನಾ ಸಮ್ಮತಿ ಪತ್ರ ಹಾಗೂ ಚಾಲನಾ ಸಮ್ಮತಿ ಪತ್ರವನ್ನು ನೀಡುವುದನ್ನು ಮುಂದುವರೆಸಲು ಸಮಿತಿಯು ಅಭಿಪ್ರಾಯಿಸಿತು.

ತರುವಾಯ, ಈ ಸಂಬಂಧ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ಪತ್ರ B-29012/ESS/CPA/2016 -17/2570 ದಿನಾಂಕ: 02.02.2017 ರಲ್ಲಿ ಮುಂದಿನ ನಿರ್ದೇಶನಗಳನ್ನು ನೀಡಿದೆ.

- ಇಐಎ ಅಧಿಸೂಚನೆ 2006 ರ ಶೆಡ್ಯೂಲ್ ಆಫ್ ಪ್ರಾಜೆಕ್ಟ್‌ನ ಕ್ರಮ ಸಂಖ್ಯೆ: 8(ಎ) & 8(ಬಿ) ನಲ್ಲಿ ಉಲ್ಲೇಖಿಸಲಾದ ಪ್ರದೇಶವನ್ನು ಹೊಂದಿರುವ ಕಟ್ಟಡ / ನಿರ್ಮಾಣ ಯೋಜನೆಗಳು / ಪ್ರದೇಶ ಅಭಿವೃದ್ಧಿ

ಯೋಜನೆಗಳು ಮತ್ತು ಟೌನ್‌ಶಿಪ್ ಯೋಜನೆಗಳನ್ನು ಸ್ಥಾಪಿಸಲು ಸಮ್ಮತಿಯನ್ನು ಪಡೆಯುವ ಅಗತ್ಯವಿಲ್ಲ. ಇಂತಹ ಯೋಜನೆಗಳಿಗೆ ಪರಿಸರ ವಿಮೋಚನಾ ಪತ್ರ ನೀಡುವುದಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದೃಷ್ಟಿಕೋನಗಳನ್ನು ಪ್ರತಿನಿಧಿಸಲು ರಾಜ್ಯ ಮಟ್ಟದ ಇಐಎ ಪ್ರಾಧಿಕಾರದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಶಾಶ್ವತ ಸದಸ್ಯರಾಗಿರಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

- ಇದಲ್ಲದೆ, ರಾಜ್ಯ ಮಟ್ಟದ ಇಐಎ ಪ್ರಾಧಿಕಾರ ಅಥವಾ ಎಂಒಇಎಫ್&ಸಿಸಿ ಯಿಂದ ಪರಿಸರ ವಿಮೋಚನಾ ಪತ್ರ ಅಗತ್ಯವಿರುವ ಎಲ್ಲಾ ಯೋಜನೆಗಳು ಸ್ಥಾಪನಾ ಸಮ್ಮತಿ ಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಬಹುದು. ಪರಿಸರ ವಿಮೋಚನಾ ಪತ್ರ ಪಡೆದ ಹಾಗೂ ಮಾಲಿನ್ಯ ನಿಯಂತ್ರಣ ಸಾಧನಗಳ ಅಳವಡಿಸಿರುವ ಷರತ್ತಿಗೆ ಒಳಪಟ್ಟ ಇಂತಹ ಯೋಜನೆಗಳಿಗೆ ನೇರವಾಗಿ ಚಾಲನಾ ಸಮ್ಮತಿ ಪತ್ರ ನೀಡಬಹುದು.

ಎಂಒಇಎಫ್&ಸಿಸಿ ಯ ಇಐಎ ಅಧಿಸೂಚನೆ ದಿನಾಂಕ: 09.12.2016 ರ ಅನುಷ್ಠಾನದ ಕುರಿತು ಸ್ಪಷ್ಟೀಕರಣ ನೀಡುವಂತೆ ಮಂಡಳಿಯು ದಿನಾಂಕ: 07.02.2017 ರಂದು ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದಿದೆ. ಎಂಒಇಎಫ್&ಸಿಸಿ ಯ ಇಐಎ ಅಧಿಸೂಚನೆಯಂತೆ 1,50,000 ಚದರ ಮೀಟರವರೆಗಿನ ವಸತಿ ಕಟ್ಟಡಗಳಿಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರ ಹಾಗೂ ಚಾಲನಾ ಸಮ್ಮತಿ ಪತ್ರಗಳ ಅವಶ್ಯಕತೆಯಿರುವುದಿಲ್ಲವೆಂದು ಕರ್ನಾಟಕ ಸರ್ಕಾರವು ಸ್ಪಷ್ಟೀಕರಣ ನೀಡಿದೆ. ಅವಶ್ಯಕತೆಯಿದ್ದಲ್ಲಿ ವಿಷಯವನ್ನು ಮಂಡಳಿ ಸಭೆಯ ಮುಂದೆ ಚರ್ಚೆಗೆ ಮಂಡಿಸಲು ಹಾಗೂ ಈ ಕುರಿತು ಕೇಂದ್ರ ಸರ್ಕಾರದಿಂದ ಸ್ಪಷ್ಟೀಕರಣ ಪಡೆಯಬಹುದೆಂದೂ ಸಹ ಈ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಆದಾಗ್ಯೂ, ದಿನಾಂಕ : 06.05.2017 ರಂದು ನಡೆದ 212 ನೇ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಗಿದ್ದು, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಪಷ್ಟೀಕರಣ ಪಡೆಯಲು ನಿರ್ಣಯಿಸಲಾಯಿತು. ನಿರ್ಣಯದಂತೆ ದಿನಾಂಕ : 28.07.2017 ರಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆಯಲಾಗಿದ್ದು, ಪ್ರತಿಯಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಎಂಒಇಎಫ್&ಸಿಸಿ ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿ ದಿನಾಂಕ: 24.08.2017 ರಂದು ಪತ್ರ ಬರೆದಿರುತ್ತದೆ. ಇಲ್ಲಿಯವರೆಗೂ ಸ್ಪಷ್ಟೀಕರಣ ಮಂಡಳಿಗೆ ಸ್ವೀಕೃತವಾಗಿರುವುದಿಲ್ಲ.

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಲಯ, ಪ್ರಧಾನ ಪೀಠ, ಹೊಸ ದೆಹಲಿ ಯು ದಿನಾಂಕ : 04.05.2016 ರಂದು ಮೂಲ ಅರ್ಜಿ ಸಂಖ್ಯೆ : 222/2014 ರ ದಿ ಫಾರ್ವರ್ಡ್ ಫೌಂಡೇಷನ್ & ಇತರರು V/s ಕರ್ನಾಟಕ ರಾಜ್ಯ & 11 ಇತರೆ ಪ್ರತಿವಾದಿಗಳ ಮೊಕದ್ದಮೆಯಲ್ಲಿ ನೀಡಿದ ತೀರ್ಪಿನಲ್ಲಿ ನೀರಿನ ಮೂಲ ಹಾಗೂ ಜಲಾನಯನ ಪ್ರದೇಶ (wetlands)ಗಳಿಂದ ನಿರ್ವಹಿಸಬೇಕಾದ ಬಫರ್ ಕುರಿತು ಕೆಳಕಂಡಂತೆ ನಿರ್ದೇಶನ ನೀಡಿದೆ.

1) ಕೆರೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಇರುವ ಎಲ್ಲಾ ಜಲ ಮೂಲಗಳಲ್ಲಿ ಅಂದರೆ ಕೆರೆ/ಜಲಾನಯನಗಳಿಗೆ ಕುರಿತಂತೆ, ಜಲ ಮೂಲಗಳ ಅಂಚಿನಿಂದ 75 ಮೀಟರ್ ಅಂತರವನ್ನು ಹಸಿರು ಪಟ್ಟಿ ಹಾಗೂ ಬಫರ್ ಜೋನ್ ಎಂದು ನಿರ್ವಹಿಸುವುದು.
2) ಪ್ರಾಥಮಿಕ ರಾಜಕಾಲುವೆಗಳ ತುದಿಯಿಂದ 50 ಮೀಟರ್.
3) ದ್ವಿತೀಯ ರಾಜಕಾಲುವೆಗಳ ತುದಿಯಿಂದ 35 ಮೀಟರ್.
4) ತೃತೀಯ ರಾಜಕಾಲುವೆಗಳ ತುದಿಯಿಂದ 25 ಮೀಟರ್.

ಎಲ್ಲಾ ಉದ್ದೇಶಗಳಿಗಾಗಿ ಈ ಬಫರ್/ಹಸಿರು ವಲಯವನ್ನು ಯಾವುದೇ ನಿರ್ಮಾಣ ವಲಯವಾಗಿ ಪರಿಗಣಿಸಲಾಗುವುದಿಲ್ಲ. ಅಂತೆಯೆ ಮಂಡಳಿಯು ಯೋಜನೆಗಳಿಗೆ ಸಮ್ಮತಿಯನ್ನು ನೀಡುವಾಗ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸುತ್ತಿದೆ.

5ಬಿ.3 ಸಮಗ್ರ ಪರಿಸರ ಮಾಲಿನ್ಯ ಸೂಚ್ಯಂಕ

5ಬಿ.3.1 ವಿಮರ್ಶಾತ್ಮಕವಾಗಿ ಮಲಿನಗೊಂಡ ಪ್ರದೇಶಗಳ ಸ್ಥಿತಿಗತಿ (Critically Polluted areas):

ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕ 70 ಮತ್ತು ಅದಕ್ಕಿಂತ ಹೆಚ್ಚಿರುವ ಕೈಗಾರಿಕಾ ಸಮೂಹವನ್ನು ತೀವ್ರವಾಗಿ ಮಲಿನಗೊಂಡ ಸಮೂಹ/ಪ್ರದೇಶವೆಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಗಣಿಸುತ್ತದೆ. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ಸಚಿವಾಲಯವು ದಿನಾಂಕ 13.01.2010 ರ ಜೆ–11010/ 5/2010/ಐಎ.11 (ಐ) ಸಂಖ್ಯೆಯ ತನ್ನ ಕಚೇರಿ ಜ್ಞಾಪನ ಪತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೈಕಂಪಾಡಿ ಕೈಗಾರಿಕಾ ಸಮೂಹ ಮತ್ತು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಕೈಗಾರಿಕಾ ಸಮೂಹಗಳನ್ನು, ಕ್ರಮವಾಗಿ 73.68 ಹಾಗೂ 72.33ರಷ್ಟು ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕಗಳಿಸಿದ್ದಕ್ಕಾಗಿ ತೀವ್ರವಾಗಿ ಮಲಿನಗೊಂಡ ಪ್ರದೇಶಗಳೆಂದು ಘೋಷಿಸಿದೆ.

ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ಸಚಿವಾಲಯವು ದಿನಾಂಕ: 13.01.2010 ರಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಗುರುತಿಸಿರುವ ತೀವ್ರವಾಗಿ ಮಲಿನಗೊಂಡ ಪ್ರದೇಶ/ಕೈಗಾರಿಕಾ ಸಮೂಹಗಳಲ್ಲಿ ಸ್ಥಾಪಿಸಲುದ್ದೇಶಿಸುವ ಹೊಸ ಪರಿಯೋಜನೆಗಳಿಗೆ ಪಾರಿಸಾರಿಕ ಅನುಮೋದನೆ ನೀಡಲು ಪರಿಗಣಿಸುವುದರ ಬಗ್ಗೆ ತಾತ್ಕಾಲಿಕ ನಿಷೇಧವನ್ನು ಹೇರಿತ್ತು. ನಿಷೇಧದ ಅವಧಿಯಲ್ಲಿ ಆಯಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು (ಎಸ್.ಪಿ.ಸಿ.ಬಿಗಳು)/ಮಾಲಿನ್ಯ ನಿಯಂತ್ರಣ ಸಮಿತಿಗಳು (ಪಿ.ಸಿ.ಸಿ. ಗಳು) ಕೈಗಾರಿಕಾ ಸಮೂಹ/ ಪ್ರದೇಶಗಳ ಪರಿಸರದ ಗುಣಮಟ್ಟವನ್ನು ಸುಧಾರಿಸಲು ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸುವುದೆಂದು ಎದುರು ನೋಡಲಾಗಿತ್ತು. ಈ ರೀತಿ ಸಿದ್ದಪಡಿಸಿದ ಕ್ರಿಯಾ ಯೋಜನೆಗಳಿಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಂತಿಮ ರೂಪ ಕೊಡಲಾಗುತ್ತದೆ.

ಈ ಮೇಲಿನ ಕಾರಣಕ್ಕಾಗಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರಿನಲ್ಲಿರುವ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಯ ಜೊತೆಗೆ ನಡೆಸಿದ ಅನೇಕ ಬಾರಿಯ ಸಮಾಲೋಚನೆ ಮತ್ತು ಸಮನ್ವಯ ಕ್ರಮಗಳಿಂದ 2011ರಲ್ಲಿ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ/ ಅರಣ್ಯ ಮತ್ತು ಪರಿಸರ ಸಚಿವಾಲಯಗಳಿಗೆ ಸಲ್ಲಿಸಿತು.

ಅದರಂತೆ ಅರಣ್ಯ ಮತ್ತು ಪರಿಸರ ಸಚಿವಾಲಯವು ಹೇರಿದ್ದ ನಿಷೇಧವನ್ನು ದಿನಾಂಕ 23.05.2011 ರ ತನ್ನ ಪತ್ರದ ಮೂಲಕ ರದ್ದುಗೊಳಿಸಿತು. ಈ ಮುಂದೆ ಸೂಚಿಸಿರುವ ಪ್ರದೇಶಗಳಲ್ಲಿ ಕ್ರಮವಾಗಿ ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕದ ಸದ್ಯದ ಸ್ಥಿತಿಗತಿ ಹೀಗಿದೆ:

ಪ್ರದೇಶ & ರಾಜ್ಯ	ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕ			ನಿಷೇಧದ ಸ್ಥಿತಿಗತಿ
	2009	2011	2013	
ಮಂಗಳೂರು – ಕರ್ನಾಟಕ	73.68	73.86	67.62	23.05.2011 ರಂದು ರದ್ದಾಯಿತು.
ಭದ್ರಾವತಿ – ಕರ್ನಾಟಕ	72.33	62.64	45.27	23.05.2011 ರಂದು ರದ್ದಾಯಿತು.

ರಾಜ್ಯ ಮಟ್ಟದ ಮಾನಿಟರಿಂಗ್ ಸಮಿತಿ ಹಾಗೂ ಸ್ಥಳೀಯ ಪ್ರದೇಶ ಸಮಿತಿಗಳನ್ನು ರಚಿಸಲಾಗಿದೆ. ಕ್ರಿಯಾ ಯೋಜನೆಗಳ ಪ್ರಗತಿಯನ್ನು ಗಮನಿಸಲು ವಿಮರ್ಶಾನಾತ್ಮಕ ಸಭೆಗಳನ್ನು ನಡೆಸಲಾಗುತ್ತಿದೆ.

5ಬಿ.3.2 ತೀವ್ರವಾಗಿ ಮಲಿನಗೊಂಡ ಪ್ರದೇಶಗಳ ಸ್ಥಿತಿ (Severely polluted area)

ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕ ((ಸಪಾಮಾಸೂ) 60 ರಿಂದ 70 ರಷ್ಟಿರುವ ಕೈಗಾರಿಕಾ ಸಮೂಹ/ ಪ್ರದೇಶವನ್ನು ತೀವ್ರವಾಗಿ ಮಲಿನಗೊಂಡ ಸಮೂಹ/ ಪ್ರದೇಶವೆಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಗಣಿಸುತ್ತದೆ. ಕರ್ನಾಟಕದಲ್ಲಿ ಮೂರು ಕೈಗಾರಿಕಾ ಪ್ರದೇಶಗಳು – ಬೆಂಗಳೂರಿನ ಪೀಣ್ಯ (ಸಪಾಮಾಸೂ 65.11), ಬೀದರ್ ಕೈಗಾರಿಕಾ ಪ್ರದೇಶ (ಸಪಾಮಾಸೂ 67.64), ರಾಯಚೂರಿನ ಕೈಗಾರಿಕಾ ಪ್ರದೇಶ (ಸಪಾಮಾಸೂ 68.07) – ತೀವ್ರವಾಗಿ ಮಲಿನಗೊಂಡ ಸಮೂಹ/ ಪ್ರದೇಶವೆಂದು ವರ್ಗೀಕೃತವಾಗಿವೆ. ಕ್ರಿಯಾ ಯೋಜನೆಗಳನ್ನು ತಯಾರಿಸಲಾಗುತ್ತಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 26.04.2016 ರಂದು ಜಲ ಹಾಗೂ ವಾಯು ಕಾಯ್ದೆಯ ಸೆಕ್ಷನ್ 18(1)(ಬಿ) ರಡಿಯಲ್ಲಿ ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕದ ಪರಿಷ್ಕೃತ ಮಾನದಂಡಗಳ ಪ್ರಕಾರ ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕವನ್ನು ಲೆಕ್ಕ ಹಾಕಲು ನಿರ್ದೇಶನ ಜಾರಿ ಮಾಡಿದೆ. ಕೆಳಗಿನ ತತ್ವಗಳ ಆಧಾರದ ಮೇಲೆ ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕದ ಪರಿಷ್ಕೃತ ಮಾನದಂಡಗಳನ್ನು ರೂಪಿಸಲಾಗಿದೆ.

1. ಮೂಲ, ಮಾರ್ಗ ಮತ್ತು ಸಂವೇದಕವನ್ನು ಆಧರಿಸಿ ಅಸ್ತಿತ್ವದಲ್ಲಿರುವ ಅಲ್ಗಾರಿದಮನ್ನು ಉಳಿಸಿಕೊಳ್ಳುವುದು.

2. ಮಾಲಿನ್ಯದ ಮೂಲಗಳನ್ನು, ನೈಜ ಸಮಯದಲ್ಲಿ ವೀಕ್ಷಿಸಿದ ಪರಿವೇಷ್ಯಕ ಗಾಳಿಯಲ್ಲಿರುವ ಮಾಲಿನ್ಯಕಾರಕಗಳ ಮೌಲ್ಯಗಳನ್ನು, ಕೈಗಾರಿಕಾ ಸಮೂಹದ ಮೇಲ್ಮೈ ನೀರು ಮತ್ತು ಅಂತರ್ಜಲ ಹಾಗೂ ಆರೋಗ್ಯ ಸಂಬಂಧಿತ ಅಂಕಿಅಂಶಗಳ ಆಧಾರದ ಮೇಲೆ ಸಮಗ್ರ ಪಾರಿಸಾರಿಕ ಮಾಲಿನ್ಯ ಸೂಚ್ಯಂಕದ ಪರಿಷ್ಕೃತ ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು. ಪ್ರತಿ ಪರಿಸರ ಘಟಕಗಳಿಗೆ 3 ಮಾನದಂಡಗಳ ಮಾಲಿನ್ಯಕಾರಕಗಳ ಆಯ್ಕೆಯ ಮೇಲೆ ಪರಿಕಲ್ಪನೆಯು ಆಧರಿಸಿದೆ ಅಂದರೆ ವಾಯು, ಮೇಲ್ಮೈ ನೀರು ಹಾಗೂ ಅಂತರ್ಜಲ – ಇವುಗಳು ಒಟ್ಟಾರೆಯಾಗಿ ಪರಿಸರದ ಯೋಗಕ್ಷೇಮವನ್ನು ಸೂಚಿಸುತ್ತದೆ.

3. ಎಸ್ಎನ್ಎಲ್ಎಫ್ ಪರಿಕಲ್ಪನೆಯ ಆಧಾರದ ಮೇಲೆ ಪ್ರದೇಶದ ಪರಿಸರೀಯ ಗುಣಮಟ್ಟವನ್ನು ಅಂದಾಜು ಮಾಡುವುದು ಮಾನ್ಯತೆ ಮಟ್ಟವನ್ನು ಪ್ರತಿನಿಧಿಸುತ್ತದೆ. (ಫನ್ಕ್ಷನ್ ಆಫ್ ಪರ್ಸೆಂಟೇಜ್ ಸ್ಯಾಂಪಲ್ ಎಕ್ಸೀಡೆನ್ಸ್ & ಎಕ್ಸೀಡೆನ್ಸ್ ಫ್ಯಾಕ್ಟರ್)

4. ಆರೋಗ್ಯ ಸಂಬಂಧಿತ ಅಂಕಿ ಅಂಶಗಳು ಆ ಪ್ರದೇಶದ ಪ್ರಮುಖ ಆಸ್ಪತ್ರೆಗಳಿಂದ ಲಭ್ಯವಿರುವ ಆರೋಗ್ಯದ ಮಾಹಿತಿಯ ಮೇಲೆ ಆಧರಿಸಬೇಕು.

ಪರಿಷ್ಕೃತ ಮಾನದಂಡದ ಪ್ರಕಾರ ಮಂಡಳಿಯು ಈ ಕೆಳಗಿನ ಕ್ರಮವನ್ನು ಪ್ರಾರಂಭಿಸಿದೆ.

1. ಕಾರ್ಯ ಯೋಜನೆ ಮತ್ತು ಕ್ರಮವನ್ನು ತೆಗೆದುಕೊಳ್ಳಲು ಮೊದಲೇ ಹೇಳಿದಂತೆ ಸ್ಥಳೀಯ ಪ್ರದೇಶ ಸಮಿತಿಯನ್ನು ಟಿ.ಓ.ಆರ್ ನೊಂದಿಗೆ ಸ್ಥಾಪಿಸಲಾಯಿತು.

2. ಅಭಿವೃದ್ಧಿ ಆಯುಕ್ತರು ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿಮರ್ಶಾತ್ಮಕ ಹಾಗೂ ತೀವ್ರ ಮಾಲಿನ್ಯದ ಪ್ರದೇಶಗಳಿಗೆ (critically polluted and severely polluted area) ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಲು ರಾಜ್ಯ ಮಟ್ಟದ ಮಾನಿಟರಿಂಗ್ ಸಮಿತಿಯ ಸಭೆಗಳನ್ನು ಕರೆಯಲಾಗಿದೆ.

3. ಮಂಗಳೂರು ಹಾಗೂ ಶಿವಮೊಗ್ಗ (ವಿಮರ್ಶಾತ್ಮಕವಾಗಿ ಮಾಲಿನ್ಯದ ಪ್ರದೇಶ critically polluted areas), ಪೀಣ್ಯ ಹಾಗೂ ರಾಯಚೂರು (ತೀವ್ರವಾಗಿ ಮಾಲಿನ್ಯದ ಪ್ರದೇಶ, severely polluted areas) ಪರಿಸರ ನಿಯತಾಂಕಗಳನ್ನು ಮೇಲ್ವಿಚಾರಣೆ ಮಾಡುವ ಕೆಲಸವನ್ನು ವಹಿಸಲಾಗಿದೆ. ಕೋಲ್ಹಾರ (ಬೀದರ್) ಕೈಗಾರಿಕಾ ಪ್ರದೇಶದ ಪರಿಸರ ಮೇಲ್ವಿಚಾರಣೆಯ ಕಾರ್ಯವನ್ನು ದಿನಾಂಕ: 22.03.2017 ರಂದು ಪ್ರಾದೇಶಿಕ ಪ್ರಯೋಗಾಲಯ, ನ್ಯಾಷನಲ್ ಎನ್ವಿರಾನ್ಮೆಂಟಲ್ ಇಂಜಿನಿಯರಿಂಗ್ ರಿಸರ್ಚ್ ಲ್ಯಾಬೋರೇಟರಿ, ಹೈದ್ರಾಬಾದ್ ಇವರಿಗೆ ವಹಿಸಲಾಗಿದೆ.

5ಬಿ.3.3 17 ನೇ ಪ್ರವರ್ಗದ ಹೆಚ್ಚು ಮಾಲಿನ್ಯಕಾರಕ ಕೈಗಾರಿಕೆಗಳ ಸ್ಥಿತಿ:

ಈ ಪ್ರವರ್ಗದಲ್ಲಿ 256 ಕೈಗಾರಿಕೆಗಳಿದ್ದು, ಇವುಗಳಲ್ಲಿ 199 ಕಾರ್ಯಾಚರಣೆಯಲ್ಲಿವೆ. ಮಂಡಳಿಯು ಇಂತಹ ಕೈಗಾರಿಕೆಗಳಿಗೆ ಅರ್ಹ ಪರಿಸರ ಇಂಜಿನಿಯರ್/ವಿಜ್ಞಾನಿ ಮತ್ತು ಸ್ವಯಂ ನಿಯಂತ್ರಕ ವ್ಯವಸ್ಥೆಯನ್ನು ಹೊಂದಲು ಒತ್ತಾಯಿಸುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರಮುಖ ವಾಯು ಮಾಲಿನ್ಯಕಾರಕ ಕೈಗಾರಿಕೆಗಳಿಗೆ ನಿರಂತರ ಆನ್‌ಲೈನ್ ಪರಿವೇಷ್ಟಕ ವಾಯು ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ದತ್ತಾಂಶವನ್ನು ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಲು ಹಾಗೂ ಕ.ರಾ.ಮಾ.ನಿ.ಮಂ ಯ ವೆಬ್‌ಸೈಟಿಗೆ ಸಂಯೋಜಿಸಲು ಸಹ ಒತ್ತಿ ಹೇಳುತ್ತಿದೆ.

5ಬಿ.3.4 ಸ್ವಯಂ ನಿಯಂತ್ರಣಕ್ಕಾಗಿ ಆನಲೈನ್ ಮಾನಿಟರಿಂಗ್:

ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ರ ಉಪಬಂಧ 33(ಎ) ಮತ್ತು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರ ಉಪಬಂಧ 31(ಎ) ರ ಅನ್ವಯ ಸ್ವಯಂ ಪರಿಶೀಲನಾ ವ್ಯವಸ್ಥೆಯ ಮೂಲಕ ಹೆಚ್ಚು ಪರಿಣಾಮಕಾರಿ ಅನುಪಾಲನೆಗೆ ಅನುವಾಗುವಂತೆ ಬಲಪಡಿಸಲು 17 ನೇ ಪ್ರವರ್ಗದ ಹೆಚ್ಚು ಮಾಲಿನ್ಯಕಾರಕ ಕೈಗಾರಿಕೆಗಳಿಗೆ, ಸಿ.ಇ.ಟಿ.ಪಿ. ಗಳಿಗೆ ಹಾಗೂ ಸಾರ್ವಜನಿಕ ಅಪಾಯಕಾರಿ ಮತ್ತು ಜೀವ ವೈದ್ಯಕೀಯ ದಹನ ಕಲಮೆಗಳಿಗೆ ನಿರಂತರ ಆನ್‌ಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಒದಗಿಸಲು ನಿರ್ದೇಶನ ನೀಡಿದೆ. ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : PCB/ECC-1/2014-15/3857 ದಿನಾಂಕ : 03.11.2014 ರ ಅನ್ವಯ ಆನ್‌ಲೈನ್ ವ್ಯವಸ್ಥೆಗಳನ್ನು ಮೇಲ್ವಿಚಾರಣೆ ಮಾಡಲು ಆರು ಸದಸ್ಯರ ಗುಂಪನ್ನು ರಚಿಸಿದೆ.

ದಿನಾಂಕ : 26.03.2015 ರಂದು ನಡೆದ 197 ನೇ ಮಂಡಳಿ ಸಭೆಯಲ್ಲಿ, ಕರ್ನಾಟಕದಲ್ಲಿ ಆನ್‌ಲೈನ್ ಮಾನಿಟರಿಂಗ್ ಸಿಸ್ಟಮ್ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಗತಿ ಗಮನಿಸಿದೆ ಮತ್ತು ಆನ್‌ಲೈನ್ ಮಾನಿಟರಿಂಗ್ ಸಿಸ್ಟಮ್‌ಗಳಿಗೆ ಸಂಬಂಧಪಟ್ಟ ಕೆಲಸವನ್ನು ಕಿಯೋನಿಕ್ಸ್ ಸಂಸ್ಥೆಗೆ ಹೊರಗುತ್ತಿಗೆ ನೀಡಲು ಒಪ್ಪಿದೆ.

ಸ್ವಯಂ ಪರಿಶೀಲನೆ ವ್ಯವಸ್ಥೆಯಲ್ಲಿ ಬರುವ ಕೈಗಾರಿಕೆಗಳು ಸ್ಥಾಪಿಸಿರುವ ಆನ್‌ಲೈನ್ ನಿಗಾ ವ್ಯವಸ್ಥೆಯ ಸ್ಥಿತಿಗತಿಯನ್ನು **ಅನುಬಂಧ– XIII** ರಲ್ಲಿ ನೀಡಲಾಗಿದೆ.

5ಬಿ.3.5 ಹಾರುಬೂದಿ ಅಧಿನಿಯಮ ಅನುಷ್ಠಾನದ ಸ್ಥಿತಿಗತಿ:

ಹಾರುಬೂದಿ ಅಧಿಸೂಚನೆ ಸಂಖ್ಯೆ: SO 2084 E ದಿನಾಂಕ: 03.11.2009 ರ ಅನ್ವಯ ದಿನಾಂಕ: 01.04.2017 ರಿಂದ 31.03.2018 ರವರೆಗಿನ ಹಾರುಬೂದಿ ಬಳಕೆಗೆ ಸಂಬಂಧಿಸಿದ ಸ್ಥಿತಿಗತಿ ಕೆಳಕಂಡಂತ್ತಿದೆ.

ಕ್ರಮ ಸಂಖ್ಯೆ	ಕೈಗಾರಿಕೆಯ ಹೆಸರು & ವಿಳಾಸ	ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ (MW)	ಹಾರುಬೂದಿ ಉತ್ಪಾದನೆಯ ಪ್ರಮಾಣ (MTA)	ಶೇಕಡವಾರು ಬಳಕೆ	ಉಪಯುಕ್ತತೆಗಳು
1	ರಾಯಚೂರು ಥರ್ಮಲ್ ಪವರ್ ಕಂಪನಿ ಲಿಮಿಟೆಡ್, ಶಕ್ತಿನಗರ, ರಾಯಚೂರು.	7 x 210 MW & 1X 250 MW (ಒಟ್ಟು 1720 MW)			ಸಿಮೆಂಟ್ ಕಾರ್ಖಾನೆ, ಇಟ್ಟಿಗೆ ಉತ್ಪಾದನೆ ಹಾಗೂ ಟೈಲ್ಸ್ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗಿದೆ.
2	ಬಳ್ಳಾರಿ ಥರ್ಮಲ್ ಪವರ್ ಸ್ಟೇಷನ್, ಕೆ.ಪಿ.ಸಿ ಲಿಮಿಟೆಡ್, ಕುಡುತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ.	2 x 500 MW 1 x 700 MW	709586	62.23	ಸಿಮೆಂಟ್ ಕಾರ್ಖಾನೆಗೆ, ಇಟ್ಟಿಗೆ ಉತ್ಪಾದನೆಗೆ ಸರಬರಾಜು ಮಾಡಲಾಗಿದೆ.
3	ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್, ಎಲ್ಲೂರು, ಪಡುಬಿದ್ರಿ, ಉಡುಪಿ.	2 x 600 MW	151914	99	ಸಿಮೆಂಟ್ ಕಾರ್ಖಾನೆ, ಇಟ್ಟಿಗೆ ಉತ್ಪಾದನೆ & ಆರ್.ಎಂ.ಸಿ ಯುನಿಟಗಳಿಗೆ ಸರಬರಾಜು ಮಾಡಲಾಗಿದೆ. ಬೂದಿ ಕೊಳದಲ್ಲಿ ಕೆಳಗಿನ ಬೂದಿಯನ್ನು ಸಂಗ್ರಹಿಸಲಾಗಿದೆ.
4	ಜೆಎಸ್‌ಡಬ್ಲೂ ಎನರ್ಜಿ ಲಿಮಿಟೆಡ್, ತೋರಣಗಲ್ಲು, ಬಳ್ಳಾರಿ ಜಿಲ್ಲೆ.	2 x 130 MW	181455	100	ಸಿಮೆಂಟ್ ಕಾರ್ಖಾನೆ, ಇಟ್ಟಿಗೆ ಉತ್ಪಾದನೆ ಸರಬರಾಜು ಮಾಡಲಾಗಿದೆ. ಲೋಳೆ ಕೊಳದ ಕಟ್ಟೆ ನಿರ್ಮಿಸಲು ಉಪಯೋಗಿಸಲಾಗಿದೆ
5	ಬಿರ್ಲಾ ಶಕ್ತಿ ಸಿಮೆಂಟ್ಸ್, (ಮುಂಚೆ ವಾಸವದತ್ತ ಸಿಮೆಂಟ್ಸ್), ಸೇಡಂ, ಕಲಬುರ್ಗಿ ಜಿಲ್ಲೆ.	79.2 MW (ಕ್ಯಾಪ್ಟಿವ್)	105386	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
6	ಅಲ್ಟ್ರಾಟೆಕ್ ಸಿಮೆಂಟ್ಸ್, (ಮುಂಚೆ ರಾಜಶ್ರೀ ಸಿಮೆಂಟ್ಸ್) ಮಲ್ಕೇಡ್, ಕಲಬುರ್ಗಿ ಜಿಲ್ಲೆ.	58.2 MW (ಕ್ಯಾಪ್ಟಿವ್)	88025	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
7	ಎಸಿಸಿ ಲಿಮಿಟೆಡ್ (ಹಿಂದೆ: ಟಾಟಾ ಪವರ್ ಕಾರ್ಪೋರೇಷನ್ ಲಿಮಿಟೆಡ್), ವಾಡಿ, ಕಲಬುರ್ಗಿ ಜಿಲ್ಲೆ.	125 MW (ಕ್ಯಾಪ್ಟಿವ್)	241547	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ

8	ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್, ಕುಮಾರಪಟ್ಟಣಂ, ರಾಣಿಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.	20 MW (ಕ್ಯಾಪ್ಟಿವ್)	54826	100	ಇಟ್ಟಿಗೆ ಉತ್ಪಾದಕರಿಗೆ ಹಾಗೂ ಸಿಮೆಂಟ್ ಕೈಗಾರಿಕೆಗಳಿಗೆ ಕಳುಹಿಸಲಾಗಿದೆ.
9	ವೆಸ್ಟ್ ಕೋಸ್ಟ್ ಪೇಪರ್ ಮಿಲ್, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ.	74.8 MW	80771	100	ಇಟ್ಟಿಗೆ ಉತ್ಪಾದಕರಿಗೆ ಹಾಗೂ ಸಿಮೆಂಟ್ ಕೈಗಾರಿಕೆಗಳಿಗೆ ಕಳುಹಿಸಲಾಗಿದೆ.
10	ಗುಲ್ಬರ್ಗಾ ಪವರ್ ಪ್ರೈವೇಟ್ ಲಿಮಿಟೆಡ್, ಚಿತ್ರಸಾಲ ಗ್ರಾಮ, ಚಿಂಚೋಳಿ ತಾಲ್ಲೂಕು, ಕಲಬುರ್ಗಿ	30 MW (ಕ್ಯಾಪ್ಟಿವ್)	25183	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
11	ಚೆಟ್ಟಿನಾಡು ಸಿಮೆಂಟ್ ಕಾರ್ಪೋರೇಷನ್, ಕಲ್ಲೂರು ಮತ್ತು ಸಂಗಂ ಗ್ರಾಮಗಳು, ಚಿಂಚೋಳಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ.	30 MW (ಕ್ಯಾಪ್ಟಿವ್)	22428	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
12	ಸುರಾನ ಪವರ್ ಲಿಮಿಟೆಡ್, ರಾಯಚೂರು ಗ್ರೋಥ್ ಸೆಂಟರ್, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ.	30 MW (ಕ್ಯಾಪ್ಟಿವ್)	ಮುಚ್ಚಿದೆ	.....	.....
13	ಸ್ಟಾರ್ ಮೆಟಾಲಿಕ್ಸ್ ಮತ್ತು ಪವರ್ ಪ್ರೈವೇಟ್ ಲಿಮಿಟೆಡ್, ಹನುಮನಹಳ್ಳಿ ಮತ್ತು ಎಂ.ಎಂ. ಹಳ್ಳಿ ಗ್ರಾಮಗಳು, ವ್ಯಾಸನಕೆರೆ ಪೋಸ್ಟ್, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.	32 (ಕ್ಯಾಪ್ಟಿವ್)			ಇಟ್ಟಿಗೆ ಉತ್ಪಾದಕರಿಗೆ ಕಳುಹಿಸಲಾಗಿದೆ.
14	ಹಿಮತ್‌ಸಿಂಗ್ಕ ಲಿನೆನ್ಸ್, ಪ್ಲಾಟ್ ನಂ.1, ಎಸ್.ಇ.ಜೆಡ್, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹನುಮಂತಪುರ ಪೋಸ್ಟ್, ಹಾಸನ.	12.5 MW (ಕ್ಯಾಪ್ಟಿವ್)	6884	100	ಇಟ್ಟಿಗೆ ಉತ್ಪಾದಕರಿಗೆ ವಿಲೇವಾರಿ ಮಾಡಲಾಗಿದೆ.
15	ಯರ್ಮರಸ್ ಥರ್ಮಲ್ ಪವರ್ ಸ್ಟೇಷನ್.	800 MW x 2	714464	50.05	ಸಿಮೆಂಟ್ ಕಾರ್ಖಾನೆ, ಇಟ್ಟಿಗೆ ಘಟಕ ಹಾಗೂ ಆರ್.ಎಂ.ಸಿ

16	ಬಿಎಂಎಂ ಇಸ್ಪಾಟ್ ಲಿಮಿಟೆಡ್, ಬಳ್ಳಾರಿ.	25MW ವಿದ್ಯುತ್ ಸ್ಥಾವರ 3X70 MW ವಿದ್ಯುತ್ ಸ್ಥಾವರ	69435	99.82	ಸಿಮೆಂಟ್ ಕಾರ್ಖಾನೆ ಹಾಗೂ ಇಟ್ಟಿಗೆ ಘಟಕ
17	ಡಾಲ್ಮಿಯಾ ಸಿಮೆಂಟ್ ಲಿಮಿಟೆಡ್, ಯಡವಾಡ ಗ್ರಾಮ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ	40 MW	30735	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
18	ಒರಿಯೆಂಟ್ ಸಿಮೆಂಟ್ ಲಿಮಿಟೆಡ್, ಚಿತ್ತಾಪುರ ತಾಲ್ಲೂಕು, ಕಲಬುರ್ಗಿ ಜಿಲ್ಲೆ.	45 MW	56,229	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
19	ಜೆಕೆ ಸಿಮೆಂಟ್ ವರ್ಕ್ಸ್, ಮುದ್ರಾಪುರ, ಬಾಗಲಕೋಟೆ ಜಿಲ್ಲೆ	2 X 25 MW	35375	100	ಸಿಮೆಂಟ್ ಉತ್ಪಾದನೆಗೆ ಉಪಯೋಗಿಸಲಾಗಿದೆ
20	ಯರಮಾರಸ್ ಪವರ್ ಸ್ಟೇಷನ್ (ಆರ್‌ಟಿಪಿಎಸ್), ಚಿಕ್ಕಸಾಗೂರ್, ರಾಯಚೂರು	2 X 800 MW	46,360	100	

5ಬಿ.3.6 ಪೆಟ್‌ಕೋಕನ್ನು ಇಂಧನವಾಗಿ ಬಳಸಲು ನಿಷೇಧ

ಪೆಟ್‌ಕೋಕನ್ನು ಇಂಧನವಾಗಿ ಬಳಸುವ ಕುರಿತು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ, ನವ ದೆಹಲಿ ಇವರ ಆದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಂಡಳಿಯು ವಾಯು(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಸೆಕ್ಷನ್ 2(ಡಿ) ರಡಿಯಲ್ಲಿ ಸಿಮೆಂಟ್ ಪ್ಲ್ಯಾಂಟ್‌ಗಳ ಕ್ಯಾಪ್ಟಿವ್ ಪವರ್ ಪ್ಲ್ಯಾಂಟ್‌ಗಳನ್ನು ಒಳಗೊಂಡಂತೆ ಸಿಮೆಂಟ್ ಕಿಲ್ನ್‌ಗಳಲ್ಲಿ ಮಾತ್ರ ಪೆಟ್ ಕೋಕನ್ನು "ಅನುಮೋದಿತ" ಇಂಧನ ಎಂದು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ : 22.07.2017 ರಂದು ಅಧಿಸೂಚಿಸಿದೆ.

- ವಾಯು(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ಸಿಮೆಂಟ್ ಘಟಕಗಳು ಮಂಡಳಿಯ ಪೂರ್ವಾನುಮತಿ ಪಡೆದಿರಬೇಕು ಅಥವಾ ಎಂಒಇಎಫ್ & ಸಿ.ಸಿ ಅಧಿಸೂಚನೆ GSR 612 (E) ದಿನಾಂಕ : 25.08.2014 ಹಾಗೂ ತಿದ್ದುಪಡಿಗಳು–GSR 496(E) ದಿನಾಂಕ : 09.05.2016 ಮತ್ತು GSR 497 (E) ದಿನಾಂಕ : 10.05.2016 ರಲ್ಲಿ ನಿಗಧಿಪಡಿಸಿರುವ ಹೊರಸೂಸುವ ಮಾನದಂಡಗಳಿಗೆ ಅನುಗುಣವಾಗಿ ಅಗತ್ಯವಾದ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವ ಕುರಿತು ಸಮ್ಮತಿ ಪತ್ರದಲ್ಲಿ ತಿದ್ದುಪಡಿಯನ್ನು ಪಡೆದಿರಬೇಕು.
- ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ಸಿಮೆಂಟ್ ಘಟಕಗಳ ಒಳಗೆ ಕ್ಯಾಪ್ಟಿವ್ ಪವರ್ ಪ್ಲಾಂಟ್‌ಗಳು ಮಂಡಳಿಯ ಪೂರ್ವಾನುಮತಿ ಪಡೆದಿರಬೇಕು ಅಥವಾ ಎಂಒಇಎಫ್ &

ಸಿ.ಸಿ ಅಧಿಸೂಚನೆ GSR 612 (E) ದಿನಾಂಕ : 25.08.2014 ಹಾಗೂ ತಿದ್ದುಪಡಿಗಳು– SO 3305(E) ದಿನಾಂಕ : 07.12.2015 ರಲ್ಲಿ ನಿಗಧಿಪಡಿಸಿರುವ ಹೊರಸೂಸುವ ಮಾನದಂಡಗಳಿಗೆ ಅನುಗುಣವಾಗಿ ಅಗತ್ಯವಾದ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವ ಕುರಿತು ಸಮ್ಮತಿ ಪತ್ರದಲ್ಲಿ ತಿದ್ದುಪಡಿಯನ್ನು ಪಡೆದಿರಬೇಕು.

ಕರ್ನಾಟಕ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಾಲಯ, ಹೊಸ ದೆಹಲಿ ರ ಆದೇಶದ ದೃಷ್ಟಿಯಿಂದ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಸೆಕ್ಷನ್ 19(3) ರಡಿಯಲ್ಲಿ ಕೆಳಗಿನ ಚಟುವಟಿಕೆಗಳನ್ನು ಹೊರತುಪಡಿಸಿ, ಸಂಪೂರ್ಣ ರಾಜ್ಯದಲ್ಲಿ ಪೆಟ್‌ಕೋಕ್ ಅನ್ನು ಇಂಧನವೆಂದು ನಿಷೇಧಿಸಿದೆ.

ಅ) ಸಿಮೆಂಟ್ ಕಿಲ್ನ್

ಆ) ಸರ್ಕ್ಯುಲೇಟಿಂಗ್ ಫ್ಲೂಡೈಜಡ್ ಬೆಡ್ ಕಂಬಷನ್ (ಸಿಎಫ್‌ಬಿಸಿ) ಬಾಯ್ಲರ್ ಸೌಲಭ್ಯ ಹೊಂದಿರುವ ಹಾಗೂ ಸುಣ್ಣದ ಕಲ್ಲಿನಿಂದ SO_2 ಹೊರಸೂಸುವಿಕೆಗಳನ್ನು ನಿಯಂತ್ರಿಸುವ ಸಿಮೆಂಟ್ ಘಟಕಗಳ ಒಳಗಿನ ಕ್ಯಾಪ್ಟಿವ್ ಪವರ್ ಪ್ಲಾಂಟ್‌ಗಳು.

5ಬಿ.4 ಕಾಫೀ ತಿರುಳಿನ ಘಟಕಗಳ ಸ್ಥಿತಿಗತಿ

ಒಟ್ಟು 2748 ಕಾಫೀ ಎಸ್ಟೇಟುಗಳಿದ್ದು ಅವು ಮುಖ್ಯವಾಗಿ ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿದ್ದು ಕೆಲವು ಚಾಮರಾಜನಗರ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿವೆ. ಕಾಫಿ ಹಣ್ಣಿನ ಸಂಸ್ಕರಣೆ ಕೆಲಸಗಳು ಋತುಮಾನವನ್ನವಲಂಬಿಸಿವೆ; ಮಾಲಿನ್ಯದ ಸಮಸ್ಯೆಗಳು ಕಾಫಿ ಹಣ್ಣಿನ ಸಂಸ್ಕರಣೆ ಸಮಯವಾದ ನವೆಂಬರನಿಂದ ಏಪ್ರಿಲ್‌ವರೆಗೆ ಸೀಮಿತವಾಗಿರುತ್ತವೆ. 1123 ಘಟಕಗಳು ತ್ಯಾಜ್ಯ ಸಂಸ್ಕರಣಾ ಸ್ಥಾವರಗಳನ್ನು ಹೊಂದಿವೆ ಮತ್ತು 1254 ಘಟಕಗಳು ತಾತ್ಕಲಿಕ ಸಂಸ್ಕರಣಾ ಸೌಲಭ್ಯಗಳನ್ನು ಹೊಂದಿವೆ. ಕಾಫಿ ಹಣ್ಣಿನ ಸಂಸ್ಕರಣೆಯ ಸಮಯದಲ್ಲಿ ನೀರಿನ ಆಕರಗಳಿಗೆ ತ್ಯಾಜ್ಯದ ಹರಿವು ಇರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಘಟಕಗಳನ್ನು ಪರಿಶೀಲಿಸಲಾಗುತ್ತದೆ.

ಅರಣ್ಯ ಮತ್ತು ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪರಿಸರ (ಸಂರಕ್ಷಣೆ) ನಿಯಮದ ಅಡಿಯಲ್ಲಿ 25 ಹೆಕ್ಟೇರುಗಳ ವರೆಗಿನ ಎಸ್ಟೇಟುಗಳ ಕಾಫೀ ಹಣ್ಣಿನ ಸಂಸ್ಕರಣೆಯ ಘಟಕಗಳು ಸಜ್ಜುಗೊಳಿಸಿಕೊಳ್ಳಬೇಕಾದ ಕೃತಕ ಕೊಳಗಳ (ಒಳಭಾಗದ ಪದರ ಎಷ್ಟಿರಬೇಕು ಎಂಬುದನ್ನೂ ಸೇರಿದ ಹಾಗೆ) ಕುರಿತು ಮತ್ತು ತ್ಯಾಜ್ಯವನ್ನು ವಿಲೇ ಮಾಡಲು ಬಿಸಿಲಿನಲ್ಲಿ ಒಣಗಿಸುವ ವಿಧಾನದ ಕುರಿತು ಶಿಷ್ಟತೆಗಳನ್ನು ವಿಧಿಸಿದೆ. 25 ಹೆಕ್ಟೇರಿಗಿಂತ ದೊಡ್ಡದಾದ ಎಸ್ಟೇಟುಗಳಿಗೆ ತಿಳಿಯಾಗಿಸುವುದೂ ಸೇರಿದಂತೆ ಸಾಂಪ್ರದಾಯಿಕ ಸಂಸ್ಕರಣ ಘಟಕವನ್ನು ಹೊಂದಿರಬೇಕೆಂದು ಶಿಷ್ಟತೆಯನ್ನು ವಿಧಿಸಿದೆ. ವಿಭಿನ್ನ ಪ್ರಾದೇಶಿಕ ಲಕ್ಷಣಗಳ ಅಡೆತಡೆಗಳಿಂದಾಗಿ ಕಾಫೀ ಸಂಸ್ಕರಣ ಘಟಕಗಳು ಮೇಲಿನ ವಿಧಾನವನ್ನು ಅಳವಡಿಸಿಕೊಂಡಿಲ್ಲ.

ಇತ್ತೀಚಿನ ಬೆಳವಣಿಗೆಯಲ್ಲಿ ಕೆಲವು ಕಾಫೀ ಹಣ್ಣಿನ ಸಂಸ್ಕರಣ ಘಟಕಗಳ ಮಾಲೀಕರು ಒಣತಿರುಳನ್ನು ನೀಡುವ ಯಂತ್ರದ ಜೊತೆಗೆ ಯಾಂತ್ರಿಕ ಹೊಟ್ಟು ಬೇರ್ಪಡಿಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ; ಇದರಿಂದ ಪ್ರತಿ ಟನ್ ಶುದ್ಧ ಕಾಫಿಗೆ ನೀರಿನ ಬಳಕೆ ಕನಿಷ್ಠ ಎನಿಸುವ 600 ರಿಂದ 1000 ಲೀಟರುಗಳಿಷ್ಟಿರುತ್ತದೆ. ಈ ವಿಧಾನವು ನೀರನ್ನು ಉಳಿಸುವುದಲ್ಲದೆ ಹೊಟ್ಟು, ಅಂಟು ಮತ್ತು ಬೀಜಗಳನ್ನು ಬೇರ್ಪಡಿಸಲೂ ನೆರವಾಗುತ್ತದೆ. ನೀರನ್ನು ದಿನಕ್ಕೊಮ್ಮೆ ಮರುಬಳಕೆ ಮಾಡಲಾಗುತ್ತದೆ ಮತ್ತು ಗೊಬ್ಬರಕ್ಕೆ ಬಳಸಲಾಗುತ್ತದೆ.

5ಬಿ.5 ದೂರು ಪರಿಹಾರ: ವಲಯ ಕಛೇರಿವಾರು ವಿವರಗಳನ್ನು ಕೋಷ್ಟಕದಲ್ಲಿ ತೋರಿಸಿದೆ.

ಕೋಷ್ಟಕ 5ಬಿ.1: ದೂರುಗಳು ಪ್ರದೇಶವಾರು – ಸಾರಾಂಶ

ವಲಯ ಕಚೇರಿ	ಆರಂಭ ಸಂಖ್ಯೆ	ಈ ಅವಧಿಯಲ್ಲಿ ಸ್ವೀಕರಿಸಿದ ದೂರುಗಳು	ಒಟ್ಟು ಸ್ವೀಕರಿಸಿದ ದೂರುಗಳ ಸಂಖ್ಯೆ	ಪರಿಹರಿಸಿದ ದೂರುಗಳ ಸಂಖ್ಯೆ	ಬಾಕಿ ಇರುವ ದೂರುಗಳು
ಬೆಂಗಳೂರು ನಗರ	4	283	287	272	15
ಬೆಂಗಳೂರು ಪೂರ್ವ	3	165	168	163	5
ಬೆಂಗಳೂರು ದಕ್ಷಿಣ	8	350	358	352	6
ಬೆಂಗಳೂರು ಉತ್ತರ	10	205	215	210	5
ಮೈಸೂರು	16	342	358	348	10
ಮಂಗಳೂರು	8	544	552	543	9
ಬಳ್ಳಾರಿ	8	255	263	256	7
ಚಿತ್ರದುರ್ಗ	9	316	325	317	8
ಧಾರವಾಡ	0	273	273	270	3
ಕಲಬುರ್ಗಿ	0	105	105	105	0

ಅಧ್ಯಾಯ ೬

1986ರ ಪರಿಸರ (ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ರೂಪಿಸಿದ ನಿಯಮಗಳ ಅನುಷ್ಠಾನ

ಅಧ್ಯಾಯ – 6
1986ರ ಪರಿಸರ (ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ರೂಪಿಸಿದ ನಿಯಮಗಳ ಅನುಷ್ಠಾನ

6.1: ಅಪಾಯಕಾರಿ ಹಾಗೂ ಇತರೆ ತ್ಯಾಜ್ಯಗಳ (ನಿರ್ವಹಣೆ ಮತ್ತು ಅಂತರಗಡಿ ಸಾಗಣೆ) ನಿಯಮ, 2016 ರ ಅನುಷ್ಠಾನ

ಈ ನಿಯಮವು, ನಿಯಮದಲ್ಲಿ ಉಲ್ಲೇಖವಾಗಿರುವ ವಿವಿಧ ಬಗೆಯ ಅಪಾಯಕಾರಿ ಕೈಗಾರಿಕಾ ತ್ಯಾಜ್ಯಗಳ ಸುರಕ್ಷಿತ ಸಂಗ್ರಹ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗಳನ್ನು ಖಚಿತಗೊಳಿಸುತ್ತದೆ. ನಿಯಮದ ಒಂದು ಮುಖ್ಯ ಅಂಶವೆಂದರೆ, ಅಪಾಯಕಾರಿ ತ್ಯಾಜ್ಯದ ಉತ್ಪಾದನೆ, ನಿರ್ವಹಣೆಯಲ್ಲಿ ತೊಡಗಿರುವವರು ತ್ಯಾಜ್ಯಗಳನ್ನು ಸಮರ್ಪಕವಾಗಿ ಸಂಗ್ರಹಿಸುವ, ಲೇಬಲ್ ಹಚ್ಚುವ, ನಿರ್ವಹಿಸುವ ಮತ್ತು ವಿಲೇವಾರಿ ಮಾಡುವುದರಲ್ಲಿ ಪರಿಸರದ ಮೇಲೆ ಯಾವುದೇ ವಿರುದ್ಧ ಪರಿಣಾಮ ಬೀರದ ಹಾಗಿರಲು ಸೂಕ್ತವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಕಾನೂನಾತ್ಮಕವಾಗಿ ಹೊಣೆಗಾರರಾಗುತ್ತಾರೆ. ನಿಯಮವು ಅಪಾಯಕಾರಿ ತ್ಯಾಜ್ಯದ ಆಮದು ಮತ್ತು ರಫ್ತುಗಳನ್ನೂ ನಿಯಂತ್ರಿಸುತ್ತದೆ. ಕ.ರಾ.ಮಾ.ನಿ.ಮಂಡಳಿಯು ರಾಜ್ಯದಲ್ಲಿ ಉಲ್ಲೇಖಿತ ನಿಯಮವನ್ನು ಅನುಷ್ಠಾನಗೊಳಿಸುತ್ತಿದೆ.

ಮಂಡಳಿಯು ರಾಜ್ಯದಲ್ಲಿ 3134 ಅಪಾಯಕಾರಿ ತ್ಯಾಜ್ಯ ಉತ್ಪತ್ತಿ ಮಾಡುವ ಉದ್ದಿಮೆಗಳನ್ನು ಗುರುತಿಸಿವೆ. ಇವುಗಳಿಗೆ ಅಧಿಕಾರ ಪತ್ರವನ್ನು ನೀಡಿರುತ್ತದೆ.

ವರದಿಯ ವರ್ಷದಲ್ಲಿ ರಾಜ್ಯದಲ್ಲಿ ಉತ್ಪಾದಿತವಾದ ಅಪಾಯಕಾರಿ ತ್ಯಾಜ್ಯದ ದಾಸ್ತಾನಿನ ಸಂಕ್ಷಿಪ್ತ ವಿವರ.

ಕ್ರಮ ಸಂಖ್ಯೆ	ಅಪಾಯಕಾರಿ ತ್ಯಾಜ್ಯದ ಬಗೆ	ಉತ್ಪಾದಿತವಾದ ಪ್ರಮಾಣ * (ಎಂ.ಟಿ.ಪಿ.ಎ)	ಉತ್ಪಾದಿತವಾದ ಪ್ರಮಾಣ ಸಂಖ್ಯೆ ** (ಎಂ.ಟಿ.ಪಿ.ಎ)
1	ಭೂಮಿಯೊಳಗೆ ಹೂಳಬಹುದಾದ ತ್ಯಾಜ್ಯ	46596.67	--
2	ದಹನ ಸಾಧ್ಯ ತ್ಯಾಜ್ಯ	79542.72	74068.00
3	ಮರುಬಳಕೆಸಾಧ್ಯ/ ಮರುಸಂಸ್ಕರಣೆ ಸಾಧ್ಯ ತ್ಯಾಜ್ಯ	65851.23	878131.00
	ಒಟ್ಟು ತ್ಯಾಜ್ಯ	191990.62	952199.00

ಟಿಪ್ಪಣಿ : * ಸಂಖ್ಯೆಯಲ್ಲಿ ನೀಡಲಾಗಿರುವ ಪ್ರಮಾಣಗಳನ್ನು ಹೊರತುಪಡಿಸಿ
** ಸಂಖ್ಯೆ ಮಾತ್ರ (ತಿರಸ್ಕರಿಸಿದ ಪಾತ್ರೆಗಳು, ತೈಲ ಶೋಧಕಗಳು ಇತ್ಯಾದಿ)

ವರದಿಯ ವರ್ಷದಲ್ಲಿ ರಾಜ್ಯದಲ್ಲಿ ಉತ್ಪಾದಿತವಾದ ಅಪಾಯಕಾರಿ ತ್ಯಾಜ್ಯದ ಪ್ರಾದೇಶಿಕವಾರು ದಾಸ್ತಾನು ವಿವರಗಳನ್ನು **ಅನುಬಂಧ– XIV** ರಲ್ಲಿ ನೀಡಲಾಗಿದೆ.

ಟಿಪ್ಪಣಿ : ಅಂಕಿಅಂಶಗಳು 31.03.2017 ರಂತೆ ಸೂಚಿಸಿವೆ.

6.1.1 ಭೂಮಿಯೊಳಗೆ ಹೂಳಬಹುದಾದ ಅಪಾಯಕಾರಿ ತ್ಯಾಜ್ಯದ ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯ.

ರಾಜ್ಯದಲ್ಲಿ ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿಯ ಎರಡು ಸೌಲಭ್ಯಗಳಿವೆ.

ಸೌಲಭ್ಯ ಸಂಖ್ಯೆ: 1

ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಡಾಬಸ್‌ಪೇಟೆಯಲ್ಲಿ "ನಿರ್ಮಿಸು, ಒಡೆತನ ಹೊಂದು, ನಿರ್ವಹಿಸು ಮತ್ತು ವರ್ಗಾಯಿಸು" ಮಾದರಿಯ ಆಧಾರದಲ್ಲಿ ರಾಮ್ಕಿ ಎನ್ವಿರೋ ಇಂಜಿನೀಯರ್ಸ್ ರವರಿಂದ ಸ್ಥಾಪಿತವಾಗಿದೆ. ಇದು 2008ರಿಂದ ಕಾರ್ಯನಿರತವಾಗಿದೆ. ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯದ ಮುಖ್ಯ ಸಂಗತಿಗಳು ಹೀಗಿವೆ:

1. ಭೂಮಿಯ ವಿಸ್ತಾರ : 93.18 ಎಕರೆಗಳು
2. ವಿನ್ಯಾಸಿತ ಒಟ್ಟು ಸಾಮರ್ಥ್ಯ : 8 ಲಕ್ಷ ಮೆಟ್ರಿಕ್ ಟನ್ನುಗಳು
3. ಸಕ್ರಿಯ ಜೀವತಾವಧಿ : 20 ವರ್ಷ
4. ಮೇಲ್ವಿಚಾರಣೆ ಅವಧಿಯ ನಂತರ : 30 ವರ್ಷ
5. ವಿನ್ಯಾಸಕರು : GTZ- ERM
6. ಭೂಮಿಯೊಳಗೆ ಹೂಳುವ ಒಂದು ಕೋಶ ಭರ್ತಿಯಾಗಿದ್ದು, ಎರಡನೆಯ ಕೋಶ ನಿರ್ವಹಣೆಯಲ್ಲಿದೆ.

ಕೋಷ್ಟಕ: 6.1: ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯದಲ್ಲಿ ವಿಲೇವಾರಿ ಮಾಡಿದ ಅಪಾಯಕಾರಿ ತ್ಯಾಜ್ಯ.

ಕ್ರಮ ಸಂಖ್ಯೆ	ವಿವರಗಳು	ಪ್ರಮಾಣ 1.04.2017 ರಿಂದ 31.03.2018 ರವರೆಗೆ (ಮೆಟ್ರಿಕ್ ಟನ್‌ಗಳಲ್ಲಿ)
1	ನೇರವಾಗಿ ಭೂಮಿಯಲ್ಲಿ ಹೂಳಿದ್ದು	2480.244
2	ಸಂಸ್ಕರಣೆಯ ನಂತರ ಹೂಳಿದ್ದು	11434.093
ಒಟ್ಟು		13914.337

ಸೌಲಭ್ಯ ಸಂಖ್ಯೆ.: 2

ಅಪಾಯಕಾರಿ ತ್ಯಾಜ್ಯದ ಸಂಸ್ಕರಣಾ, ಶೇಕರಣಾ ಹಾಗೂ ವಿಲೇವಾರಿ ಮಾಡುವ ಮತ್ತೊಂದು ವ್ಯವಸ್ಥೆಯನ್ನು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮದರ್ ಅರ್ಥ್ ಎನ್ವಿರಾನ್ ಟೆಕ್ ಪ್ರೈ.ಲಿ. ರವರ ವತಿಯಿಂದ ಸ್ಥಾಪಿಸಲಾಗಿದೆ. ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯದ ಮುಖ್ಯ ಸಂಗತಿಗಳು ಹೀಗಿವೆ:

1. ಭೂಮಿಯ ವಿಸ್ತಾರ – 4 ಎಕರೆ
2. ವಿನ್ಯಾಸಿತ ಸಾಮರ್ಥ್ಯ – 95000 ಮೆಟ್ರಿಕ್ ಟನ್
3. ಸಕ್ರಿಯ ಜೀವತಾವಧಿ – 10 ವರ್ಷ

ಕೋಷ್ಟಕ: 6.2: ಸಂಸ್ಕರಣೆ, ಸಂಗ್ರಹ ಮತ್ತು ವಿಲೇವಾರಿ ಸೌಲಭ್ಯದಲ್ಲಿ ವಿಲೇವಾರಿ ಮಾಡಿದ ಅಪಾಯಕಾರಿ ತ್ಯಾಜ್ಯ.

ಕ್ರಮ ಸಂಖ್ಯೆ	ವಿವರಗಳು	ಪ್ರಮಾಣ 1.04.2017 ರಿಂದ 31.03.2018 ರವರೆಗೆ (ಮೆಟ್ರಿಕ್ ಟನ್‌ಗಳಲ್ಲಿ)
1	ನೇರವಾಗಿ ಭೂಮಿಯಲ್ಲಿ ಹೂಳಿದ್ದು	2925.779
2	ಸಂಸ್ಕರಣೆಯ ನಂತರ ಹೂಳಿದ್ದು	30234.395
ಒಟ್ಟು		**33160.174**

6.1.2 ಮರುಬಳಕೆ ಸಾಧ್ಯ, ಮರುಸಂಸ್ಕರಣೆ ಸಾಧ್ಯ ತ್ಯಾಜ್ಯ:

ಮರುಬಳಕೆ/ಮರುಸಂಸ್ಕರಣೆ ಸಾಧ್ಯ ಅಪಾಯಕಾರಿ ತ್ಯಾಜ್ಯವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ಪಡೆದಿರುವ ಮರುಬಳಕೆದಾರರು/ ಮರು ಸಂಸ್ಕರಣೆದಾರರಿಗೆ ಮಾತ್ರ ಒಪ್ಪಿಸತಕ್ಕದ್ದು. ರಾಜ್ಯದಲ್ಲಿ ಅಪಾಯಕಾರಿ ತ್ಯಾಜ್ಯದ (ಉದಾ: ಬಳಸಿದ ತೈಲದ ಮರುಬಳಕೆ, ತ್ಯಾಜ್ಯ ತೈಲ, ಅಳಿದುಳಿದ ವಿಲಯನ ದ್ರಾವಕಗಳು, ಅಳಿದುಳಿದ ನಿಕ್ಷಾರಕಗಳು, ತ್ಯಜಿಸಿದ ಡಬ್ಬಿ, ಪೆಟ್ಟಿಗೆ ಮುಂತಾದುವು, ಸೀಸ, ತಾಮ್ರ, ಸತುಗಳ ತ್ಯಾಜ್ಯಗಳು) ಮರುಬಳಕೆ ಮಾಡಲು 170 ಘಟಕಗಳು ಕಾರ್ಯ ಮಾಡುತ್ತಿವೆ. ಅಪಾಯಕಾರಿ ತ್ಯಾಜ್ಯ ಮರುಬಳಕೆ ಮಾಡುವ ಘಟಕಗಳ ವಿವರಗಳನ್ನು **ಅನುಬಂಧ– XV** ರಲ್ಲಿ ತಿಳಿಸಲಾಗಿದೆ.

6.1.3 ದಹನ ಸಾಧ್ಯ ತ್ಯಾಜ್ಯ:

ಮಂಡಳಿಯು ರಾಜ್ಯದಲ್ಲಿ ಆರು ಸಾಮಾನ್ಯ ದಹನ ಸೌಲಭ್ಯಗಳಿಗೆ ಅಧಿಕಾರ ಪತ್ರ ನೀಡಿದೆ. ಸಾಮಾನ್ಯ ದಹನ ಸೌಲಭ್ಯ ಘಟಕಗಳ ಪಟ್ಟಿಯು ಕೆಳಕಂಡಂತ್ತಿದೆ.

ಕೋಷ್ಟಕ: 6.3 : ದಹನ ಸೌಲಭ್ಯ ಘಟಕಗಳ ವಿವರ

ಕ್ರಮ ಸಂಖ್ಯೆ	ಇನ್ಸ್‌ನಿರೇಟರ್
1	ಹ್ಯಾಟ್ ಇನ್ಸ್‌ನರೇಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಆನೇಕಲ್ ತಾಲ್ಲೂಕು, ಬೆಂಗಳೂರು.
2	ಗೋಮ್ತಿ ಇನ್ಸಿನ್‌ಕೋ, ಕುಂಬಳಗೋಡು, ಬೆಂಗಳೂರು.
3	ಸೆಂಚುರಿ ರಿಫೈನರೀಸ್ ಪ್ರೈವೇಟ್ ಲಿಮಿಟೆಡ್, ಹೊಸಕೋಟೆ, ಬೆಂಗಳೂರು.
4	ಬೆಂಗಳೂರು ಇನ್ಸ್‌ನರೇಟರ್ ಪ್ರೈವೇಟ್ ಲಿಮಿಟೆಡ್, ಕುಣಿಗಲ್ ತಾಲ್ಲೂಕು, ತುಮಕೂರು.
5	ಇ ನ್ಯಾನೊ ಇನ್ಸಿನ್‌ಟೆಕ್, ಪ್ಲಾಟ್ ನಂ.342–ಬಿ, ಹಾರೋಹಳ್ಳಿ ಕೈಗಾರಿಕಾ ಪ್ರದೇಶ, 2ನೇ ಹಂತ, 2ನೇ ಸೆಕ್ಟಾರ್, ರಾಮನಗರ ಜಿಲ್ಲೆ.
6	ಬೆಂಗಳೂರು ಇಕೋ ಪಾರ್ಕ್ ಪ್ರೈ.ಲಿ, ನಂ.298ಬಿ, ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶ, ಸೋಮಪುರ 1 ನೇ ಸ್ಟೇಜ್, ನಿಡವಂದ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ

6.1.4 ಸಹ ಸಂಸ್ಕರಣೆ

ಮಂಡಳಿಯು ಸಿಮೆಂಟು ಕಾರ್ಖಾನೆಗಳಲ್ಲಿ ದಹನಸಾಧ್ಯ ತ್ಯಾಜ್ಯವನ್ನು ಸಹ ಸಂಸ್ಕರಣೆ ಮಾಡಲು ಅಧಿಕಾರ ಪತ್ರವನ್ನು ನೀಡಿದೆ. ಒಂಭತ್ತು ಸಿಮೆಂಟು ಕಾರ್ಖಾನೆಗಳು ದಹನಸಾಧ್ಯ ತ್ಯಾಜ್ಯವನ್ನು ಸಹ ಸಂಸ್ಕರಣೆ ಮಾಡಲು ಸೌಲಭ್ಯಗಳನ್ನು ಸ್ಥಾಪಿಸಿದೆ.

ಕೋಷ್ಟಕ: 6.4: ಸಹ ಸಂಸ್ಕರಣೆ ಮಾಡಲು ಅಧಿಕಾರ/ಅನುಮೋದನೆ ಹೊಂದಿರುವ ಘಟಕಗಳ ಪಟ್ಟಿ.

ಕ್ರಮ ಸಂಖ್ಯೆ	ಇನ್ಸ್‌ನಿರೇಟರ್
1	ಮೆ॥ವಾಸವದತ್ತ ಸಿಮೆಂಟ್ಸ್, ಸೇಡಂ ತಾಲ್ಲೂಕು, ಕಲಬುರ್ಗಿ ಜಿಲ್ಲೆ.
2	ಮೆ॥ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ (ಯುನಿಟ್ – ರಾಜಶ್ರೀ ಸಿಮೆಂಟ್ ವರ್ಕ್ಸ್), ಆದಿತ್ಯಾನಗರ, ಪಿಓ ಮಲ್ಕೇಡ್ ರಸ್ತೆ, ಕಲಬುರ್ಗಿ.
3	ಮೆ॥ಎಸಿಸಿ ಲಿಮಿಟೆಡ್, ವಾಡಿ ಸಿಮೆಂಟ್ ವರ್ಕ್ಸ್, ಪಿ.ಓ ವಾಡಿ, ಕಲಬುರ್ಗಿ.
4	ಮೆ॥ಚೆಟ್ಟಿನಾಡು ಸಿಮೆಂಟ್ ಕಾರ್ಪೋರೇಷನ್, ಕಲ್ಲೂರ್ ವರ್ಕ್ಸ್, ಸಂಗಂ ಕೆ, ಗರಗಪಳ್ಳಿ ಪೋಸ್ಟ್, ಚಾಂದ್‌ಪುರ (ಎಸ್‌ಓ), ಚಿಂಚೋಳಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ.
5	ವಿಕಾಟ್ ಸಾಗರ್ ಸಿಮೆಂಟ್ ಪ್ರೈವೇಟ್ ಲಿಮಿಟೆಡ್, ಚತ್ರಸಾಲ ಗ್ರಾಮ, ಚಿಂಚೋಳಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ.
6	ಜೆ.ಕೆ. ಸಿಮೆಂಟ್ ವರ್ಕ್ಸ್, ಮುದ್ದಾಪುರ ಗ್ರಾಮ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – 587 122.
7	ಹೈಡಲ್‌ಬರ್ಗ್ ಸಿಮೆಂಟ್ ಇಂಡಿಯಾ ಲಿಮಿಟೆಡ್, (ಹಿಂದೆ: ಮೈಸೂರು ಸಿಮೆಂಟ್ಸ್ ಲಿಮಿಟೆಡ್), ಅಮ್ಮಸಂದ್ರ ಪಿ.ಓ., ತುಮಕೂರು ಜಿಲ್ಲೆ – 572 211.
8	ದಾಲ್ಮಿಯಾ ಸಿಮೆಂಟ್ (ಭಾರತ) ಲಿ. , ಯಡವಾಡ ಗ್ರಾಮ, ಗೋಕಾಕ ತಾಲ್ಲೂಕು, ಬೆಳಗಾವಿ
